ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 27 ಮಂಗಳವಾರ 2022

₹4

ಸಂಪುಟ: 43 | ಸಂಚಿಕೆ: 250 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಮತ್ತು ಫೋಟೋಗೆ: news@mysurumithra.com   ಜಾಹೀರಾತು: ad@mysurumithra.com

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2473923/2473933 ಫ್ಯಾಕ್ಸ್ ನಂ.0821–2472797
ಇ–ಮೇಲ್ : mymuladmn@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಗುತ್ತಿಗೆ ಕಾರ್ಮಿಕರುಗಳನ್ನು ಒದಗಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **www.eproc.karnataka.gov.in** ನಲ್ಲಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ವಿವರ ಈ ಕೆಳಗಿನಂತಿದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	IFT No.1027: ADMN:Tender :2022	ಒಕ್ಕೂಟದ ಮೆಗಾ ಡೈರಿಯಲ್ಲಿ ಹಾಲಿನ ಪ್ಯಾಕೇಟ್‌ಗಳನ್ನು ರವಾನೆಗೊಳಿಸುವ ಕೆಲಸಗಳನ್ನು ದ್ವೈವಾರ್ಷಿಕ ಅವಧಿಗೆ ಮಾನವ ದಿನಗಳ ಆಧಾರದಲ್ಲಿ ನಿರ್ವಹಿಸಲು ಗುತ್ತಿಗೆ ಕಾರ್ಮಿಕರನ್ನು ಒದಗಿಸುವ ಸೇವಾ ಗುತ್ತಿಗೆ ಪಡೆಯಲು ಅರ್ಹ ಕಾರ್ಮಿಕ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.	23.01.2023 ಸಂಜೆ 5.00 ಗಂಟೆಯವರೆಗೆ
2	IFT No.1029: ADMN:Tender :2022	ಒಕ್ಕೂಟದ ಮೆಗಾ ಡೈರಿಯಲ್ಲಿ ಅಳವಡಿಸಿರುವ ಪ್ಯಾಕಿಂಗ್ ಯಂತ್ರಗಳ ಚಾಲನೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಕೆಲಸಗಳನ್ನು ದ್ವೈವಾರ್ಷಿಕ ಅವಧಿಗೆ ತುಂಡು ಗುತ್ತಿಗೆ / ಸೇವಾ ಗುತ್ತಿಗೆ ಪಡೆಯಲು ಅರ್ಹ ಕಾರ್ಮಿಕ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.	23.01.2023 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು (ಆಡಳಿತ / ಖರೀದಿ) ರವರನ್ನು ಮೊಬೈಲ್ ಸಂಖ್ಯೆ: 6366430803 ಮೂಲಕ ಸಂಪರ್ಕಿಸಬಹುದಾಗಿದೆ. ಸಹಿ/–,

ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,





ಮೈಸೂರು ಮಿತ್ರ ಮಂಗಳವಾರ 27 ಡಿಸೆಂಬರ್ 2022



ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಪುಣ್ಯಸ್ಮರಣೆ ಅಂಗವಾಗಿ ಮೈಸೂರಿನ ಗೋಕುಲಂನಲ್ಲಿರುವ ಆದಿತ್ಯ ಆಸ್ಪತ್ರೆಯ ಬಳಿ ನವೀಕೃತ ಬಸ್ ತಂಗುದಾಣವನ್ನು ಸಾರ್ವಜನಿಕರ ಉಪಯೋಗಕ್ಕೆ ಅರ್ಪಿಸಲಾಯಿತು. ಇದೇ ವೇಳೆ ಶಾಸಕ ಎಲ್.ನಾಗೇಂದ್ರ, ವಾಜಪೇಯಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ನಗರಪಾಲಿಕೆ ಸದಸ್ಯ ಚಿಕ್ಕವೆಂಕಟು, ಮಾಜಿ ಸದಸ್ಯ ಗಿರೀಶ್‌ಪ್ರಸಾದ್, ನಿತಿನ್, ದಿನೇಶ್‌ಗೌಡ, ಅಶೋಕ್, ಜಯಣ್ಣ, ಶ್ರೀನಿವಾಸ್, ನಾಗ, ರವಿಕುಮಾರ್, ಶಿವು, ಗಿರೀಶ್, ಬಾಬು, ಪುನೀತ್ ಮತ್ತಿತರಿದ್ದರು.



ಮೈಸೂರಿನ ಜೆಡಿಎಸ್ ಮುಖಂಡ ಎಸ್.ಪ್ರಕಾಶ್ ಪ್ರಿಯದರ್ಶನ್ ಸ್ನೇಹ ಬಳಗದ ವತಿಯಿಂದ ಸಿದ್ದಪ್ಪ ವೃತ್ತದ ಬಳಿಯ ಜೆಎಸ್‌ಎಸ್ ಸಂಸ್ಥೆಯ ಕ್ಯಾತನಹಳ್ಳಿ ಸಾಹುಕಾರ ಸಿದ್ದಲಿಂಗಯ್ಯನವರ ವೇದಶಾಸ್ತ್ರ ಜ್ಯೋತಿಷ್ಯ ವಿದ್ಯಾರ್ಥಿನಿಲಯದಲ್ಲಿ ಮಕ್ಕಳಿಗೆ ಹಣ್ಣು ಹಂಪಲು ವಿತರಿಸಿ, ಶತಕ ಸೇವಾ ಸಂಭ್ರಮ ಆಚರಿಸಲಾಯಿತು. ಎಸ್.ಪ್ರಕಾಶ್ ಪ್ರಿಯದರ್ಶನ್, ರುದ್ರಸ್ವಾಮಿ, ಸಾ.ರಾ.ನಂದೀಶ್, ಗಿರೀಶ್‌ಗೌಡ, ಸಂಜುಗೌಡ, ಮಲ್ಲಿಕಾರ್ಜುನಸ್ವಾಮಿ, ಪುರುಷೋತ್ತಮ್ ಚಿತ್ರದಲ್ಲಿದ್ದಾರೆ.



ಮಲಬಾರ್ ಗೋಲ್ಡ್ ಅಂಡ್ ಡೈಮಂಡ್‌ನ ಮೈಸೂರು ಶಾಖೆಯಲ್ಲಿ ಡಿ.24ರಿಂದ ಜ.1ರವರೆಗೆ 9 ದಿನಗಳ ಕಾಲ ಹೆರಿಟೇಜ್ ಜ್ಯುವೆಲ್ಲರಿ ಪ್ರದರ್ಶನ ಹಾಗೂ ಮಾರಾಟ ಕಾರ್ಯಕ್ರಮ ಆಯೋಜಿಸಲಾಗಿದೆ. ಶನಿವಾರ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅನೇಕ ವಿನ್ಯಾಸದ ಡಿವೈನ್, ಟೆಂಪಲ್ ಜ್ಯುವೆಲ್ಲರಿ, ಯತ್ನಿಕ್ಸ್ ಹಾಗೂ ಪೋಲ್ಕಿ ಡೈಮಂಡ್ ಪಾರಂಪರಿಕ ಶೈಲಿಯ ಚಿನ್ನ, ವಜ್ರಾಭರಣ ಪ್ರದರ್ಶನ ನಡೆಯಿತು. ಈ ವೇಳೆ ಶಾಖೆಯ ಅಸಿಸ್ಟೆಂಟ್ ಸ್ಟೋರ್ ಹೆಡ್ ಫಜಲು ರೆಹಮಾನ್, ರಿಷಿ ಕುಮಾರಿ, ಜಯಲಕ್ಷ್ಮಿ, ಭವ್ಯ, ಗಾಯತ್ರಿ ಜಗದೀಶ್ ಹಾಗೂ ಗ್ರಾಹಕರು, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಬಿ.ಸಿ.ಟ್ರಸ್ಟ್‌ನ ಕ್ಯಾಲೆಂಡರ್ ಬಿಡುಗಡೆ



ಮೈಸೂರು,ಡಿ.26(ಎಂಟಿವೈ)–ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಿ.ಸಿ. ಟ್ರಸ್ಟ್ ಹೊರ ತಂದಿರುವ ಹೊಸ ವರ್ಷದ ಡೈರಿಯನ್ನು ಬಿಡುಗಡೆ ಮಾಡಲಾಯಿತು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೋಜನೆಯ ನೂತನ ವರ್ಷದ ಡೈರಿಯನ್ನು, ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಬಿ.ಜಯರಾಂ ನೆಲ್ಲಿತ್ತಾಯ ಬಿಡುಗಡೆಗೊಳಿಸಿದರು. ಬಳಿಕ ಮಾತನಾಡಿದ ಅವರು, ಜಿಲ್ಲೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ 11ನೇ ವರ್ಷಕ್ಕೆ ಕಾಲಿಟ್ಟಿದೆ. ಇದರಲ್ಲಿ ಸುಮಾರು ಐದು ಸಾವಿರ ಕಾರ್ಯಕರ್ತರು ಕಾರ್ಯ ನಿರ್ವಹಿಸುತ್ತಿದ್ದಾರೆ. ತಾಲೂಕು ಯೋಜನಾಧಿಕಾರಿಗಳು ಹಾಗೂ ಗ್ರಾಮ ಮಟ್ಟದಲ್ಲಿನ ಕಾರ್ಯಕರ್ತರು ಸೇರಿದ್ದು, ಸುಮಾರು ಒಂಭತ್ತು ಲಕ್ಷ ಫಲಾನುಭವಿಗಳು, ಅಲ್ಲದೆ 1.15 ಲಕ್ಷ ಸದಸ್ಯರಿದ್ದಾರೆ. ಇವರ ಆರೋಗ್ಯಕ್ಕೆ ಸಂಬಂಧಿಸಿದ ಎರಡು ಕಾರ್ಯಕ್ರಮಗಳಿದ್ದು, ಗುರುತಿನ ಚೀಟಿ ಪಡೆದವರಿಗೆ ಟ್ರಸ್ಟ್ ಗುರುತಿಸಿದ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಒದಗಿಸಲಾಗುತ್ತಿದೆ. ನಿರ್ಗತಿಕರಿಗೆ ಐದು ನೂರರಿಂದ ಎರಡು ಸಾವಿರದವರೆಗೆ ಮಾಸಾಶನ, ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಇದಲ್ಲದೆ ದೇವಾಲಯ, ಕೆಎಂಎಫ್ ಕಟ್ಟಡಗಳಿಗೆ ನೆರವು ಸೇರಿದಂತೆ ಸಮಗ್ರ ಅಭಿವೃದ್ಧಿಯ ಕೆಲಸ ಕೈಗೊಳ್ಳಲಾಗುತ್ತಿದೆ. ಇದರೊಡನೆ ಅನಾಥ ಮಹಿಳೆಯರಿಗೆ ಒಂದು ಲಕ್ಷ ರೂ. ವೆಚ್ಚದಲ್ಲಿ ಮನೆ ನಿರ್ಮಿಸಿಕೊಡಲಾಗುತ್ತಿದೆ. ಸಂಸ್ಥೆ ನಡೆಸುತ್ತಿರುವ ಮದ್ಯವರ್ಜನ ಶಿಬಿರಗಳಲ್ಲಿ ನೂರಾರು ಮಂದಿ ಮದ್ಯ ತ್ಯಜಿಸಿದ್ದಾರೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಂದಿನಿ, ಪ್ರಸಾದ್, ಮಾಧವ್, ಎಂ. ಲಕ್ಷ್ಮಣ್, ಕುಸುಮಾ, ಶಶಿಕಲಾ ಉಪಸ್ಥಿತರಿದ್ದರು.

ಪಂಚಮಸಾಲಿ ಸಮುದಾಯ 2ಎಗೆ ಸೇರ್ಪಡೆಗೆ ಕಾಯಕ ಸಮಾಜಗಳ ಒಕ್ಕೂಟ ಆಕ್ಷೇಪ

ಹೊಸ ಪ್ರವರ್ಗ ಸೃಷ್ಟಿಸಿ ಶೈಕ್ಷಣಿಕ ಮೀಸಲಾತಿ ಕಲ್ಪಿಸಲು ಆಗ್ರಹ

ಮೈಸೂರು,ಡಿ.26(ಎಂಟಿವೈ)– ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗಕ್ಕೆ ಸೇರಿಸದೆ ಹೊಸ ಪ್ರವರ್ಗ ಸೃಷ್ಟಿಸಿ ಶೈಕ್ಷಣಿಕ ಮೀಸಲಾತಿ ನೀಡಲು ಕ್ರಮ ಕೈಗೊಳ್ಳುವಂತೆ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ.ಪುಟ್ಟಸಿದ್ಧಶೆಟ್ಟಿ ಆಗ್ರಹಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2'ಎ'ಗೆ ಸೇರಿಸುವಂತೆ ಒತ್ತಾಯಿಸಲಾಗುತ್ತಿದೆ. ಆದರೆ, ಇದಕ್ಕೆ ಹಿಂದುಳಿದ ವರ್ಗಗಳು ಆಕ್ಷೇಪಿಸುತ್ತಿದೆ. ಸಂಘರ್ಷ ತಪ್ಪಿಸಲು ಪರ್ಯಾಯ ಮಾರ್ಗ ಕಂಡು ಹಿಡಿಯುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಹೊಸ ಪ್ರವರ್ಗ ಸೃಷ್ಟಿಸಿ ಶೈಕ್ಷಣಿಕ ಮೀಸಲಾತಿ ನೀಡಲು ಪರಿಶೀಲಿಸುವುದು ಸೂಕ್ತ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ ಅವರು ಸಿಎಂ ಬೊಮ್ಮಾಯಿ ಅವರನ್ನು ಭೇಟಿ ಮಾಡಿ 'ಕುಲಶಾಸ್ತ್ರೀಯ ಅಧ್ಯಯನದ ಮಧ್ಯಂತರ ವರದಿ' ಸಲ್ಲಿಸಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಕುರಿತ ತೋಳ್ಬಲಗಳಿಗೆ ಮಣಿದು ದುರ್ಬಲ ಸಿಎಂ ಎನಿಸಿಕೊಳ್ಳಬಾರದು. ಕುಲಶಾಸ್ತ್ರೀಯ ವರದಿಯನ್ನು ಪಾಲಿಸಬೇಕೆಂದು ಒತ್ತಾಯಿಸಿದರು.

ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಿದಲ್ಲಿ ಇದೇ ಪ್ರವರ್ಗದಡಿ ಬರುವ ಇತರ ಸಮುದಾಯಗಳಿಂದ ಆಕ್ಷೇಪಣೆ ಬರುತ್ತದೆ. ಹೀಗಾಗಿ ಪ್ರತ್ಯೇಕ ದಾರಿ ಕಂಡುಕೊಳ್ಳುವಂತೆ ವರದಿಯಲ್ಲಿ ತಿಳಿಸಲಾಗಿದೆ. ಆದ್ದರಿಂದ ಪಂಚಮಸಾಲಿ ಹಾಗೂ ಮೇಲ್ವರ್ಗಗಳನ್ನು 2ಎ ಪ್ರವರ್ಗದಲ್ಲಿ ಸೇರಿಸಬಾರದು. ಈಗ ಅದರಲ್ಲಿರುವ ಶೇ. 15 ಮೀಸಲಾತಿಯನ್ನು ಶೇ. 27ಕ್ಕೆ ಹೆಚ್ಚಿಸಬೇಕು. ಒಮ್ಮೆ ಮೀಸಲಾತಿ ಲಾಭ ಪಡೆದವರನ್ನು ಆ ವ್ಯಾಪ್ತಿಯಿಂದ ಹೊರಗಿಡಬೇಕು, ಖಾಸಗಿ ವಲಯದಲ್ಲಿಯೂ ಮೀಸಲಾತಿ ಅನುಸರಿಸಿ ನೇಮಕ ಮಾಡಿಕೊಳ್ಳಬೇಕು. ರಾಜ್ಯದಲ್ಲಿ ಖಾಲಿ ಇರುವ 2,69,572 ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು. 195 ಜಾತಿಗಳಲ್ಲಿನ 2.35 ಕೋಟಿ ಕಾಯಕ ಸಮಾಜಗಳ ಅಭಿವೃದ್ಧಿಗೆ ಪ್ರಾಧಿಕಾರ ರಚಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಹಿಂದುಳಿದ ವರ್ಗಗಳ ಒಕ್ಕೂಟದ ಮುಖಂಡರಾದ ಎನ್.ಆರ್. ನಾಗೇಶ್, ಆರ್. ರಮೇಶ್ ಹಾಗೂ ಯೋಗೀಶ್ ಉಪ್ಪಾರ್ ಇದ್ದರು.

ಸಿದ್ದಲಿಂಗಪುರ ಜಿಪಂ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು 6 ಕೋಟಿ ವೆಚ್ಚದ

ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರಿಂದ ಚಾಲನೆ

ಬೆಲವತ್ತ ಗ್ರಾಮಸ್ಥರಿಂದ ಜಿಟಿಡಿ ಅವರಿಗೆ ಕ್ರೈನ್ ಮೂಲಕ ಬೃಹತ್ ಗಾತ್ರದ ಜೋಳದ ಹಾರ ಹಾಕಿ ಅದ್ದೂರಿ ಸ್ವಾಗತ



ಮೈಸೂರು, ಡಿ.26(ಆರ್‌ಕೆಬಿ)– ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಬೆಲವತ್ತ, ಸಿದ್ದಲಿಂಗಪುರ, ಲಕ್ಷ್ಮೀಪುರ, ನಾಗನಹಳ್ಳಿ ಮತ್ತು ಶ್ಯಾದನಹಳ್ಳಿ ಗ್ರಾಮಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಟಿ. ದೇವೇಗೌಡ ಸೋಮವಾರ ಚಾಲನೆ ನೀಡಿದರು.

ಬೆಲವತ್ತ ಗ್ರಾಮದಲ್ಲಿ ರೂ 1.50 ಕೋಟಿ ವೆಚ್ಚದಲ್ಲಿ ಒಳಚರಂಡಿ ಕಾಮಗಾರಿ, 1 ಕೋಟಿ ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ, ಸಿದ್ದಲಿಂಗಪುರ ಗ್ರಾಮದಲ್ಲಿ 1.50 ಕೋಟಿ ವೆಚ್ಚದ ರಸ್ತೆ ಮತ್ತು ಚರಂಡಿ ನಿರ್ಮಾಣ, ಲಕ್ಷ್ಮೀಪುರ ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಶಾಸಕರು ಚಾಲನೆ ನೀಡಿದರು.

ನಾಗನಹಳ್ಳಿ ಗ್ರಾಮದಲ್ಲಿ 60 ಲಕ್ಷ ರೂ. ವೆಚ್ಚದಲ್ಲಿ 5 ಶಾಲಾ ಕೊಠಡಿ ನಿರ್ಮಾಣ, 1 ಕೋಟಿ ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ, ಶ್ಯಾದನಹಳ್ಳಿ ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಚಾಲನೆ ನೀಡಿದರು.

ಕಾಮಗಾರಿ ಚಾಲನೆಗೆಂದು ಶ್ಯಾದನಹಳ್ಳಿ ಗ್ರಾಮಕ್ಕೆ ಆಗಮಿಸಿದ ಶಾಸಕ ಜಿ.ಟಿ.ದೇವೇಗೌಡರಿಗೆ ಕ್ರೈನ್‌ನಲ್ಲಿ ಬೃಹತ್ ಗಾತ್ರದ ಜೋಳದ ಹಾರ ಹಾಕುವ ಮೂಲಕ ಗ್ರಾಮಸ್ಥರು ಅದ್ದೂರಿ ಸ್ವಾಗತ ಕೋರಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ದಿನೇಶ್, ಮುಖಂಡರಾದ ಅರ್ಕೇಶ್ವರ್, ಬೆಲವತ್ತ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಮನುಸ್ಮೃತಿ ದಹನ ಚಳವಳಿ



ಮೈಸೂರು,ಡಿ.26(ಪಿಎಂ)–ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ವತಿಯಿಂದ ಭಾನುವಾರ ಮನುಸ್ಮೃತಿ ಸುಡುವ ಚಳುವಳಿ ನಡೆಸಲಾಯಿತು.

ಮೈಸೂರಿನ ಪುರಭವನ ಆವರಣದ ಡಾ.ಅಂಬೇಡ್ಕರ್ ಪ್ರತಿಮೆ ಬಳಿ ಜಮಾಯಿಸಿದ ಚಳುವಳಿಗಾರರು, ಮನುಸ್ಮೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. 'ಬನ್ನಿ ಸಂವಿಧಾನ ಎದೆಗಪ್ಪಿಕೊಳ್ಳೋಣ–ಮನುಸ್ಮೃತಿಗೆ ಕೊಳ್ಳಿ ಇಡೋಣ' ಶೀರ್ಷಿಕೆಯಡಿ ನಡೆದ ಚಳವಳಿಯಲ್ಲಿ ಅಸಮಾನತೆ ವಿರುದ್ಧ ಚಳವಳಿಗಾರರು ಆಕ್ರೋಶ ವ್ಯಕ್ತಪಡಿಸಿದರು.

ಋಗ್ವೇದದ ಅಂತ್ಯ ಭಾಗಕ್ಕೆ ಸೇರ್ಪಡೆಯಾದ 'ಪುರುಷಸೂಕ್ತಿ' ಎಂಬ ವರ್ಣಾಶ್ರಮ ಪದ್ಧತಿಗೆ ಸಮರ್ಥನೆ ನೀಡಿದ ಗ್ರಂಥಕ್ಕೆ ಮುಂದುವರೆದ ಭಾಗವಾಗಿ ಮನುಸ್ಮೃತಿಯೂ ಸೇರಿತು. ಸಾವಿರಾರು ವರ್ಷಗಳಿಂದ ಭಾರತೀಯ ಸಮಾಜದ ಮೇಲೆ ಈ ಮನುಸ್ಮೃತಿ ಬಲವಂತವಾಗಿ ಹೇರಿದ ಅಮಾನವೀಯ ಅಸಮಾನತೆಯ ನೀತಿ ಸಂಹಿತೆಗಳು ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಈ ದೇಶದ ಬಹುಸಂಖ್ಯಾತ ದುಡಿಯುವ ವರ್ಗಗಳ ಶೋಷಣೆಗೆ ಕಾರಣವಾಯಿತು ಎಂದು ಕಿಡಿಕಾರಿದರು.

ಡಾ.ಅಂಬೇಡ್ಕರ್ ಅವರು 1927ರ ಡಿ.25ರಂದು ಮಹಡ್‌ನಲ್ಲಿ ಅಸಮಾನತೆ ಪ್ರತಿಪಾದಿಸುವ ಮನುಸ್ಮೃತಿ ಸುಟ್ಟು ಹಾಕಿದರು. ಅಂದಿನಂತೆ ಈಗಲೂ ಅಸ್ಪೃಶ್ಯತೆ ಆಚರಣೆಯು ಪ್ರಬಲಗೊಂಡು ವಿಜೃಂಭಿಸುತ್ತಿದೆ. ಆ ಮೂಲಕ ಮನುಸ್ಮೃತಿ ಆಣತಿಯಂತೆ ಆಳ್ವಿಕೆ ನಡೆಸಲು ಎಲ್ಲಾ ಕುತಂತ್ರಗಳನ್ನು ನಡೆಸುತ್ತಾ ಸಮಾಜ ವಿಭಜನೆಗೆ ಕುಮ್ಮಕ್ಕು ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರ ಹೋರಾಟ ಮುನ್ನಡೆಸಲು ಹಾಗೂ ಪ್ರಸ್ತುತದ ಅಸಮಾನತೆಯ ವಿದ್ಯಮಾನಗಳಿಗೆ ಪ್ರತ್ಯುತ್ತರ ನೀಡಲು ಈ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಚಳವಳಿಗಾರರಾದ ರತಿ ರಾವ್, ಬೆಟ್ಟಯ್ಯ ಕೋಟೆ, ಆಲಗೂಡು ಶಿವಕುಮಾರ್, ಮಲ್ಲಳ್ಳಿ ನಾರಾಯಣ, ಕಲ್ಲಹಳ್ಳಿ ಕುಮಾರ್, ಮಲ್ಲೇಶ್, ಬಸವಣ್ಣ ಸೋಮಣ್ಣ, ಮಂಜು, ಸತೀಶ್, ರಮೇಶ್ ಸೇರಿದಂತೆ ನೂರಾರು ಮಂದಿ ಪಾಲ್ಗೊಂಡಿದ್ದರು.

ಡ್ರಗ್ಸ್ ಮಾರುತ್ತಿದ್ದ ಕಾನೂನು ವಿದ್ಯಾರ್ಥಿ, ವಕೀಲ ಬಂಧನ

ಮೈಸೂರು, ಡಿ.26(ಆರ್‌ಕೆ)– ಅಕ್ರಮವಾಗಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ, ಕಾನೂನು ಕಾಲೇಜು ವಿದ್ಯಾರ್ಥಿ ಹಾಗೂ ವಕೀಲನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಮೈಸೂರಿನ ಪ್ರತಿಷ್ಠಿತ ಕಾನೂನು ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿ ಹಾಗೂ ಮತ್ತೋರ್ವ ವಕೀಲ ವೃತ್ತಿ ಮಾಡುತ್ತಿರುವ ವ್ಯಕ್ತಿ ಆರೋಪಿಗಳಾಗಿದ್ದು, ಬಂಧಿತರಿಂದ 31 ಗ್ರಾಂ ಎಂಡಿಎಂಎ, ಏಸಿಎಸ್‌ಟಿಎಸ್‌ವೈ ಟ್ಯಾಬ್ಲೆಟ್‌ಗಳು ಎಲ್‌ಎಸ್‌ಡಿ ಡ್ರಗ್ಸ್, 5,000 ರೂ. ನಗದು, 2 ಮೊಬೈಲ್‌ಗಳು ಹಾಗೂ 1 ಬೈಕ್ ಅನ್ನು ವಶಪಡಿಸಿಕೊಳ್ಳಲಾಗಿದೆ.



ಬಾತ್ಮೀದಾರರಿಂದ ದೊರೆತ ಖಚಿತ ಮಾಹಿತಿ ಮೇರೆಗೆ ಡಿಸೆಂಬರ್ 23 ರಂದು ಕುವೆಂಪುನಗರ 'ಕೆ' ಬ್ಲಾಕ್, ಆದಿಚುಂಚನಗಿರಿಯಲ್ಲಿ ದಾಳಿ ನಡೆಸಿದಾಗ ಅಲ್ಲಿ ಬುಲೆಟ್ ಬೈಕ್ ನಿಲ್ಲಿಸಿಕೊಂಡು ಗಿರಾಕಿಗಳನ್ನು ಆಕರ್ಷಿಸಿ ಅಕ್ರಮವಾಗಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ, ರಾಣೆಬೆನ್ನೂರಿನ ಶಬರಿನಾಥ್ ಅರವಿಂದ ಪಾಟೀಲ್ (26) ಹಾಗೂ ಮೈಸೂರು ನಿವಾಸಿ ಬೆಂಗಳೂರಿನಲ್ಲಿ ವಕೀಲ ವೃತ್ತಿ ಮಾಡುತ್ತಿರುವ ಎ.ಎಂ.ತಮ್ಮಯ್ಯ (25)ನನ್ನು ಮಾಲು ಸಮೇತ ಬಂಧಿಸುವಲ್ಲಿ ಸಿಸಿಬಿ ಪೊಲೀಸರು ಯಶಸ್ವಿಯಾದರು. ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ ಹಾಗೂ ಸಿಸಿಬಿ ಘಟಕದ ಎಸಿಪಿ ಸಿ.ಕೆ. ಅಶ್ವಥ್ ನಾರಾಯಣ ಅವರ ಮಾರ್ಗದರ್ಶನ ಹಾಗೂ ಇನ್‌ಸ್ಪೆಕ್ಟರ್ ಎ.ಮಲ್ಲೇಶ್ ನೇತೃತ್ವದಲ್ಲಿ ನಡೆದ ದಾಳಿಯಲ್ಲಿ ಸಬ್‌ಇನ್‌ಸ್ಪೆಕ್ಟರ್ ಪ್ರತಿಭಾ ಜಂಗವಾಡ, ಸಿಬ್ಬಂದಿಗಳಾದ ಎಂ. ಅನಿಲ್, ಸುಭಾನಲ್ಲಾ ಬಾಲ್‌ದಾರ್, ಗಣೇಶ್, ಶ್ರೀನಿವಾಸ್ ಪ್ರಸಾದ್, ಜೋಸೆಫ್ ನರೋನಾ, ರಾದೇಶ, ಶ್ರೀನಿವಾಸ್, ಅರುಣ್‌ಕುಮಾರ್, ಮಮತ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.



ಭಾನುವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ ಅವರಿಗೆ ನಗರಪಾಲಿಕೆ ಮಾಜಿ ಸದಸ್ಯ ಸುನಂದಕುಮಾರ್, ಎನ್‌ಎಸ್‌ಯುಐ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಾಗೇಶ್ ಕರಿಯಪ್ಪ, ನಗರ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಎನ್.ಆರ್.ನಾಗೇಶ, ಪಕ್ಷದ ಕಾರ್ಯದರ್ಶಿ (ಎಸ್‌ಸಿ) ರಾಜಶೇಖರ್, ಮುಖಂಡರಾದ ಪ್ರವೀಣ್‌ಕುಮಾರ್, ಉಪ್ಪಾರ್ ಸಮಾಜದ ಜಿಲ್ಲಾ ಅಧ್ಯಕ್ಷ ಯೋಗೇಶ್ ಉಪ್ಪಾರ್ ಅಭಿನಂದಿಸಿ, ಶುಭ ಕೋರಿದರು.



ಮೈಸೂರಿನ ಇಂದಿರಾ ಗಾಂಧಿ ಕಾಂಗ್ರೆಸ್ ಭವನದಲ್ಲಿ ಭಾನುವಾರ ಮೈಸೂರು ನಗರ ಅಧ್ಯಕ್ಷ ಆರ್.ಮೂರ್ತಿ ಅವರ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಮಾಜಿ ಶಾಸಕ ವಾಸು, ಪ್ರಧಾನ ಕಾರ್ಯದರ್ಶಿ ಸಿ.ಎಸ್.ರಘು, ಮಾಜಿ ನಗರ ಪಾಲಿಕೆ ಸದಸ್ಯ ರಘುರಾಜೇ ಅರಸು, ಕಾಂಗ್ರೆಸ್ ದಕ್ಷಿಣ ಪದವೀಧರರ ಕ್ಷೇತ್ರದ ಅಧ್ಯಕ್ಷ ರಾಘವೇಂದ್ರ ಅವರು ಮೂರ್ತಿ ಅವರನ್ನು ಅಭಿನಂದಿಸಿ, ಶುಭ ಕೋರಿದರು. ಮುಖಂಡರಾದ ನಾಗಭೂಷಣ ತಿವಾರಿ, ಶಿವಣ್ಣ, ಅರವಿಂದ್, ಶಾರದಾ ಸಂಪತ್, ಆರ್.ಎಚ್.ಕುಮಾರ್, ಚಂದ್ರು, ಅಶೋಕುಮಾರ್, ಅಬ್ಬುಕ್ಕರ್, ಶಿವಮಲ್ಲು, ಈಶ್ವರ ಚಕ್ಕಡಿ ಇತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಮೈಸೂರು ಜಿಲ್ಲಾ ಅಥ್ಲೆಟಿಕ್ ಅಸೋಸಿಯೇಷನ್:** ಮೈಸೂರು ಡಿಸ್ಟ್ರಿಕ್ಟ್ ಟ್ರ್ಯಾಕ್ ಅಂಡ್ ಫೀಲ್ಡ್ ಮೀಟ್–2022, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಸ್.ಸೋಮಶೇಖರ್, ಉದ್ಘಾಟನೆ: ವಿದ್ಯಾವಿಕಾಸ ಎಜುಕೇಷನಲ್ ಟ್ರಸ್ಟ್ ಕಾರ್ಯದರ್ಶಿ ಕವೀಶ್‌ಗೌಡ, ಮುಖ್ಯ ಅತಿಥಿಗಳು: ಮಹಾಲಕ್ಷ್ಮಿ ಸ್ವೀಟ್ಸ್ ಮಾಲೀಕ ಶಿವಕುಮಾರ್, ಟಿ.ಆರ್.ರೋಹಿತ್ ಗಂಗಾಧರಗೌಡ, ಕೆ.ಆರ್. ರಾಮಚಂದ್ರೇಗೌಡ, ಬಿ.ಎಲ್.ಜಗದೀಶ್, ಅಭಿಲಾಷ್ ನಾಯರ್, ಬಿ.ವಿ.ಕೌಶಿಕ್, ಸಿ.ಕೆ. ಮುರಳೀಧರನ್, ಸಂಪಂಗಿ ರಾಮಶೆಟ್ಟಿ, ಚೈನ್ ಸಿಂಗ್ ರಾಜ್ ಪುರೋಹಿತ್, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಬೆಳಗ್ಗೆ 8.30ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು:** ಕೌದಿ ಕಲೆ ನರಸಿಮುಲು ಪಿ.ಬ್ಯಾಗೇರಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10ರಿಂದ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ, ರಾಘವೇಂದ್ರನಗರ, ಬೆಳಗ್ಗೆ.

■ **ವಿವೇಕಾನಂದ ರಾಕ್ ಮೆಮೋರಿಯಲ್, ವಿವೇಕಾನಂದ ಕೇಂದ್ರ :** ಸಮರ್ಥ ಭಾರತ ಪರ್ವ ಉತ್ಸವ ಪ್ರಯುಕ್ತ ದೇವರನಾಮ, ಸ್ಥಳ: ವಿವೇಕಾನಂದ ಕೇಂದ್ರ, ಪಂಪಾಪತಿ ರಸ್ತೆ, ಸಂಜೆ 4ಕ್ಕೆ.

■ **ಮೈಸೂರು ಅರಮನೆ ಮಂಡಳಿ:** ಫಲಪುಷ್ಪ ಪ್ರದರ್ಶನ, ಸ್ಥಳ: ಮೈಸೂರು ಅರಮನೆ ಆವರಣ, ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ.

■ **ಸುಪ್ರಭ ನಾಗೇಶ್‌ರಾವ್ ಸೇವಾ ಪ್ರತಿಷ್ಠಾನ:** ಏಕ ವ್ಯಕ್ತಿಯಿಂದ ವಿಶ್ವಶಾಂತಿಗಾಗಿ ವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ : 622, 2ನೇ ಮೇನ್, ಶಾರದಾದೇವಿನಗರ, ಬೆಳಗ್ಗೆ

■ **ಮೈಸೂರು ವಿವಿ, ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ:** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ಭಾಷಣ: ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು, ಅಧ್ಯಕ್ಷತೆ: ಮಹಾವಿದ್ಯಾಲಯ ಪ್ರಾಂಶುಪಾಲ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರಿಂದ ಮಾಸ್ತಿ ಅವರ ಸಣ್ಣ ಕಥೆಗಳು ಕುರಿತು ಉಪನ್ಯಾಸ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀ ಬೃಹಸ್ಪತಾಚಾರ್ಯ ವಿದ್ಯಾಸಂಸ್ಥೆ :** ವಾರ್ಷಿಕೋತ್ಸವ, ಅಧ್ಯಕ್ಷತೆ: ಸಂಸ್ಥೆ ಟ್ರಸ್ಟಿ ಡಾ. ಯು.ಜಿ. ಶೆಣೈ, ಸ್ಥಳ: ಶಾಲೆ ಆವರಣ, ಶ್ರೀರಾಂಪುರ 2ನೇ ಹಂತ, ಮಧ್ಯಾಹ್ನ 3.30ಕ್ಕೆ.



ಇಂದಿನ ಪಂಚಾಂಗ

27.12.2022 ಮಂಗಳವಾರ, ಮಳೆ ನಕ್ಷತ್ರ: ಮೂಲ, 16.12.2022ರಿಂದ 29.12.2022 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ಥಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ವನಿತಾ ಸದನ :** ವನಿತಾ ಸದನದ ವಾರ್ಷಿಕ ಸಮಾರಂಭ, ಅಧ್ಯಕ್ಷತೆ: ವನಿತಾ ಸದನದ ಅಧ್ಯಕ್ಷೆ ಎನ್.ಭಾರತಿ, ಮುಖ್ಯ ಅತಿಥಿಗಳು: ಶ್ರೀಮತಿ ಅನಿತಾ ವೆಂಕಟೇಶ್, ಸ್ಥಳ: ವನಿತಾ ಸದನದ ಆವರಣ, ಸಂಜೆ 4.30ಕ್ಕೆ.

■ **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ:** ಡಾ.ಬಿ.ಆರ್.ಅಂಬೇಡ್ಕರ್‌ರವರ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಸಾನ್ನಿಧ್ಯ: ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಅಧ್ಯಕ್ಷತೆ : ವಿಭಾಗೀಯ ನಿಯಂತ್ರಣಾಧಿಕಾರಿ ಆರ್.ಅಶೋಕ್‌ಕುಮಾರ್, ಮುಖ್ಯ ಅತಿಥಿಗಳು: ಮಾಜಿ ಮೇಯರ್ ಪುರುಷೋತ್ತಮ್, ಎಂ.ಮಲ್ಲಿಕಾರ್ಜುನ ಮೂರ್ತಿ, ಸತ್ಯರಾಜು, ಸ್ಥಳ: ವಿಶ್ವಮೈತ್ರಿ ಬುದ್ಧವಿಹಾರ, ಸಂಜೆ 4.30ಕ್ಕೆ.

■ **ವಿಶ್ವಪ್ರಜ್ಞ ನರ್ಸರಿ, ಪ್ರೈಮರಿ, ಪ್ರೌಢಶಾಲೆ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜು:** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ, ಚಲನಚಿತ್ರ ನಟ ಮಂಡ್ಯ ರಮೇಶ್, ಅಧ್ಯಕ್ಷತೆ: ವಿಪಿಇಐ ಉಪಾಧ್ಯಕ್ಷ ವೈ.ಎನ್. ಶಂಕರೇಗೌಡ, ಸ್ಥಳ: ಪಿಕೆವಿ ಆಚಾರ್ಯ ಸಭಾ ಭವನ, ಕನಕದಾಸನಗರ, ಸಂಜೆ 5ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ:** ಪದ್ಮ ಪುರಾಣ ಪ್ರವಚನ. ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ. ಸ್ಥಳ: ರಾಘವೇಂದ್ರ ಸ್ವಾಮಿ ಮಠ. ಜಯಲಕ್ಷ್ಮೀಪುರಂ ಸಂಜೆ 5ಕ್ಕೆ.

■ **ಶ್ರೀ ಆಂಡಾಳ್ ಮಂದಿರಂ:** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವ ನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ. ಸ್ಥಳ: ಆಂಡಾಳ್ ಮಂದಿರಂ ಆವರಣ. ವಿವಿ ಮೊಹಲ್ಲಾ, ಸಂಜೆ 6 ರಿಂದ 7.30ರವರೆಗೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ:** ವಿದುಷಿ ಬಿ.ಕೆ. ಸೀತಾಲಕ್ಷ್ಮಿ ಅವರಿಂದ ತಿರುಪ್ಪಾವೈ ಪ್ರವಚನ. ಸ್ಥಳ: ದೇವಸ್ಥಾನ ಆವರಣ, ತ್ಯಾಗರಾಜ ರಸ್ತೆ, ಸಂಜೆ 6ಕ್ಕೆ.

■ **ರಂಗಾಂತರಂಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು :** ನಾಟಕ ಮತ್ತು ಸಂಗೀತ ಕಾರ್ಯಕ್ರಮ, ಉದ್ಘಾಟನೆ: ಸಿಇಓ ಬಿ.ಆರ್. ಪೂರ್ಣಿಮಾ, ಅಧ್ಯಕ್ಷತೆ: ಮೇಯರ್ ಶಿವಕುಮಾರ್, ಉಪಸ್ಥಿತರು : ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಜಿ.ಆರ್. ಮಹೇಶ್, ಸ್ಥಳ: ಅರಸು ವೇದಿಕೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್.ವನಂ:** ಡಾ.ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಡಾ.ಕಮಲರಾಮನ್ ಅವರ ಮಂದಿರ, ಅಂಬೇಡ್ಕರ್ ರಸ್ತೆ, ಸಂಜೆ 6.15ರಿಂದ.

■ **ಶ್ರೀ ಮಹಾಜನಸಭಾ:** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಶ್ರೀ ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಕಾಂತರಾಜ ಅರಸು ರಸ್ತೆ, ಸಂಜೆ 6.15ರಿಂದ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಯುವ ಸಂಗೀತೋತ್ಸವ, ಸಂಜೆ 6ಕ್ಕೆ ವಿದ್ವಾನ್ ಕೇಶವ ಮೋಹನ್‌ಕುಮಾರ್ ಅವರಿಂದ ಪಿಟೀಲು ವಾದನ, ವಿದ್ವಾನ್ ವಿಕ್ರಂ ಭಾರದ್ವಾಜ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟ, ಸಂಜೆ 7.30ಕ್ಕೆ ವಿದುಷಿ ಹರಿಣಿ ರಮೇಶ್ ಅವರಿಂದ ಗಾಯನ, ವಿದ್ವಾನ್ ಕೃತಿಕ್ ಕೌಶಿಕ್–ಪಿಟೀಲು, ವಿದ್ವಾನ್ ವಿಕ್ರಂ ಭಾರದ್ವಾಜ್–ಮೃದಂಗ, ಸ್ಥಳ: ಸಂಗೀತ ಕಲಾನಿಧಿ ಮೈಸೂರು ಕೆ. ವಾಸುದೇವಾಚಾರ್ಯ ಕಲಾಭವನ.

■ **ಭಾರತೀಯ ನೃತ್ಯ ಪರಿಷತ್:** ನಾಟ್ಯಾಚಾರ್ಯ ಎಂ.ವಿಷ್ಣುದಾಸ್ ಮೆಮೋರಿಯಲ್ 32ನೇ ನೃತ್ಯೋತ್ಸವ, ಸಭಾ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಉಪ ತಹಸೀಲ್ದಾರ್ ರಾಜೇಶ್, ಅಧ್ಯಕ್ಷತೆ: ಭಾರತೀಯ ನೃತ್ಯ ಕಲಾ ಪರಿಷತ್ ಕಾರ್ಯದರ್ಶಿ ವಿದುಷಿ ಡಾ.ಕುಮುದಿನಿ ಅಜ್ಜಿ, ಸಂಜೆ 6ರಿಂದ ವಿದುಷಿ ಗೀತಾ ಸರಳಾಯ ಮತ್ತು ವಿದುಷಿ ರಶ್ಮಿ ಚಿದಾನಂದ್ ಅವರಿಂದ ಭರತನಾಟ್ಯ, ಸಂಜೆ 7.45ರಿಂದ ಮೈಸೂರಿನ ಕಲಾರ್ಪಣಂ ನೃತ್ಯ ತಂಡದಿಂದ ಶ್ರೀ ಕೃಷ್ಣಲೀಲಾಮೃತ ನೃತ್ಯ ನಾಟಕ ಪ್ರದರ್ಶನ, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ.

■ **ನಾದರಂಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ನಾಟಕೋತ್ಸವ, ಆಶಯ ನುಡಿ : ಮಹಾರಾಜ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎನ್. ಉದಯಶಂಕರ್, ನಾದರಂಗ ತಂಡದಿಂದ ರಂಗಗೀತೆಗಳು ಹಾಗೂ ರಂಗಾನಂದ ಕಲಾ ಸಂಘದಿಂದ ಕಾಕೋಳು ಸರೋಜರಾವ್ ವಿರಚಿತ ಶ್ರೀ ಕೃಷ್ಣದೇವರಾಯ ಐತಿಹಾಸಿಕ ನಾಟಕ ಪ್ರದರ್ಶನ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಸಂಜೆ 6ಕ್ಕೆ.

■ **ಕಲಾ ಸಂದೇಶ ಪ್ರತಿಷ್ಠಾನ, ಬ್ರಹ್ಮವಿದ್ಯಾ, ವೀಣಾ ವಿಶ್ವೇಶ್ವರನ್ ಅಂತಾರಾಷ್ಟ್ರೀಯ ಪ್ರತಿಷ್ಠಾನ:** ಅಭಿನಂದನೆ–ಅಭಿವಂದನೆ ಕಾರ್ಯಕ್ರಮ, ಅಧ್ಯಕ್ಷತೆ: ವೀಣಾ ವಿದ್ವಾಂಸ ಆರ್.ವಿಶ್ವೇಶ್ವರನ್, ವಿಶೇಷ ಆಹ್ವಾನಿತರು: ಸಂಗೀತ ವಿದ್ವಾಂಸರಾದ ವಿದುಷಿ ಡಾ.ನಾಗಮಣಿ ಶ್ರೀನಾಥ್, ನಂತರ ಡಾ. ವಸುಂಧರಾ ದೊರೆಸ್ವಾಮಿ ಅವರಿಂದ ಭರತನಾಟ್ಯ ಕಾರ್ಯಕ್ರಮ, ಸಂದೇಶ್ ಭಾರ್ಗವ್–ನಟುವಾಂಗ, ವಿದ್ವಾನ್ ನಂದಕುಮಾರ್ ಉನ್ನಿಕೃಷ್ಣನ್–ಗಾಯನ, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ರಾಕೇಶ್– ಕೊಳಲು, ಸ್ಥಳ: ರಮಾ ಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6 ರಿಂದ.

ಕಂಚಮಳ್ಳಿಯಲ್ಲಿಂದು, ಹೆಚ್.ಡಿ. ಕೋಟೆ ತಾ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಪದವಿಪೂರ್ವ ಕಾಲೇಜು :** ಎನ್‌ಎಸ್‌ಎಸ್ ವಾರ್ಷಿಕ ಶಿಬಿರ, ಬೆಳಗ್ಗೆ 6.30ಕ್ಕೆ ಕೆ.ಎಂ. ಮಹದೇವಪ್ಪ ಅವರಿಂದ ಧ್ವಜಾರೋಹಣ, ಸಂಜೆ 4.30ಕ್ಕೆ ಕಾರ್ಯಕ್ರಮ, ಅಧ್ಯಕ್ಷತೆ : ಮುಖ್ಯೋಪಾಧ್ಯಾಯ ಡಿ. ಸುರೇಶ್, ಮಲಿಕ್ ಜಾನ್ ಎಂ. ಜಮಾದಾರ್ ಮತ್ತು ಡಾ. ಪೂರ್ಣಾನಂದ ಅವರಿಂದ ಉಪನ್ಯಾಸ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ.ಟಿ.ಎಸ್.ಗೋಪಾಲ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಜಿ.ಪುಷ್ಪಲತಾ, ಸಿ. ವಿಶ್ವನಾಥ್, ವ್ಯಾಖ್ಯಾನ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿ ಪ್ರಸ್ತುತಿ–ಉಮೇಶ್, 8.30 "ಉಲಿ ಉಯ್ಯಾಲೆ" ಸರಣಿಯ 9ನೇ ಕಾರ್ಯಕ್ರಮ–ಜಾನಪದ ಸೃಜನಶೀಲತೆ, ಲೇಖನ–ಡಾ. ಸಂಧ್ಯಾ ರೆಡ್ಡಿ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.00 ಅವಧರಿಸು ಬಾ ಅಮರನಾರೇಯಣ–ಕಾರ್ಯಕ್ರಮ ಸರಣಿ, ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ– ಟಿ.ಎಸ್.ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ–ಡಾ. ಎನ್.ರಘು ಮಧ್ಯಾಹ್ನ: 12.30 ದೇವರನಾಮ–ನರಸಿಂಹನಾಯಕ್ ಮತ್ತು ಬಿ.ಆರ್.ಛಾಯಾ, ಅನಂತ ಕುಲಕರ್ಣಿ, 12.45 ಚಳಿಗೆ ಬಳಲಿದ ಕವಿಗಳು–ಮಾತನಾಡುತ್ತಾರೆ ಡಾ.ಮಾಲತಿ ಕೆ., 1.20 ಭಾವಗೀತೆಗಳು, 3.00 ವಿ.ವಿ.ಸುಬ್ರಮಣ್ಯಂ–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ "ಸತ್ಸಂಗದ ಮಹಿಮೆ", ಪ್ರಸ್ತುತಿ– ವಿದ್ವಾನ್ ಭದ್ರಗಿರಿ ಅಚ್ಯುತದಾಸರು 6.50 ಕೃಷಿರಂಗ–ಕಿಸಾನ್ ವಾಣಿ– ಸಮಗ್ರ ಕೃಷಿಯಲ್ಲಿನ ಅನುಭವ ಕುರಿತು ಸಿದ್ದೇಗೌಡ ಅವರೊಡನೆ ಸಂದರ್ಶನ, 9.15 ಯಕ್ಷಗಾನದ ಹಾಡುಗಳು–ಎಂ. ದಿನೇಶ್ ಅಮ್ಮಣ್ಣಾಯ, 9.30 ಎ.ಎನ್. ಕಿಶನ್ – ವೀಣಾವಾದನ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಡಿಸೆಂಬರ್ 27 ಮಂಗಳವಾರ 2022

ಸಂಪುಟ: 43 | ಸಂಚಿಕೆ: 250 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಆರು ಖಾಸಗಿ ವಿವಿ ಸ್ಥಾಪನೆಗೆ ಸಂಪುಟ ಅಸ್ತು



ಬೆಂಗಳೂರು, ಡಿ. 26(ಕೆಎಂಶಿ)– ರಾಜ್ಯದಲ್ಲಿ 6 ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಸರ್ಕಾರ ಇಂದಿಲ್ಲಿ ಅನುಮತಿ ನೀಡಿದೆ. ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ್ ನಾರಾಯಣ, ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆಯ ಮಸೂದೆಗಳಿಗೆ ಸಭೆ ಅಂಗೀಕಾರ ನೀಡಿದೆ. ರಾಜ್ಯ ಒಕ್ಕಲಿಗರ ಸಂಘದ ವಿಶ್ವವಿದ್ಯಾಲಯ, ದಾವಣಗೆರೆಯಲ್ಲಿ ಜಿಎಂ ವಿಶ್ವವಿದ್ಯಾಲಯ, ಬೆಂಗಳೂರಿನ ಸಪ್ತಗಿರಿ, ಟಿ–ಜಾನ್ ಹಾಗೂ ಬಳ್ಳಾರಿಯ ಕಿಷ್ಕಿಂದಾ ಶಿಕ್ಷಣ ಸಂಸ್ಥೆಗಳನ್ನು ವಿಶ್ವವಿದ್ಯಾಲಯಗಳಾಗಿ ಉನ್ನತೀಕರಿಸುವ ಮಸೂದೆಗೆ ಅನುಮತಿ ನೀಡಲಾಗಿದೆ ಎಂದರು. ಇನ್ನು ಮುಂದೆ ಯಾವುದೇ ಖಾಸಗಿ ವ್ಯಕ್ತಿ ಕಟ್ಟಡ ನಿರ್ಮಾಣ ಮಾಡುವ ಸಂದರ್ಭದಲ್ಲಿ ಅಗ್ನಿ ಶಾಮಕ ಇಲಾಖೆಯ ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯ ಎಂದು ತಿಳಿಸಿದರು.

ಚೀನಾದಿಂದ ಬೆಂಗಳೂರಿಗೆ ಬಂದ ವ್ಯಕ್ತಿಯಲ್ಲಿ ಕೊರೊನಾ ಸೋಂಕು: ಮತ್ತಷ್ಟು ಆತಂಕ

ಬೆಂಗಳೂರು: ದೇಶದಲ್ಲಿ ಕೊರೊನಾ ರೂಪಾಂತರಿ ಬಿಎಫ್.7 ಪತ್ತೆ ಹಿನ್ನೆಲೆಯಲ್ಲಿ ಬೆಂಗಳೂರಲ್ಲಿ ವಿದೇಶಗಳಿಂದ ಬರುತ್ತಿರುವವರ ಮೇಲೆ ಹದ್ದಿನಕಣ್ಣು ಇಡಲಾಗಿದೆ. ಈ ಬೆಳವಣಿಗೆ ನಡುವಲ್ಲೇ ಚೀನಾದಿಂದ ಬೆಂಗಳೂರಿಗೆ ಬಂದಿದ್ದ ವ್ಯಕ್ತಿಯೊಬ್ಬರಲ್ಲಿ ಕೊರೊನಾ ಸೋಂಕು ಪತ್ತೆಯಾಗಿದ್ದು, ಇದು ಆತಂಕವನ್ನು ಮತ್ತಷ್ಟು ಹೆಚ್ಚಾಗುವಂತೆ ಮಾಡಿದೆ.

ನಿನ್ನೆ ಚೀನಾದಿಂದ ಬೆಂಗಳೂರಿಗೆ ಬಂದಿದ್ದ 35 ವರ್ಷದ ವ್ಯಕ್ತಿಯನ್ನು ಕೋವಿಡ್ ಪರೀಕ್ಷೆಗೊಳಪಡಿಸಲಾಗಿತ್ತು. ಪರೀಕ್ಷೆ ವೇಳೆ ಕೊರೊನಾ ಪಾಸಿಟಿವ್ ಇರುವುದು ಕಂಡು ಬಂದಿದೆ. ಸೋಂಕು ಪತ್ತೆಯಾದ ಹಿನ್ನೆಲೆಯಲ್ಲಿ ವ್ಯಕ್ತಿಯನ್ನು ಕೂಡಲೇ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಐಸೋಲೇಷನ್‌ಗೆ ಒಳಪಡಿಸಲಾಗಿದೆ. ಇದೀಗ ವ್ಯಕ್ತಿಯಲ್ಲಿ ಪತ್ತೆಯಾಗಿರುವುದು ಕೊರೊನಾ ರೂಪಾಂತರಿ ಬಿಎಫ್7 ಅಥವಾ ಕೇವಲ ಕೋವಿಡ್ ಸೋಂಕೇ ಎಂಬುದನ್ನು ತಿಳಿದುಕೊಳ್ಳಲು ಸೋಂಕಿತ ವ್ಯಕ್ತಿಯ ಮಾದರಿಯನ್ನು ಜಿನೋಮಿಕ್ ಸೀಕ್ವೆನ್ಸಿಂಗ್‌ಗೆ ರವಾನಿಸಲಾಗಿದೆ. ಈ ನಡುವೆ ಬೆಳಗಾವಿ ▶ 9ನೇ ಪುಟಕ್ಕೆ

ಪಿಡಬ್ಲ್ಯುಡಿ ಇಂಜಿನಿಯರ್ಸ್ ನೇಮಕ; ಅರ್ಹತಾ ಪಟ್ಟಿ ಶೀಘ್ರ ಪ್ರಕಟ

ಬೆಳಗಾವಿ: ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇಮಕಾತಿ ಪ್ರಕ್ರಿಯೆಯಲ್ಲಿರುವ ಲೋಕೋಪಯೋಗಿ ಇಲಾಖೆಯ 330 ಕಿರಿಯ ಇಂಜಿನಿಯರ್‌ಗಳ ಅರ್ಹತಾ ಪಟ್ಟಿಯನ್ನು ಶೀಘ್ರ ಪ್ರಕಟಿಸಲು ಕ್ರಮವಹಿಸಲಾಗುವುದು ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್ ವಿಧಾನಸಭೆಯಲ್ಲಿ ವಿಧಾನಸಭೆಯಲ್ಲಿ ತಿಳಿಸಿದರು.

ಬೆಳಗಾವಿ ಸುವರ್ಣಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದ ವಿಧಾನಸಭೆ ಕಲಾಪದ ಶೂನ್ಯವೇಳೆಯಲ್ಲಿ ಶಾಸಕ ಎಸ್.ಸುರೇಶಕುಮಾರ್ ಅವರು ಪ್ರಸ್ತಾಪಿಸಿದ ವಿಷಯಕ್ಕೆ ಪ್ರತಿಕ್ರಿಯಿಸಿದ ಸಚಿವರು, ಲೋಕೋಪಯೋಗಿ ಇಲಾಖೆಯ ಕಿರಿಯ ಇಂಜಿನಿಯರುಗಳ ನೇಮಕಾತಿ ಪ್ರಕ್ರಿಯೆ ಕುರಿತು ಕಾನೂನು ಸಚಿವರೊಂದಿಗೆ ಸಮಾಲೋಚನೆ ನಡೆಸಿ, ಯಾವುದೇ ಹಗರಣಗಳಿಗೆ ಅವಕಾಶವಾಗದಂತೆ ಎಚ್ಚರ ವಹಿಸಲಾಗಿದೆ ಅರ್ಹತಾ ಪಟ್ಟಿಯನ್ನು ಆದಷ್ಟು ಬೇಗ ಪ್ರಕಟಿಸಿ, ಅರ್ಹರಿಗೆ ಉದ್ಯೋಗ ಒದಗಿಸಲಾಗುವುದೆಂದು ವಿವರಿಸಿದರು.

ರೈಲು ಡಿಕ್ಕಿ, 90 ಕುರಿ, 8 ರಣಹದ್ದು ಸಾವು

ಲಕ್ನೋ: ರೈಲು ಡಿಕ್ಕಿ ಹೊಡೆದ ಪರಿಣಾಮ 90 ಕುರಿಗಳು ಮತ್ತು 8 ರಣಹದ್ದುಗಳು ಮೃತಪಟ್ಟಿರುವ ಘಟನೆ ಉತ್ತರಪ್ರದೇಶದ ಬಲರಾಮಪುರದಲ್ಲಿ ನಡೆದಿದೆ. ಪಂಚ ಪರ್ವ ಪೊಲೀಸ್ ಠಾಣೆ ವ್ಯಾಪ್ತಿಯ ಸರಯು ಸೇತುವೆ ಬಳಿ ಈ ಅಪಘಾತ ಸಂಭವಿಸಿದೆ. ನಾಯಿಗಳು ಕುರಿಗಳ ಹಿಂಡನ್ನು ಅಟ್ಟಾಡಿಸಿಕೊಂಡು ಬಂದಿದ್ದರಿಂದ ಗಾಬರಿಗೊಂಡ ಕುರಿಗಳು ರೈಲ್ವೆ ಹಳಿ ಮೇಲೆ ಬಂದಿವೆ. ಈ ಸಂದರ್ಭ ಆ ಮಾರ್ಗದಲ್ಲಿ ಬಂದ ರೈಲೊಂದು ಡಿಕ್ಕಿ ಹೊಡೆದು ಕುರಿಗಳು ಸಾವಿಗೀಡಾಗಿವೆ ಎಂದು ವರದಿ ತಿಳಿಸಿದೆ. ಇದಾದ ಸ್ವಲ್ಪ ಸಮಯದ ಬಳಿಕ ಸತ್ತ ಕುರಿಗಳ ಮಾಂಸ ತಿನ್ನಲು ಬಂದಿದ್ದ ರಣಹದ್ದುಗಳಿಗೆ ಮತ್ತೊಂದು ರೈಲು ಡಿಕ್ಕಿಹೊಡೆದಿದೆ.

ಶಾಲಾ–ಕಾಲೇಜು, ಥಿಯೇಟರ್, ಕ್ಲಬ್, ಬಾರ್‌ಗಳಲ್ಲಿ

ಮಾಸ್ಕ್ ಕಡ್ಡಾಯ

ಹೊಸ ವರ್ಷಾಚರಣೆಗೆ ರಾತ್ರಿ 1 ಗಂಟೆವರೆಗೆ ಅವಕಾಶ








- ಸಂಭ್ರಮಾಚರಣೆಗೂ ಮಾಸ್ಕ್‌ಧಾರಣೆ, 2 ಡೋಸ್ ಕಡ್ಡಾಯ
- ವಿಮಾನ ಪ್ರಯಾಣಿಕರ ತಪಾಸಣೆಗೆ ಆಸ್ಪತ್ರೆಗಳ ನಿಗದಿ
- ತಜ್ಞರೊಂದಿಗೆ ಸಭೆ ನಂತರ ಮುನ್ನೆಚ್ಚರಿಕಾ ಕ್ರಮ ಘೋಷಣೆ



ಬೆಂಗಳೂರು, ಡಿ. 26(ಕೆಎಂಶಿ)– ಶಾಲಾ–ಕಾಲೇಜು, ಸಿನಿಮಾ ಮಂದಿರ, ಕ್ಲಬ್ ಮತ್ತು ಬಾರ್‌ಗಳಲ್ಲಿ ಮಾಸ್ಕ್ ಕಡ್ಡಾಯ ಮಾಡಿ ಸರ್ಕಾರ ಆದೇಶಿಸಿದೆ.

ವಿಶ್ವದ ಕೆಲವು ರಾಷ್ಟ್ರಗಳಲ್ಲಿ ಕೋವಿಡ್–19 ಸೋಂಕು ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವ ಉದ್ದೇಶದಿಂದ ತಜ್ಞರೊಟ್ಟಿಗೆ ಸಚಿವರು ಮತ್ತು ಅಧಿಕಾರಿಗಳು ಸಮಾಲೋಚನೆ ನಡೆಸಿದ ನಂತರ ಈ ತೀರ್ಮಾನ ಕೈಗೊಂಡಿದೆ. ಸಭೆಯ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಕಂದಾಯ ಸಚಿವ ಆರ್. ಅಶೋಕ್, ಹೊಸ ವರ್ಷ ಆಚರಣೆ ಬೆಂಗಳೂರು ಸೇರಿದಂತೆ ಎಲ್ಲ ನಗರಗಳಲ್ಲಿ ರಾತ್ರಿ ಒಂದು ಗಂಟೆಯವರೆಗೆ ಮಾತ್ರ ಸಂಭ್ರಮಾಚರಣೆಗೆ ಅವಕಾಶ ಮಾಡಿಕೊಡಲಾಗಿದೆ. ಸಾರ್ವಜನಿಕವಾಗಿ ಸಂಭ್ರಮಾಚರಣೆ ನಡೆಸುವವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಹಾಗೂ ಎರಡು ಡೋಸ್ ಲಸಿಕೆ ಪಡೆದಿರಬೇಕು. ಹೊಟೇಲ್‌ಗಳಲ್ಲಿ ಎಷ್ಟು ಟೇಬಲ್‌ಗಳಿವೆಯೋ ಅಷ್ಟು ಚೇರ್‌ಗೆ ಮಾತ್ರ ಅನುಮತಿ ನೀಡಲಾಗಿದೆ. ಸಾರ್ವಜನಿಕವಾಗಿ ಸಂಭ್ರಮಾಚರಣೆ ಸಂದರ್ಭದಲ್ಲಿ ಮಕ್ಕಳು ಮತ್ತು ಗರ್ಭಿಣಿಯರು ಭಾಗವಹಿಸದಂತೆ ▶ 9ನೇ ಪುಟಕ್ಕೆ

ಜನರ ಆರ್ಥಿಕತೆಗೆ ತೊಂದರೆ ಆಗದಂತೆ ಮುನ್ನೆಚ್ಚರಿಕೆ



ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೋವಿಡ್‌ನಿಂದಾಗಿ ಜನರ ಆರ್ಥಿಕತೆಗೆ ಯಾವುದೇ ರೀತಿಯ ತೊಂದರೆಯಾಗದಂತೆ ಮುನ್ನೆಚ್ಚರಿಕೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಹಂತಹಂತವಾಗಿ ಜರುಗಿಸಲಾಗುವುದು ಎಂದರು.

ರಾಜ್ಯದಲ್ಲಿ ಕೋವಿಡ್ ನಿಯಂತ್ರಣದ ಬಗ್ಗೆ ಸಚಿವಸಂಪುಟದಲ್ಲಿ ಚರ್ಚಿಸಲಾಗಿದ್ದು, ಜನರಲ್ಲಿ ಜಾಗೃತಿ ಮೂಡಿಸುವುದು, ಬೂಸ್ಟರ್ ಡೋಸ್ ಹೆಚ್ಚಿಸುವುದು, ಐಎಲ್ಐ ಮತ್ತು ಸಾರಿ ಪರೀಕ್ಷೆಗಳನ್ನು ಹೆಚ್ಚಿಸುವುದು, ಮಾಸ್ಕ್‌ಗಳಧಾರಣೆ, ಒಳಾಂಗಣಗಳಲ್ಲಿ ಮಾಸ್ಕ್‌ಧಾರಣೆ ಕಡ್ಡಾಯಗಳ ಬಗ್ಗೆ ತಜ್ಞರ ಸಮಿತಿಯೊಂದಿಗೆ ಸಭೆ ನಡೆಸಿ, ಹಂತಹಂತವಾಗಿ ನಿಯಮಗಳನ್ನು ಜಾರಿಗೆ ತರಲಾಗುವುದು ಎಂದರು. ಪ್ರತಿ ಬಾರಿಯಂತೆ ಈ ವರ್ಷವೂ ನಿಯಮಗಳಿದ್ದು, ಕೋವಿಡ್ ಹೆಚ್ಚಳದ ಹಿನ್ನೆಲೆಯಲ್ಲಿ ಕೆಲವು ▶ 9ನೇ ಪುಟಕ್ಕೆ



ಮೈಸೂರಿನ ಕೆಎಸ್‌ಆರ್‌ಟಿಸಿ ಸಬರ್ಬನ್ ಬಸ್ ನಿಲ್ದಾಣದಲ್ಲಿ ಇ–ಬಸ್ ಚಾರ್ಜಿಂಗ್ ಸ್ಟೇಷನ್ ಸಿದ್ಧವಾಗಿರುವುದು.

ಡಿ.30ರಿಂದ ಮೈಸೂರು–ಬೆಂಗಳೂರು ನಡುವೆ ಎಲೆಕ್ಟ್ರಿಕ್ ಬಸ್ ಸಂಚಾರ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಇ–ಬಸ್ ಸೇವೆಗೆ ಹಸಿರು ನಿಶಾನೆ

ಮೈಸೂರು, ಡಿ. 26(ಆರ್‌ಕೆ)–ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು (KSRTC) ಇದೇ ಮೊದಲ ಬಾರಿಗೆ ಮೈಸೂರು ಮತ್ತು ಬೆಂಗಳೂರು ನಡುವೆ ಎಲೆಕ್ಟ್ರಿಕ್ ಬಸ್ ಸಂಚಾರವನ್ನು ಡಿಸೆಂಬರ್ 30 (ಶುಕ್ರವಾರ)ರಿಂದ ಆರಂಭಿಸುವ ಸಾಧ್ಯತೆ ಇದೆ. ಹೈದರಾಬಾದ್‌ನಲ್ಲಿ ಸಂಸ್ಥೆಯ ಈ ಏರ್‌ಬಸ್ ಶಬ್ದಮಾಲಿನ್ಯ, ವಾಯುಮಾಲಿನ್ಯರಹಿತವಾಗಿದ್ದು, ಇಂದು ಬೆಂಗಳೂರು ತಲುಪಿವೆ. ಬುಧವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇ–ಬಸ್‌ಗಳಿಗೆ ಹಸಿರು ನಿಶಾನೆ ತೋರಿ ಸೇವೆಗೆ ಸಮರ್ಪಿಸುವರು. ಡಿಸೆಂಬರ್ 30ರಿಂದ ಮೈಸೂರು–ಬೆಂಗಳೂರು ನಡುವೆ ಒಂದು ಬಸ್ ಪ್ರಾಯೋಗಿಕ ಸಂಚಾರ ಆರಂಭಿಸಲಿದೆ ಎಂದು ಸಾರಿಗೆ ಸಂಸ್ಥೆ ಮೂಲಗಳು ತಿಳಿಸಿವೆ.

ಬೆಂಗಳೂರಿನಿಂದ ಅಂದು ಪ್ರಯಾಣ ಬೆಳೆಸುವ ಬಸ್ ಮೈಸೂರು ತಲುಪಿ ಇಲ್ಲಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಸಿದ್ಧವಾಗಿರುವ ಚಾರ್ಜಿಂಗ್ ಸ್ಟೇಷನ್ ಯೂನಿಟ್‌ನಲ್ಲಿ ರೀ–ಚಾರ್ಜ್ ಮಾಡಿಕೊಂಡು ಅದೇ ದಿನ ಬೆಂಗಳೂರಿಗೆ ಹಿಂದಿರುಗಲಿದೆ. ನಂತರ ರಾಜ್ಯ ರಾಜಧಾನಿಯಿಂದ ಮೈಸೂರು–ಮಡಿಕೇರಿ, ವಿರಾಜಪೇಟೆ, ಚಿಕ್ಕಮಗಳೂರು, ದಾವಣಗೆರೆ, ಶಿವಮೊಗ್ಗ, ಹಾಸನ, ತುಮಕೂರು ಸೇರಿದಂತೆ ರಾಜ್ಯದ ವಿವಿಧ ನಗರಗಳ ನಡುವೆ ಇ–ಬಸ್ ಸಂಚಾರ ಸೇವೆ ಆರಂಭವಾಗಲಿದೆ ಎಂದು ಸಂಸ್ಥೆ ಮೂಲಗಳು ತಿಳಿಸಿವೆ. ಮೈಸೂರು–ಬೆಂಗಳೂರು ನಡುವೆ ಪ್ರತಿದಿನ 450 ಟ್ರಿಪ್‌ಗಳಲ್ಲಿ ಸಾರಿಗೆ ಸಂಸ್ಥೆ ಬಸ್‌ಗಳು ಸಂಚರಿಸುತ್ತಿದ್ದು, ಎಸಿ, ಕ್ಲಬ್ ಕ್ಲಾಸ್ ಸೇವೆಯೂ ಇರುವ ಕಾರಣ, ಇ–ಬಸ್‌ಗಳ ಸಂಚಾರ ಮೊದಲು ಆರಂಭಿಸಲು ಪ್ರಮುಖ ಕಾರಣ ಎಂದು ಹೇಳಲಾಗಿದೆ ಅದಕ್ಕಾಗಿ ಮೈಸೂರು ಸಬರ್ಬನ್ ಬಸ್ ನಿಲ್ದಾಣದ ಆವರಣದಲ್ಲಿ ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸಲಾಗಿದೆ ▶ 9ನೇ ಪುಟಕ್ಕೆ

ವಿಧಾನಸಭೆಯಲ್ಲಿ ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ವಿಧೇಯಕ ಅಂಗೀಕಾರ

ಬೆಳಗಾವಿ: ಪರಿಶಿಷ್ಟ ಜಾತಿ(ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡ(ಎಸ್‌ಟಿ)ಗಳ ಮೀಸಲಾತಿ ಹೆಚ್ಚಳ ವಿಧೇಯಕವನ್ನು ಸೋಮವಾರ ವಿಧಾನಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿದೆ. ಎಸ್‌ಸಿ, ಎಸ್‌ಟಿ ಸಮುದಾಯದ ಮೀಸಲಾತಿ ಹೆಚ್ಚಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಸೂದೆ 2022 ಅನ್ನು ಕಳೆದ ಮಂಗಳವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪರವಾಗಿ ಕಾನೂನು ಸಚಿವ ಜೆಸಿ ಮಾಧುಸ್ವಾಮಿ, ವಿಧಾನಸಭೆಯಲ್ಲಿ ಮಂಡಿಸಿದ್ದರು. ಚರ್ಚೆಯ ಬಳಿಕ ಇಂದು ವಿಧೇಯಕವನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ.15ರಿಂದ 17ಕ್ಕೆ ಮತ್ತು ಪರಿಶಿಷ್ಟ ಪಂಡಗಳ ಮೀಸಲಾತಿ ಶೇ.3ರಿಂದ ಶೇ.7ಕ್ಕೆ ಹೆಚ್ಚಿಸಲಾಗಿದೆ. ಆದರೆ ಕೇವಲ ಸರ್ಕಾರಿ ಆದೇಶದ ಮೂಲಕ ಮೀಸಲಾತಿ ಹೆಚ್ಚಿಸಿದರೆ ನ್ಯಾಯಾಲಯದಲ್ಲಿ ಹಿನ್ನಡೆಯಾಗಬಹುದು ಎಂಬ ಕಾರಣಕ್ಕೆ ಮಸೂದೆಯೊಂದನ್ನು ರೂಪಿಸಿ, ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆಯಲಾಗಿದೆ. ಬಳಿಕ ಸುಗ್ರೀವಾಜ್ಞೆ ಮೂಲಕ ಅದನ್ನು ಜಾರಿಗೊಳಿಸಲಾಗಿದೆ. ಆರು ತಿಂಗಳೊಳಗೆ ಈ ತಿದ್ದುಪಡಿ ಮಸೂದೆಗೆ ವಿಧಾನಮಂಡಲದ ಒಪ್ಪಿಗೆ ಪಡೆಯಬೇಕು. ನಂತರ ▶ 9ನೇ ಪುಟಕ್ಕೆ

ದೆಹಲಿಯಲ್ಲಿ ಮುಖ್ಯಮಂತ್ರಿ: ಒಕ್ಕಲಿಗರು, ಪಂಚಮಸಾಲಿ ಸಮುದಾಯಕ್ಕೆ

ಮೀಸಲಾತಿ ಕಲ್ಪಿಸಿದರೆ ಪಕ್ಷಕ್ಕೆ ದೊಡ್ಡ ಬಲ

- ವರಿಷ್ಠರಿಗೆ ಮುಖ್ಯಮಂತ್ರಿ ಬೊಮ್ಮಾಯಿ ಮನವರಿಕೆ
- ಹಿಂದುಳಿದ ವರ್ಗಗಳಿಗೆ ಸಂಪುಟದಲ್ಲಿ ಸ್ಥಾನ ನೀಡುವುದರಿಂದ ಆಗುವ ಲಾಭದ ಬಗ್ಗೆಯೂ ವಿವರಣೆ

ಬೆಂಗಳೂರು, ಡಿ.26(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಒಕ್ಕಲಿಗ ಮತ್ತು ಪಂಚಮಸಾಲಿ ಲಿಂಗಾಯಿತ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸುವ ಬಗ್ಗೆ ವರಿಷ್ಠರೊಟ್ಟಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚರ್ಚೆ ಮಾಡಿದ್ದಾರೆ. ಹಿಂದುಳಿದ ವರ್ಗಕ್ಕೆ ಸೇರಿದ ಕೆಲವು ಸಮುದಾಯದವರಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ಕಲ್ಪಿಸಲು ಅವಕಾಶ ಮಾಡಿಕೊಡುವಂತೆಯು ವರಿಷ್ಠರಿಗೆ ಮನವಿ ಮಾಡಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ವರಿಷ್ಠರೊಟ್ಟಿಗೆ ಸುದೀರ್ಘ ಚರ್ಚೆ ನಡೆಸಲೆಂದೇ ಸಂಜೆ ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿಯವರು ತಾವು ಕೈಗೊಂಡಿರುವ ಚುನಾವಣಾ ಸಿದ್ಧತೆಗಳ ಬಗ್ಗೆ ನಾಯಕರಿಗೆ ಮಾಹಿತಿ ನೀಡಿದ್ದಲ್ಲದೆ, ಇದರಿಂದ ಯಾವ ರೀತಿ ಪಕ್ಷಕ್ಕೆ ಪ್ರಯೋಜನವಾಗುತ್ತದೆ ಎಂಬ ವಿವರವನ್ನು ನೀಡಿದ್ದಾರೆ. ಕರ್ನಾಟಕದಲ್ಲಿ ಬಲಿಷ್ಠ ಸಮಾಜಕ್ಕೆ ಸೇರಿದ ಒಕ್ಕಲಿಗ ಮತ್ತು ಪಂಚಮಸಾಲಿ ಲಿಂಗಾಯತರಿಗೆ ಮೀಸಲಾತಿ ಕಲ್ಪಿಸುವುದರಿಂದ ನಮಗೆ ಚುನಾವಣೆಯಲ್ಲಿ ದೊಡ್ಡ ಬಲ ದೊರೆಯಲಿದೆ. ಸುಪ್ರೀಂಕೋರ್ಟ್ ತೀರ್ಪಿನಂತೆ ಶೇ.50ರಷ್ಟು ಮೀಸಲಾತಿಯೊಳಗೆ ನಾವು ಈ ಸಮಾಜಕ್ಕೆ ಹೆಚ್ಚುವರಿಯಾಗಿ ಮೀಸಲಾತಿ ಕಲ್ಪಿಸಲು ಸಾಧ್ಯವಿಲ್ಲ.

2019 ರ ಲೋಕಸಭಾ ಚುನಾವಣೆಗೂ ಮುನ್ನ ಪ್ರಧಾನಿಯವರು ಉತ್ತರ ಭಾರತದಲ್ಲಿ ಕೆಲವು ಹಿಂದುಳಿದ ವರ್ಗಗಳು ಮತ್ತು ಬ್ರಾಹ್ಮಣ ಸಮುದಾಯವನ್ನು ಗಮನದಲ್ಲಿಟ್ಟುಕೊಂಡು ಇಡಬ್ಲ್ಯೂಎಸ್ ಜಾರಿಗೊಳಿಸಿದ್ದನ್ನು, ಕರ್ನಾಟಕದಲ್ಲೂ ಅನುಷ್ಠಾನ ಮಾಡಲು ಅವಕಾಶ ನೀಡಿ. ಇದರಿಂದ ಗ್ರಾಮೀಣ ಭಾಗದಲ್ಲಿರುವ ಒಕ್ಕಲಿಗ ಮತ್ತು ಪಂಚಮಸಾಲಿಗಳಿಗೆ ಈ ಪ್ರವರ್ಗದಲ್ಲಿ ಮೀಸಲಾತಿ ಕಲ್ಪಿಸಿದರೆ, ಯಾವುದೇ ಕಾನೂನಿನ ತೊಡಕಾಗುವುದಿಲ್ಲ. ಕಾನೂನು ತಜ್ಞರೊಟ್ಟಿಗೆ ಮತ್ತು ರಾಜ್ಯ ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷರ ಜೊತೆ ಈ ಸಂಬಂಧ ಚರ್ಚೆ ಮಾಡಿದ್ದೇನೆ. ವರದಿಯನ್ನೂ ತರಿಸಿಕೊಂಡಿದ್ದೇನೆ.

ನಾವು ತೆಗೆದುಕೊಳ್ಳುವ ತೀರ್ಮಾನವನ್ನು ಬಜೆಟ್ ಅಧಿವೇಶನದಲ್ಲಿ ಮಂಡಿಸಿ, ಅನುಮೋದನೆ ಪಡೆಯಲು ಸಾಧ್ಯವಾಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡೇ ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲೇ ಅಂದರೆ ಇದೇ 29 ರಂದು ಮಂಡಿಸಿ, ಈ ಸಮಾಜದ ಬೇಡಿಕೆಯನ್ನು ಈಡೇರಿಸುತ್ತೇನೆ. ಇದರಿಂದ ಪಕ್ಷಕ್ಕಾಗುವ ಲಾಭ ▶ 9ನೇ ಪುಟಕ್ಕೆ

ಬಡವರ ಮನೆಗೆ ಗ್ರಾಮದಲ್ಲಿ ಮೂರು ಲಕ್ಷ, ನಗರದಲ್ಲಿ ಐದು ಲಕ್ಷ ಸಹಾಯಧನ



ಬೆಳಗಾವಿ : ರಾಜ್ಯದಲ್ಲಿ ಬಡವರಿಗೆ ನಿರ್ಮಾಣ ಮಾಡುವ ಮನೆಗಳಿಗೆ ನೀಡುವ ಸಹಾಯಧನವನ್ನು ಗ್ರಾಮೀಣ ಪ್ರದೇಶದಲ್ಲಿ 3 ಲಕ್ಷ ರೂ. ಹಾಗೂ ನಗರ ಪ್ರದೇಶಗಳಲ್ಲಿ 5 ಲಕ್ಷ ರೂ.ಗೆ ಹೆಚ್ಚಳ ಮಾಡಲಾಗುವುದು ಎಂದು ವಸತಿ ಸಚಿವ ವಿ.ಸೋಮಣ್ಣ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ಇಂದು ಪ್ರಶ್ನೋತ್ತರ ವೇಳೆ ಕೆ.ಜಿ. ಬೋಪಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಡು ಬಡವರಿಗೆ ನಿರ್ಮಾಣ ಮಾಡುವ ಮನೆಗಳಿಗೆ ನೀಡುತ್ತಿರುವ ಹಣ ಸಾಕಾಗುತ್ತಿಲ್ಲ. ಹಾಗಾಗಿ, ಸಹಾಯಧನವನ್ನು ಹೆಚ್ಚಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು. ಗ್ರಾಮೀಣ ಪ್ರದೇಶದಲ್ಲಿ ಕಡು ಬಡವರಿಗೆ 1.20 ಲಕ್ಷ ರೂ. ಹಣವನ್ನು ನೀಡಲಾಗುತಿತ್ತು ಇದರಿಂದ ಮನೆ ನಿರ್ಮಾಣ ಸಾಧ್ಯವಾಗದೇ ಅರ್ಧಕ್ಕೆ ನಿಂತು ಹೋಗುವ ಪರಿಸ್ಥಿತಿ ಉಂಟಾಗುತ್ತಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿ ಸಹಾಯಧನವನ್ನು ಹೆಚ್ಚಿಸಲಾಗುವುದು. ರಾಜ್ಯದಲ್ಲಿ 5 ಲಕ್ಷ ಹೊಸ ಮನೆಗಳ ನಿರ್ಮಾಣಕ್ಕೆ ನಿರ್ಧರಿಸಲಾಗಿತ್ತು. ಆದರೆ, ಸಹಾಯಧನ ಹೆಚ್ಚಳದಿಂದ 5 ಲಕ್ಷ ಮನೆಗಳನ್ನು 3 ಲಕ್ಷಕ್ಕೆ ಇಳಿಸಲಾಗಿದೆ ಎಂದು ಮಾಹಿತಿ ನೀಡಿದರು. ಕಡು ಬಡವರಿಗೆ ಮನೆ ನಿರ್ಮಿಸಿಕೊಡುವ ಜವಾಬ್ದಾರಿಯನ್ನು ಆಯಾ ಜಿಲ್ಲಾಧಿಕಾರಿಗಳು, ▶ 9ನೇ ಪುಟಕ್ಕೆ

ಬಿಳಿಕಲ್ಲು ಕ್ವಾರಿಯಲ್ಲಿ ಬಂಡೆ ಕುಸಿದು ಮೂವರು ಕಾರ್ಮಿಕರ ಸಾವು

ಚಾಮರಾಜನಗರ ತಾಲೂಕು ಬಿಸಲವಾಡಿಯಲ್ಲಿ ದುರಂತ

ಚಾಮರಾಜನಗರ, ಡಿ.26(ಎಸ್‌ಎಸ್)– ಗುಂಡ್ಲುಪೇಟೆ ತಾಲೂಕಿನ ಮಡಹಳ್ಳಿ ಗ್ರಾಮದಲ್ಲಿ ಬಿಳಿಕಲ್ಲು ಕ್ವಾರಿ ಕುಸಿದು ಮೂವರು ಸಾವನ್ನಪ್ಪಿದ್ದ ಘಟನೆ ಈ ಭಾಗದ ಜನರ ಮನಸ್ಸಿನಿಂದ ಮಾಸುವ ಮುನ್ನವೇ ಚಾಮರಾಜನಗರ ತಾಲೂಕಿನ ಬಿಸಲವಾಡಿ ಗ್ರಾಮದ ಬಳಿ ಇಂತಹುದೇ ದುರಂತವೊಂದು ಸಂಭವಿಸಿ, ಮೂವರು ದುರಂತ ಸಾವಿಗೀಡಾಗಿದ್ದಾರೆ.

ಬಿಳಿಕಲ್ಲು ಕ್ವಾರಿಯ ಕಲ್ಲುಗುಡ್ಡ ಕುಸಿದು ಚಾಮರಾಜನಗರ ತಾಲೂಕಿನ ಕಾಗಲವಾಡಿ ಮೋಳೆ ಗ್ರಾಮದ ಮಹದೇವಶೆಟ್ಟಿ ಅವರ ಪುತ್ರ ಶಿವರಾಜು(29), ಮಾದಶೆಟ್ಟಿಯವರ ಪುತ್ರ ಕುಮಾರ(35) ಹಾಗೂ ಕುಳ್ಳಮಾದಶೆಟ್ಟಿಯವರ ಪುತ್ರ ಸಿದ್ದರಾಜು (31) ಮೃತ ಕಾರ್ಮಿಕರು. ಈ ಪೈಕಿ ಕುಮಾರ್ ಮತ್ತು ಸಿದ್ದರಾಜು ಅವರಿಗೆ ವಿವಾಹವಾಗಿದ್ದರೆ, ಶಿವರಾಜು ಅವಿವಾಹಿತ.

ಘಟನೆಯ ವಿವರ: ಚಾಮರಾಜನಗರ ತಾಲೂಕಿನ ಬಿಸಲವಾಡಿ ಗ್ರಾಮಕ್ಕೆ ಸೇರಿದ ಸರ್ವೇ ನಂ.172ರಲ್ಲಿ 3 ಎಕರೆ ಜಾಗದಲ್ಲಿ ರೇಣುಕಾದೇವಿ ಎಂಬುವರು ಬಿಳಿಕಲ್ಲು ಕ್ವಾರಿ ನಡೆಸುತ್ತಿದ್ದರು. ಕ್ವಾರಿಯಲ್ಲಿ ಎಂದಿನಂತೆ ಸೋಮವಾರ 10ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಈ ಪೈಕಿ ಕಾರ್ಮಿಕನೋರ್ವ ಹಗ್ಗದ ಸಹಾಯದಿಂದ ಕಂಪ್ರೆಸರ್ ಬಳಸಿ ಕ್ವಾರಿಯ ಮಧ್ಯಭಾಗದಲ್ಲಿ ಕುಳಿ ತೆಗೆಯುತ್ತಿದ್ದ. ಇನ್ನುಳಿದ ಕಾರ್ಮಿಕರು ಕೆಳಭಾಗದಲ್ಲಿ ನಿಂತು ಕುಳಿ ತೆಗೆಯುತ್ತಿದ್ದವನಿಗೆ ಸಹಾಯ ಮಾಡುತ್ತಿದ್ದರು ಎನ್ನಲಾಗಿದೆ. ಈ ವೇಳೆ ಉಂಟಾದ ಕಂಪನದಿಂದ ಕ್ವಾರಿಯ ಮೇಲ್ಭಾಗದ ಕಲ್ಲು ಸಡಿಲಗೊಂಡು ಕುಸಿದಿದೆ. ಈ ಸಂದರ್ಭದಲ್ಲಿ ಕಲ್ಲು ಕುಳಿ ತೋಡುತ್ತಿದ್ದ ಕಾರ್ಮಿಕನ ಮೇಲೆ ಮತ್ತು ಕೆಳಗಡೆ ನಿಂತಿದ್ದ ಇನ್ನಿಬ್ಬರು ಕಾರ್ಮಿಕರ ಮೇಲೆ ಕಲ್ಲಿನ ಭಾರೀ ಗಾತ್ರದ ತುಂಡುಗಳು ಬಿದ್ದಿವೆ. ಇದರಿಂದ ಕುಮಾರ್ ಹಾಗೂ ಶಿವರಾಜು ತೀವ್ರವಾಗಿ ಗಾಯಗೊಂಡು ಸ್ಥಳದಲ್ಲಿಯೇ ಸಾವನ್ನಪ್ಪಿದರೆ, ಚಿಂತಾಜನಕ ಸ್ಥಿತಿಯಲ್ಲಿದ್ದ ಸಿದ್ದರಾಜು ಅವರನ್ನು ಸ್ಥಳೀಯರು ಹಾಗೂ ಪೊಲೀಸರು ಕ್ವಾರಿಯಿಂದ ಮೇಲಕ್ಕೆ ತಂದು ಆಂಬುಲೆನ್ಸ್ ಮೂಲಕ ನಗರದ ಜಿಲ್ಲಾಸ್ಪತ್ರೆಗೆ ಕರೆದೊಯ್ಯುವಾಗ ದಾರಿ ಮಧ್ಯೆ ಸಾವನ್ನಪ್ಪಿದ್ದಾನೆ.

ಗ್ರಾಮಸ್ಥರ ಆರೋಪ: ಬಿಸಲವಾಡಿ ಗ್ರಾಮದ ಬಳಿ ಬಿಳಿಕಲ್ಲು ಕ್ವಾರಿ ನಡೆಸಲು 3 ಎಕರೆ ಜಾಗಕ್ಕೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಅನುಮತಿ ಪಡೆಯಲಾಗಿದೆ. ಆದರೆ, ಪಾಲಿಸಬೇಕಾದ ಸುರಕ್ಷ ನಿಯಮಗಳನ್ನು ▶ 9ನೇ ಪುಟಕ್ಕೆ



ಸಿದ್ದರಾಜು



ಕುಮಾರ



ಶಿವರಾಜು

ಕ್ರಮಕ್ಕೆ ಸೂಚಿಸಿದ್ದೇನೆ

“ಬಿಸಲವಾಡಿ ಗ್ರಾಮದಲ್ಲಿ ನಡೆಯುತ್ತಿರುವ ಬಿಳಿಕಲ್ಲು ಕ್ವಾರಿಯಲ್ಲಿ ಕಾರ್ಮಿಕರ ರಕ್ಷಣೆಗಾಗಿ ಕ್ರಮ ಕೈಗೊಳ್ಳದೆ ಇರುವುದು ಕಂಡು ಬಂತು. ಸರ್ಕಾರದ ನಿಯಮಗಳನ್ನು ಪಾಲಿಸದೇ ಇರುವುದು ಕಂಡು ಬಂದಿದ್ದು, ಮಾಲೀಕರಿಗೆ ನೋಟಿಸ್ ಜಾರಿ ಮಾಡಿ, ಕಠಿಣ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ. ಸರ್ಕಾರದ ನಿಯಮಾನುಸಾರ ಕ್ವಾರಿ ನಡೆದರೆ ನಮ್ಮದೇನು ಅಭ್ಯಂತರವಿಲ್ಲ. ಇಲ್ಲದಿದ್ದರೆ ಅಂತಹ ಕ್ವಾರಿಗಳ ಅನುಮತಿ ರದ್ದುಪಡಿಸಿ ಕಠಿಣ ಕ್ರಮ ಕೈಗೊಳ್ಳಲು ಸೂಚಿಸಿದ್ದೇನೆ.

–ಡಿ.ಎಸ್.ರಮೇಶ್, ಜಿಲ್ಲಾಧಿಕಾರಿ, ಚಾಮರಾಜನಗರ



ನಿಯಮ ಉಲ್ಲಂಘನೆಯಾಗಿದೆ: ಕ್ರಿಮಿನಲ್ ಕೇಸ್ ಹಾಕ್ತೀವೆ....

“ಗುಂಡ್ಲುಪೇಟೆ ತಾಲೂಕಿನ ಮಡಹಳ್ಳಿ ಬಳಿ ಸಂಭವಿಸಿದ ಕ್ವಾರಿ ದುರಂತದ ನಂತರ ಜಿಲ್ಲೆಯ ಎಲ್ಲಾ ಕ್ವಾರಿ ಮಾಲೀಕರಿಗೆ ನೋಟಿಸ್ ನೀಡುವ ಮೂಲಕ ಸರ್ಕಾರದ ನಿಯಮಗಳನ್ನು ಪಾಲಿಸಬೇಕು. ಕಾರ್ಮಿಕರ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕು ಎಂದು ಸೂಚಿಸಲಾಗಿತ್ತು. ಆದರೆ, ಈ ಕ್ವಾರಿಯಲ್ಲಿ ನಿಯಮ ಉಲ್ಲಂಘಿಸಿರುವುದು ಕಂಡು ಬಂದಿದೆ. ಕ್ವಾರಿ ಪರವಾನಗಿಯನ್ನು ರದ್ದುಗೊಳಿಸಲಾಗುವುದು. ಇದರ ಮಾಲೀಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.

–ನಂಜುಂಡಸ್ವಾಮಿ, ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಚಾಮರಾಜನಗರ.

ನಕ್ಕರೆ ಅದೇ ಸ್ವರ್ಗ

ಆರಕ್ಷಕ : ನೀನು ವಿಚಿತ್ರ ಮನುಷ್ಯ ಕಣಯ್ಯ, ಹಗಲು ಹೊತ್ತಿನಲ್ಲೇ ಕಳ್ಳತನ ಮಾಡಲು ಹೊರಟಿದ್ದೆಯಲ್ಲ

ಕಳ್ಳ : ಏನ್ ಹೇಳಲಿ ಫ್ರೆಂಡ್, ರಾತ್ರಿ ಹೊತ್ತು ಹಾಳಾದ್ದು ನಿದ್ರೆ ಬಂದ್ಬಿಟ್ಟಿರುತ್ತೆ?

ಮೈಸೂರು ಮಿತ್ರ

ಮಂಗಳವಾರ, 27 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಯಶಸ್ಸಿನ ಮೂಲಭೂತ ತತ್ವವೇನೆಂದರೆ ಹಿಡಿದ ಕೆಲಸವನ್ನು ಬಿಡದೇ ಮಾಡುವುದು –ವಾಲ್ಟೇರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಓರಗಿತ್ತಿ ಒಡವೆ ಹಾಕೊಂಡು ನೀರೊಳಗೆ ನೆರಳು ನೋಡಿದಳಂತೆ

ನಿಮ್ಮ ಪತ್ರಗಳು

ಅಭಿವೃದ್ಧಿ ರಾಕ್ಷಸ ಚಾಮುಂಡಿಬೆಟ್ಟ ಸಂಹರಿಸುವುದು ಬೇಡ!.



ಮಾನ್ಯರೆ,

ಮೈಸೂರು ನಗರವು ಅಭಿವೃದ್ಧಿಯ ಪಥದತ್ತ ನಾಗಲೋಟದಿಂದ ಸಾಗುತ್ತಿದೆ ದಶಪಥ ರಸ್ತೆ ಪೂರ್ಣಗೊಳ್ಳುವ ಹಂತದಲ್ಲಿದೆ. ವಿಮಾನಗಳ ಹಾರಾಟದ ಸಂಖ್ಯೆಯಲ್ಲಿ ಏರಿಕೆ ಆಗಿದೆ, ನಾಲ್ಕೂ ದಿಕ್ಕುಗಳಲ್ಲೂ ಖಾಸಗಿ ಬಡಾವಣೆಗಳು ಶರವೇಗದಲ್ಲಿ ಬೆಳೆಯುತ್ತಿವೆ. ಇದರ ಜೊತೆಗೆ ಒಡೆಯರು ಕಟ್ಟಿಸಿದ ಪುರಾತನ ಪಾರಂಪರಿಕ ಕಟ್ಟಡಗಳು ನಿರ್ವಹಣೆ ಇಲ್ಲದೆ ಒಂದೊಂದೇ ಕುಸಿಯುತ್ತಿವೆ. ಕುಸಿದ ಕಟ್ಟಡಗಳು ಪುನರ್ ನಿರ್ಮಾಣವಿಲ್ಲದೆ ಹಾಗೆ ಮೃತದೇಹಗಳಂತೆ ಮಲಗಿವೆ. ಪ್ರಸ್ತುತ ಮೈಸೂರು ತನ್ನ ಪಾರಂಪರಿಕ ನಗರ ಅಥವಾ ಸಾಂಸ್ಕೃತಿಕ ನಗರವೆಂಬ ಹೆಗ್ಗಳಿಕೆಯು ಕ್ಷೀಣಿಸುತ್ತಿರುವುದು ಗೋಚರಿಸುತ್ತಿದೆ. ಆಧುನಿಕ ಶೈಲಿಯ ಕಟ್ಟಡಗಳು ಯಾವೂ ಸಹ ಮೈಸೂರಿನ ಹೆಗ್ಗುರುತಾಗಲಿಲ್ಲ. ನಮಗೆ ಇರುವುದನ್ನು ಉಳಿಸಿಕೊಳ್ಳಲಾಗುತ್ತಿಲ್ಲ.

ಕೇಂದ್ರ ಸರ್ಕಾರವು ಪ್ರಸಾದ ಯೋಜನೆಯಡಿ 48.21 ಕೋಟಿ ರೂಪಾಯಿಗಳನ್ನು ಚಾಮುಂಡಿ ಬೆಟ್ಟದ ಅಭಿವೃದ್ದಿಗಾಗಿ ನೀಡಿರುವುದು ನಗರದ ಜನತೆಗೆ ಖುಷಿಯ ಸಮಾಚಾರ. ಅದೂ ಸಮರ್ಪಕವಾಗಿ ಯೋಜನೆ ರೂಪಿಸಿದಾಗ ಮಾತ್ರ, ಇಲ್ಲದಿದ್ದಲ್ಲಿ ತಡೆಯಲಾರದಷ್ಟು ನೋವು ನಮ್ಮೆಲ್ಲರಿಗೂ. ಪಾರಂಪರಿಕ ಕಟ್ಟಡಗಳಂತೆ ಚಾಮುಂಡಿಬೆಟ್ಟದ ರಸ್ತೆಯ ಕೆಲಭಾಗ ಕುಸಿದಿದೆ, ಕುಸಿದ ಜಾಗಕ್ಕೆ ತಡೆಗೋಡೆ ನಿರ್ಮಾಣ ಮಾಡುತ್ತಿರುವುದು ತಿಳಿದಿರುವ ಸುದ್ದಿ. ಅಂದಾಜು 325.00 ಮೀ. ಎತ್ತರವಿರುವ ಬೆಟ್ಟದ ಮೇಲೆ ಅಭಿವೃದ್ದಿಯ ಹೆಸರಿನಲ್ಲಿ ಹಲವಾರು ಕಟ್ಟಡಗಳನ್ನು ನಿರ್ಮಿಸಿ ಲಕ್ಷಕ್ಕೂ ಹೆಚ್ಚು ಟನ್ ತೂಕ ಹೇರಲಾಗಿದೆ, ಹೊಸದಾಗಿ ನೀಡಲಾಗಿರುವ ಅನುದಾನವನ್ನು ಉಪಯೋಗಿಸಿ ಮತ್ತಷ್ಟು ಕಟ್ಟಡಗಳನ್ನು ಕಟ್ಟುವುದರಿಂದ ತೂಕ ಹೆಚ್ಚಾದಂತೆ ಬೆಟ್ಟದ ಕುಸಿಯುವಿಕೆಗೆ ಅವಕಾಶವಾಗುವುದು. ಹೆಚ್ಚೆಚ್ಚು ಅಭಿವೃದ್ದಿ ಆದಂತೆ ನೀರಿನ ಬೇಡಿಕೆಯು ಹೆಚ್ಚಾಗಿ ಉಪಯೋಗಿಸಿದ ನೀರು ನೆಲದಾಳಕ್ಕೆ ಇಳಿಯುವುದರಿಂದ ಹಾಗೂ ಭಾರಿ ವಾಹನಗಳ ಸಂಚಾರಿಸುವಾಗ ಉಂಟಾಗುವ ವೈಬ್ರೇಷನ್ ಕೂಡ ಕುಸಿತಕ್ಕೆ ಕಾರಣವಾಗುವುದು.

ಅಭಿವೃದ್ದಿಯನ್ನು ಮಾಡಲೇಬೇಕೆಂಬ ಇಚ್ಛೆ ಇದ್ದರೆ ಬೆಟ್ಟದ ಬುಡದ ಸುತ್ತಲಿನ ಬಫರ್ ಝೋನ್‌ನ್ನು ಹಸಿರೀಕರಣಗೊಳಿಸಿ ಒತ್ತುವರಿ ಆಗದಂತೆ ತಡೆದು, ಕೆಳಗಿನ ನಿರ್ಧಿಷ್ಟ ಸ್ಥಳದಲ್ಲಿ ಪ್ರವಾಸೋಧ್ಯಮಕ್ಕೆ ಪೂರಕವಾದ ಕಟ್ಟಡಗಳನ್ನು ನಿರ್ಮಿಸಿ ಚಾಮುಂಡಿಬೆಟ್ಟವನ್ನು ಯಥಾಃ ಸ್ಥಿತಿಯಲ್ಲಿ ಇಟ್ಟುಕೊಳ್ಳೋಣ. ಪ್ರವಾಸಿಗರಿಗೆ ಕೇವಲ 8.00 ಕಿ.ಮೀ ಉದ್ದದ ರಸ್ತೆಯನ್ನು ಪ್ರಯಾಣಿಸಿ ಬರುವುದು ಕಷ್ಟವೇನಲ್ಲ. ಗಿಡಮರಗಳಿಂದ ಕಂಗೊಳಿಸುವ ಚಾಮುಂಡಿಬೆಟ್ಟವು ಮೈಸೂರು ನಗರದ ಏರ್ ಫಿಲ್ಟರ್, ವಾಯು ಶುದ್ದೀಕರಣವಾಗಿರುವ ಬೆಟ್ಟದ ಮೇಲೆ ಕಿಂಚಿತ್ತೂ ಅಭಿವೃದ್ದಿ ಆಗುವುದು ಬೇಡ, ಏನೇ ಇದ್ದರೂ ಬೆಟ್ಟದ ತಳಭಾಗದಲ್ಲಿ ನಡೆಯಲಿ. ಸಂಪರ್ಕ ಮಾರ್ಗಗಳು ಅಭಿವೃದ್ದಿ ಆದಂತೆ ನಗರವೂ ಬೆಳೆಯುವುದರಿಂದ ಬೆಂಗಳೂರಿಗರು ನೆಮ್ಮದಿಯ ಬದುಕಿಗಾಗಿ ಮೈಸೂರಿನ ಕಡೆಗೆ ಮುಖ ಮಾಡುತ್ತಿದ್ದಾರೆ. ಮುಂದೆ ಮೈಸೂರು ಬೆಂಗಳೂರು ಆಗುವುದರಲ್ಲಿ ಸಂಶಯವಿಲ್ಲ, ಸಾಂಸ್ಕೃತಿಕ ನಗರಿ ಮೈಸೂರನ್ನು ಮೈಸೂರಾಗಿಯೇ ಇರುವಂತೆ ಬಿಡಿ, ಬೃಹತ್ ಮೈಸೂರು ಯಾರಿಗೆ ಬೇಕು?.

–ಮಿರ್ಲೆಚಂದ್ರಶೇಖರ, ಲೇಖಕರು, ಮೈಸೂರು.

ದೇವನೂರಿಗೆ ಬಸ್ ಸೌಕರ್ಯ ಕಲ್ಪಿಸಿ

ಮಾನ್ಯರೇ,

ನಾನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಓದುತ್ತಿದ್ದು, ಮೈಸೂರಿನ ದೇವನೂರಿನಲ್ಲಿರುವ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ವಾಸ ಮಾಡುತ್ತಿದ್ದೇನೆ. ಈ ವಿದ್ಯಾರ್ಥಿ ನಿಲಯದಲ್ಲಿ ಒಟ್ಟು 75 ವಿದ್ಯಾರ್ಥಿಗಳು ವಾಸ ಮಾಡುತ್ತಿದ್ದಾರೆ. ಆದರೆ ಈ ವಿದ್ಯಾರ್ಥಿ ನಿಲಯವಿರುವಲ್ಲಿಂದ ನಗರ ಬಸ್ ನಿಲ್ದಾಣಕ್ಕೆ ಯಾವುದೇ ರೀತಿಯ ಬಸ್ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ ನಾವೆಲ್ಲಾ 2 ಕಿ.ಮೀ ದೂರದಲ್ಲಿರುವ ಆರ್.ಎಸ್. ನಾಯ್ಡುನಗರಕ್ಕೆ ನಡೆದುಕೊಂಡು ಹೋಗಿ ಅಲ್ಲಿಂದ ಬಸ್ ಹತ್ತುತ್ತಾರೆ. ಇದರಿಂದ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ತರಗತಿಗಳಿಗೆ ಹಾಜರಾಗಲು ತೊಂದರೆ ಉಂಟಾಗುತ್ತಿದೆ. ಈ ಸಮಸ್ಯೆಯನ್ನು ನಾನು ಪತ್ರದ ಮೂಲಕ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದೆ. ಆದರೆ ಅವರು ಇದುವರೆಗೂ ಯಾವುದೇ ರೀತಿಯ ಕ್ರಮವನ್ನು ಕೈಗೊಂಡಿಲ್ಲ. ಆದಕಾರಣ, ಸಂಬಂಧಪಟ್ಟ ಅಧಿಕಾರಿಗಳು ನಮ್ಮ ವಿದ್ಯಾರ್ಥಿ ನಿಲಯವಿರುವ ದೇವನೂರಿಂದ ನಗರ ಬಸ್ ನಿಲ್ದಾಣಕ್ಕೆ ಬಸ್ ಸಂಪರ್ಕ ಕಲ್ಪಿಸಬೇಕಾಗಿ ಒತ್ತಾಯಿಸುತ್ತೇನೆ.

–ಹುಲಿಕುಂಟಿ. ಹೆಚ್, ಮಹಾರಾಜ ಕಾಲೇಜು, ಮೈಸೂರು.

ಪ್ರಾಚ್ಯ ಸಂಗ್ರಹ ಇಲಾಖೆ ಇರುವುದೇತಕ್ಕೆ?



ಮಾನ್ಯರೆ,

ಇದೊಂದು ಸಂರಕ್ಷಿತ ಸ್ಮಾರಕ. ಶ್ರೀರಂಗಪಟ್ಟಣದ ಗಂಜಾಮ್‌ಗೆ ಹೋಗುವ ದಾರಿಯಲ್ಲಿದ್ದು, ರಾಜ್ಯ ಸರಕಾರದ ಸುಪರ್ದಿಗೆ ಸೇರಿದೆ. ಸಬ್ಬಲ್ ರಾಣಿ ತಿಟ್ಟೆಂದೇ ಹೆಸರಾದ ಈ ಜಾಗದ ಸುತ್ತ ಪಾಳು ಗೋಡೆ, ಗೇಟ್ ಇದ್ದೂ ಇಲ್ಲದಂತಿದೆ. ಒಳಗೆಲ್ಲಾ ಗಿಡಗಂಟಿಗಳು ಬೆಳೆದಿವೆ. ರಣಸ್ತಂಭವೆಂದು ಕರೆಯುವ ಈ ಸ್ಮಾರಕದ ಒಳಗೆ ಹೋಗಲಾಗುವುದೇ ಇಲ್ಲವೆನ್ನುವಷ್ಟರ ಮಟ್ಟಿಗೆ ಕಳೆ ಬೆಳೆದು ನಿಂತಿದೆ. ಆದಾಯ ಬರುವ ಸ್ಮಾರಕಗಳಷ್ಟೇ ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆಯ ಆದ್ಯತೆಯೇ? ಪ್ರಾಚ್ಯ ವಸ್ತು ಸಂಗ್ರಹಾಲಯ ಇಲಾಖೆ ನಿದ್ರೆ ಮಾಡುತ್ತಿದೆಯೇ?

– ಕೊ.ಸು.ನರಸಿಂಹ ಮೂರ್ತಿ, ಹಿಂಯ ನಾಗರಿಕ, ಮೈಸೂರು



ಗ.ನಾ.ಭಟ್ಟ
ಸಂಗೀತ ನಿರ್ದೇಶಕ
ಮೊ.9019376365

ಸತ್ಯ ನಿತ್ಯ

ಸುಳ್ಳೂ ಧರ್ಮವಾಗುವ ಬಗೆ

ಜಗತ್ತಿನಲ್ಲಿ ಪ್ರಚಲಿತವಿರುವ ಇಂದಿನ ಅನೇಕ ಧರ್ಮಗಳಿಗೆ ಮೂಲಪುರುಷರು, ಸಂಸ್ಥಾಪಕರು ಅಂತ ಇದ್ದಾರೆ. ಉದಾಹರಣೆಗೆ– ಬೌದ್ಧಮತಕ್ಕೆ ಬುದ್ಧ, ಕ್ರೈಸ್ತಮತಕ್ಕೆ ಅಥವಾ ಕ್ರೈಸ್ತಧರ್ಮಕ್ಕೆ ಯೇಸುಕ್ರಿಸ್ತ, ಜೈನ ಧರ್ಮಕ್ಕೆ ಮಹಾವೀರ ಹೀಗೆ ಅನೇಕರನ್ನು ಹೆಸರಿಸಬಹುದು. ಆದರೆ ಭಾರತೀಯ ಸನಾತನ ಧರ್ಮಕ್ಕೆ ಅಥವಾ ಹಿಂದೂ ಧರ್ಮಕ್ಕೆ ಸಂಸ್ಥಾಪಕರು ಯಾರು ಅಂತ ಕೇಳಿದರೆ ಥಟ್ಟನೆ ಹೇಳುವುದಕ್ಕೆ ಆಗುವುದಿಲ್ಲ. ಅದಕ್ಕೆ ಕಾರಣ– ಅದರ ಬಗ್ಗೆ ನಮಗೆ ಸರಿಯಾದ ಅರಿವು ಇಲ್ಲದಿರುವುದು. ಈ ಪ್ರಶ್ನೆ ಹೇಗಿದೆ ಅಂದರೆ ಮಾನವ ನಿರ್ಮಿತವಾದ ಕಟ್ಟಡಗಳಿಗೆ ತಳಪಾಯವಿರುವಂತೆ ಮಾನವ ನಿರ್ಮಿತವಲ್ಲದ ಆಕಾಶಕ್ಕೆ ತಳಪಾಯ ಎಲ್ಲಿದೆ ಅಂತ ಕೇಳಿದಂತಿದೆ.

ಹಿಂದೂ ಸನಾತನ ಧರ್ಮಕ್ಕೆ ಪ್ರಶ್ನಾತೀತನಾದ ಒಬ್ಬ ನಾಯಕ ಅಂತ ಇಲ್ಲವೇ ಇಲ್ಲ ಅಂತ ಹೇಳಿದರೆ ಬಹಳ ಜನರಿಗೆ ಆಶ್ಚರ್ಯವಾಗಬಹುದು. ಇದರ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದವರು ಸಾಕಷ್ಟು ಅಪಪ್ರಚಾರ ಮಾಡಿದ್ದಾರೆ. 'ಪರಕೀಯರೂ', 'ನಮ್ಮವರೂ, ಇದಕ್ಕೆ ಸಾಕಷ್ಟು ನೀರು, ಗೊಬ್ಬರ ಹಾಕಿ ಬೆಳೆಸಿದ್ದಾರೆ. ನಮ್ಮ ಸನಾತನ ಧರ್ಮದ ಹಿರಿಮೆ ಉಗಮಗೊಂಡಿದ್ದು ಸಾವಿರಾರು ಋಷಿ–ಮುನಿಗಳಿಂದ. ವೇದವನ್ನು ಸಾಕ್ಷಾತ್ಕರಿಸಿಕೊಂಡ ಅಥವಾ ರಚಿಸಿದ ಮಹರ್ಷಿಗಳು ಒಳ್ಳೆಯದು ಯಾವುದು ಕೆಟ್ಟದ್ದು ಯಾವುದು, ಎಂಬುದನ್ನು ನಿಶ್ಚಯಿಸಿ ಒಳ್ಳೆಯದನ್ನು 'ಪುರುಷಾರ್ಥ' ಎಂದು ಕರೆದಿದ್ದಾರೆ ಅವು ಒಟ್ಟು ನಾಲ್ಕು. ಅವೇ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ.

ಯಾವುದು ಜೀವ–ನಿರ್ಜೀವ ಜಗತ್ತಿಗೆಲ್ಲ ಆಧಾರವೋ, ಯಾವುದು ಮನುಷ್ಯನ ಕಲ್ಪನೆಯನ್ನು ಅವಲಂಬಿಸದ ನಿತ್ಯ ಸತ್ಯವೋ, ಯಾವುದು ಅನುಭವ, ತರ್ಕ, ಪರೀಕ್ಷೆ ಪ್ರಯೋಗಾದಿ ಪ್ರಮಾಣಗಳಿಗೆ ವಿರುದ್ಧವಲ್ಲವೋ ಮತ್ತು ಅವುಗಳಿಗೆ ಅನುಕೂಲವೋ ಅದು ಮಾತ್ರ ಧರ್ಮ. ಯಾವುದು ನಿತ್ಯ ಜೀವನದಲ್ಲೂ ಕಣ್ಣಿಗೆ ಕಾಣುತ್ತದೆಯೋ, ಯಾವುದು ಇಲ್ಲದಿದ್ದರೆ ಜೀವನ ನಡೆಯುವುದಿಲ್ಲವೋ, ಪೂರ್ವ ಪಶ್ಚಿಮಾದಿ ಭೌಗೋಳಿಕ ಭೇದವೂ, ಜಾತಿ, ಜನಾಂಗ, ಕೋಮು, ಲಿಂಗಭೇದವೂ ಇಲ್ಲದಂತಹ ವಿಶ್ವಮಾನ್ಯ ಸತ್ಯವೋ ಅದು ಧರ್ಮ. ಉದಾಹರಣೆಗೆ– ಹಗಲಾದ ಮೇಲೆ ರಾತ್ರಿ ರಾತ್ರಿಯಾದ ಮೇಲೆ ಹಗಲು– ಹೀಗೆ ಕಾಲ ಉರುಳುತ್ತದೆ. ಕಾಲವೇ ಸೃಷ್ಟಾ, ಕಾಲವೇ ರಕ್ಷಕ, ಕಾಲವೇ ಭಕ್ಷಕ ಎಂಬ ಅರಿವು–ತಿಳುವಳಿಕೆ, ದರ್ಶನ ಎಲ್ಲರ ಅನುಭವದಲ್ಲೂ ಇದೆಯೋ ಅದೇ ಧರ್ಮ. ಇದು ರಾಮಾಯಣ, ಮಹಾಭಾರತದ ಉದ್ದಕ್ಕೂ ಕಾಣುವ ಬೋಧೆ. ಜನನ ಮರಣಗಳೂ ಕೂಡಾ ಹಾಗೆಯೇ.

**ಅಸತೋಮಾ ಸದ್ಗಮಯ ।
ತಮಸೋಮಾ ಜ್ಯೋತಿರ್ಗಮಯ ।
ಮೃತ್ಯೋರ್ಮಾ ಅಮೃತಂ ಗಮಯ ॥**

"ಅವ್ಯವಸ್ಥೆಯಿಂದ ವ್ಯವಸ್ಥೆಯ ಕಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ, ಮೃತ್ಯುವಿನಿಂದ ಅಮೃತತ್ವದೆಡೆಗೆ ಜೀವನ–ಪ್ರಯಾಣ, ಜೀವನ–ವಿಕಾಸ, ಜೀವನ–ಗತಿ ಎಂಬುದೇ ಉಪನಿಷದಾರ್ಥನೆಯಾಗಿದೆ ಇವೂ ಕೂಡಾ ಧರ್ಮದ ವ್ಯಾಪ್ತಿಯಲ್ಲೇ ಬರುತ್ತವೆ. ಒಂದೇ ಬೆಳಕಿನ ಕಿಂಡಿಯಿದ್ದ, ಕತ್ತಲೆಯ ಕೋಣೆಯೊಂದರಲ್ಲಿ ಒಂದು ಪುಷ್ಪಲತಾ ಕುಂಡವನ್ನಿಟ್ಟರೆ ಅದು ಕ್ರಮೇಣ ಆ ಬೆಳಕಿನ ಕಿಂಡಿಯತ್ತಲೇ ಸರಿಯುವುದು, ಬೆಳೆಯುವುದು ಎಲ್ಲರ ಅನುಭವದಲ್ಲೂ ಇರುವ ಸಂಗತಿಯಾಗಿದೆ. ಕ್ರೈಸ್ತ ಮುಸಲ್ಮಾನ, ಯಹೂದ್ಯ, ಬೌದ್ಧ, ಜೈನ, ವೈದಿಕರೆಂಬ ಯಾವ ಭೇದವೂ ಇಲ್ಲದೆ ಎಲ್ಲರ ಅನುಭವಗಳಲ್ಲೂ ಇರುವ ಪರಮ ಸತ್ಯವಾಗಿದೆ. ಇದನ್ನೇ 'ಧರ್ಮ' ಅಂತ ಕರೆಯುವುದು.

'ಮಾನವಧರ್ಮ' ಅಂತ ಹೇಳುತ್ತೇವೆ. ಏನು ಹಾಗೆಂದರೆ... ಅದಕ್ಕೊಂದು ಸುಂದರ ಉದಾಹರಣೆಯಿದೆ. ಸ್ತ್ರೀ ಪುರುಷ ಸಂಯೋಗದಿಂದಲೇ, ಸ್ತ್ರೀಗರ್ಭದಿಂದಲೇ ಅಲ್ಲವೆ? ನಾವೂ ನೀವು ಹುಟ್ಟಿಬರುವುದು! ವಿಶ್ವಾದ್ಯಂತ ಸ್ತ್ರೀಯರು ಋತುಮತಿಯಾಗುವುದು ಯಾವ ಪ್ರತ್ಯೇಕ ಧರ್ಮದಿಂದ. ಜನನ–ಮರಣ ಯಾಕೆ ಒಂದೇ ಪ್ರಕಾರ ದುಃಖದಲ್ಲಿ ಅಳುವುದು ಸುಖದಲ್ಲಿ ನಗುವುದು ಜಗತ್ತಿನಾದ್ಯಂತ ಒಂದೇ ರೀತಿ ಇರುವುದು ಯಾಕೆ ಇದನ್ನೇ 'ಮಾನವಧರ್ಮ' ಅಂತ ಕರೆಯುವುದು. ತಂದೆಯನ್ನು ಮಗ 'ಅಪ್ಪ' ಅಂತ ಕರೆಯುವುದು, ಅವನನ್ನು ಹೆಂಡತಿ 'ಯಜಮಾನ' ಅಂತ ವ್ಯವಹರಿಸುವುದು, ಸರಕಾರ ಅವನನ್ನು 'ಪ್ರಜೆ' ಅಂತ ಗುರುತಿಸುವುದು, ಕಛೇರಿಯಲ್ಲಿ ಅವನನ್ನು 'ಅಧಿಕಾರಿ ಅಥವಾ ಸಹೋದ್ಯೋಗಿ' ಅಂತ ಸಂಬೋಧಿಸುವುದು ಎಲ್ಲಾ ದೇಶ, ಕಾಲ, ಜನಾಂಗ, ಜಾತಿಗಳಲ್ಲೂ ಕಾಣಬರುವ ಸತ್ಯವೇ ಆಗಿದೆ. ಇದನ್ನೇ "ಧರ್ಮ" ಅಂತ ಕರೆಯುವುದು. ಇದು ಸಾರ್ವಕಾಲಿಕ, ವಿಶಾಲ, ವ್ಯಾಪಕ.


'ಧರ್ಮ' ಎಂದರೆ ಒಳ್ಳೆಯ ನಡವಳಿಕೆ. ಆತ್ಮದ ಮೊಗ್ಗಿನ ಅರಳಿಕೆ. ನಾವು ಹೇಗೆ ನಡೆದುಕೊಂಡರೆ ನಮ್ಮ ಸುತ್ತಮುತ್ತಲಿನ ಯಾರ ಬಾಳಿಗೂ ಕೇಡಾಗದೆ ಎಲ್ಲರ ಬಾಳೂ ಸೊಗಸುಗೊಂಡು ನಮ್ಮ ಬಾಳೂ ಸೊಗಸುಗೊಳ್ಳುತ್ತದೆಯೋ ಅಂಥಹ ನಡವಳಿಕೆಯೇ 'ಧರ್ಮ'. ಧರ್ಮವು ಜೀವನವನ್ನು ಧರಿಸಬೇಕು. ಒಬ್ಬನ ಜೀವನವನ್ನು ಮಾತ್ರವಲ್ಲ. ಅದು ಎಲ್ಲರ ಜೀವನವನ್ನೂ ಧರಿಸಿ ಪೋಷಿಸುವಂಥಾದ್ದಾಗಬೇಕು. ಇದನ್ನೇ "ಧಾರಣಾದ್ಧರ್ಮ ಮಿತ್ಯಾಹುಃ । ಧರ್ಮೋ ಧಾರಯತಿ ಪ್ರಜಾಃ ।" ಎಂದು ಕರೆದದ್ದು .ಅದು ಮನುಷ್ಯನ ಪಾಲಿಗೆ ಆತ್ಮವಿಕಾಸವೂ, ಅವನ ಲೋಕಬಾಂಧವ್ಯದಲ್ಲಿ ಆತ್ಮಸಂಯಮವೂ ಆಗಿರುತ್ತದೆ. 'ಧರ್ಮ' ಎಂಬುದರಲ್ಲಿ ಸತ್ಯ, ಶುಚಿ, ಗುಣಶಕ್ತಿಗಳ ಪ್ರಕಾಶ, ಜನರಲ್ಲಿ ಪರಸ್ಪರ ನ್ಯಾಯ, ಸಹಾನುಭೂತಿ, ಭೂತದಯೆ, ವಿಶ್ವಜೀವಗೌರವ ಎಲ್ಲಾ ಸೇರಿರುತ್ತವೆ. ಹಾಗೆಯೇ ದೇವರ ಧ್ಯಾನ, ಪೂಜೆ, ವ್ರತ, ಯಜ್ಞ, ದೀಕ್ಷೆ, ದಾನ, ಪರೋಪಕಾರ, ತಪಸ್ಸು ಇಂಥ ಪುಣ್ಯಕಾರ್ಯಗಳೂ ಸೇರಿರುತ್ತವೆ. ಮನುಸ್ಮೃತಿ ಧರ್ಮದ ಹೆಗ್ಗುರುತನ್ನು ಹೀಗೆ ತಿಳಿಸಿದೆ–

**ಧೃತಿಃ ಕ್ಷಮಾ ದಮೋಽಸ್ತೇಯಂ
ಶೌಚಮಿಂದ್ರಿಯನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ
ದಶಕಂ ಧರ್ಮಲಕ್ಷಣಮ್ ॥**

"ಕರ್ತವ್ಯದಲ್ಲಿ ದಾರ್ಢ್ಯ, ಕ್ಷಮೆ, ತನ್ನ ಮೈಯ ಮೇಲೆ ಹತೋಟಿ, ಪರರೊಡವೆಯನ್ನು ಮುಟ್ಟದಿರುವುದು, ಪರಿಶುದ್ಧಿ, ಇಂದ್ರಿಯಗಳನ್ನು ಹದ್ದಿನಲ್ಲಿರಿಸುವುದು, ಬುದ್ಧಿವ್ಯವಸಾಯ, ವಿದ್ಯಾರ್ಜನೆ, ಸತ್ಯನಿಷ್ಠೆ, ದ್ವೇಷವಿಲ್ಲದಿರುವುದು– ಈ ಹತ್ತು ಗುಣಗಳನ್ನು ಸಾಮಾನ್ಯಧರ್ಮದ ಲಕ್ಷಣ" ಎಂದು ಮನು ಗುರುತಿಸುತ್ತಾನೆ

ಧರ್ಮದ ಇನ್ನೊಂದು ಭಾಗ 'ಅರ್ಥ'– ಅರ್ಥವೆಂದರೆ ಹಣ, ಚಿನ್ನ, ಭೂಮಿ, ರತ್ನ ಮೊದಲಾದ ಸಂಪತ್ತು. ಜೀವನಕ್ಕೆ ಸರಿಯಾದ ಕ್ರಮ ಧರ್ಮವಾದರೆ ಜೀವನಕ್ಕೆ ಆಧಾರ ಅನ್ನವಸ್ತ್ರ ಸಾಮಗ್ರಿ. ಇದನ್ನು ಸಂಪಾದಿಸಿಕೊಳ್ಳುವುದು ಧರ್ಮದಲ್ಲೇ ಸೇರುತ್ತದೆ. ಆದರೆ ಸಂಪತ್ತಿನಲ್ಲಿ ಆವೇಶವನ್ನುಂಟು ಮಾಡುವ ಗುಣ ಅಡಗಿಕೊಂಡಿರುತ್ತದೆ. ಕೆಲವು ಬಗೆಯ ಆಹಾರ ಪಾನೀಯಗಳಲ್ಲಿ ಬಲ ಕೊಡುವ ಶಕ್ತಿಯಿರುತ್ತದೆ. ಆದರೆ ಅದನ್ನು ಮಿತಿಯರಿತು ಸೇವಿಸಬೇಕು. ಮಿತಿಮೀರಿದರೆ ತಲೆಗೆ ಮತ್ತೇರುತ್ತದೆ. ಹಣದಿಂದಲೂ ಹಾಗಾಗುತ್ತದೆ. ಧನ ಪಿಶಾಚಿ ನಮ್ಮನ್ನು ಹಿಡಿದಾಗ ಧರ್ಮ ಮರೆತುಹೋಗುತ್ತದೆ. ಅಂಥ ಧರ್ಮಭಂಗಕ್ಕೆ ಅವಕಾಶ ಕೊಡದಂತೆ ಧನಸಂಪಾದನೆ ಮಾಡುವುದು ಧರ್ಮದ ಒಂದು ಅವಶ್ಯ ಕರ್ತವ್ಯವೇ ಆಗಿದೆ. ಆದುದರಿಂದ ಅರ್ಥ ಸಂಪಾದನೆಯಲ್ಲಿ ಉದಾಸೀನನಾಗಬಾರದೆಂದು ವೇದ ವಿಧಿಸಿದೆ. "ಭೂತ್ಯೈ ನ ಪ್ರಮದಿತವ್ಯಮ್।" "ಹಣಸಂಪಾದನೆಯಲ್ಲಿ ಅಜಾಗರೂಕನಾಗ ಬೇಡ" "ತತೋ ಮೇ ಶ್ರಿಯಮಾವಹ ।" "ನನಗೆ ಹಣ, ಸಂಪತ್ತು ಹರಿದುಬರಲಿ" ಎಂದು ನಮ್ರನಾಗಿ ಕೇಳಿಕೊಳ್ಳುವುದು.

ಧರ್ಮದ ಮತ್ತೊಂದು ಭಾಗ 'ಕಾಮ'– ಕಾಮ ಎಂದರೆ ಆಸೆ. ಅದು ಪ್ರಾಣಧಾರಣೆಗಿಂತ ಹೆಚ್ಚಾಗಿ ಬೇಕೆನ್ನಿಸುವ ಸುಖಸಂತೋಷಗಳ ಕಾಮನೆ. ಪ್ರೇಮ, ಸ್ನೇಹ, ಮೃಷ್ಟಾನ್ನಭೋಜನ, ಸೌಂದರ್ಯ, ಸಂಗೀತ, ನರ್ತನ, ಚಿತ್ರಪಟ ಇಂಥವೆಲ್ಲ ಕಾಮದ ನಾನಾರೂಪಗಳು. ಅರ್ಥದಲ್ಲಿ ಹೇಗೋ ಹಾಗೆ ಕಾಮದಲ್ಲೂ ಮನುಷ್ಯ ತನ್ನನ್ನು ತಾನು ಮರೆತು ಧರ್ಮದ ಎಲ್ಲೆಯನ್ನು ಮೀರುವುದುಂಟು. ಹಾಗೆ ಅತಿಕ್ರಮ ಮಾಡದೆ ಇರುವ ಕಾಮಕ್ಕೆ ಧರ್ಮ ವ್ಯವಸ್ಥೆಯಲ್ಲಿ ಒಂದು ಮುಖ್ಯ ಸ್ಥಳವುಂಟು. ಭಗವದ್ಗೀತೆಯಲ್ಲಿ ಭಗವಂತ "ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ" ಎಂದು ಹೇಳಿಕೊಂಡಿದ್ದಾನೆ. ಸುಖಪಡುವುದು ಪಾಪವಲ್ಲ. ಸಂತೋಷ ಅನುಭವಿಸುವುದು ದೋಷವಲ್ಲ. ಆದರೆ ಧರ್ಮವನ್ನು ಮರೆಯಬಾರದು. ಅರ್ಥ ಮತ್ತು ಕಾಮ ಪುರುಷನ ಇಚ್ಛೆಗೂ, ಪುರುಷನ ಬುದ್ಧಿಗೂ ವಿಕಾಸಸ್ಥಾನಗಳು. ಇವುಗಳಿಂದಲೇ ನಾಗರಿಕತೆ, ವಿಜ್ಞಾನ, ವಾಣಿಜ್ಯ, ಕೈಗಾರಿಕೆ, ಯಂತ್ರ ಚಾತುರ್ಯ, ಸಾಮಾಜಿಕ ಮರ್ಯಾದೆ, ಜನ ಜನಾಂಗ ಸಂಬಂಧ ಬೆಳೆದಿರುವುದು. ಅರ್ಥಕಾಮಗಳಿಂದ ಜೀವಕ್ಕೆ ವಿಕಾಸವುಂಟಾದರೆ ಧರ್ಮದಿಂದ ಜೀವಕ್ಕೆ ಹಿತಚಿಕಿತ್ಸೆಯುಂಟಾಗುತ್ತದೆ. ಈ ಮೂರು ಸಾಮಾನ್ಯ ಉದ್ದೇಶಗಳನ್ನು ಧರ್ಮಶಾಸ್ತ್ರದಲ್ಲಿ ತ್ರಿವರ್ಗವೆಂದು ಪ್ರಶಂಸೆ ಮಾಡಿದ್ದಾರೆ. ಇನ್ನು **ಮೋಕ್ಷ**. ಇದು ಸಾಮಾನ್ಯ ಮನುಷ್ಯರ ಅನುಭವಕ್ಕೆ ದೂರವಾದ ವಿಷಯ. ಇದನ್ನು ಅಪವರ್ಗವೆಂದು ಕರೆದಿದ್ದಾರೆ. ಇದೊಂದು ಅಸಾಧಾರಣ ವಿಷಯ.



> **"ನಮ್ಮಲ್ಲಿ ಧರ್ಮ ಅಂದಕೂಡಲೆ ಒಂದಿಷ್ಟು ಗೋಜಲು, ಗೊಂದಲ ಮಾಡಿಕೊಳ್ಳುವುದಿದೆ. ಧರ್ಮದ ಜತೆಗೆ ಮತ, ಪಂಥ, ದರ್ಶನ ಎಲ್ಲಾ ಸೇರಿಸಿಕೊಂಡು ಧರ್ಮದ ನಿಜ ಅರ್ಥವನ್ನು ಕಾಣದಂತೆ ಮಾಡಿಬಿಡುತ್ತಾರೆ. ಈ ಮೊದಲೇ ಹೇಳಿದಂತೆ 'ಧರ್ಮ' ವಿಶಾಲ– ವ್ಯಾಪಕ. ಮತ ಹಾಗಲ್ಲ ಅದು ವೈಯಕ್ತಿಕ. ಮತ ಎಂದರೆ ಅಭಿಪ್ರಾಯ, ಗ್ರಹಿಕೆ, ಬುದ್ಧಿಗೆ ಎಟುಕಿದ್ದು, ಆಯ್ಕೆ ಎಂಬೆಲ್ಲಾ ಅರ್ಥಗಳಿವೆ. ರಾಜಕೀಯ ಸ್ಥಾನಕ್ಕೆ ನಾಲ್ಕು ಜನ ಸ್ಪರ್ಧಿಸಿದರೆ ಒಬ್ಬರನ್ನು ಬಯಸಿ ಅವರಿಗೆ ವೋಟು ಕೊಟ್ಟು ಗೆಲ್ಲಿಸುವುದು ಆಯ್ಕೆಯೆನಿಸಿಕೊಳ್ಳುತ್ತದೆ.**

ನಮ್ಮಲ್ಲಿ ಧರ್ಮ ಅಂದಕೂಡಲೆ ಒಂದಿಷ್ಟು ಗೋಜಲು, ಗೊಂದಲ ಮಾಡಿಕೊಳ್ಳುವುದಿದೆ. ಧರ್ಮದ ಜತೆಗೆ ಮತ, ಪಂಥ, ದರ್ಶನ ಎಲ್ಲಾ ಸೇರಿಸಿಕೊಂಡು ಧರ್ಮದ ನಿಜ ಅರ್ಥವನ್ನು ಕಾಣದಂತೆ ಮಾಡಿಬಿಡುತ್ತಾರೆ. ಈ ಮೊದಲೇ ಹೇಳಿದಂತೆ 'ಧರ್ಮ' ವಿಶಾಲ– ವ್ಯಾಪಕ. ಮತ ಹಾಗಲ್ಲ. ಅದು ವೈಯಕ್ತಿಕ. ಮತ ಎಂದರೆ ಅಭಿಪ್ರಾಯ, ಗ್ರಹಿಕೆ, ಬುದ್ಧಿಗೆ ಎಟುಕಿದ್ದು, ಆಯ್ಕೆ ಎಂಬೆಲ್ಲಾ ಅರ್ಥಗಳಿವೆ. ರಾಜಕೀಯ ಸ್ಥಾನಕ್ಕೆ ನಾಲ್ಕು ಜನ ಸ್ಪರ್ಧಿಸಿದರೆ ಒಬ್ಬರನ್ನು ಬಯಸಿ ಅವರಿಗೆ ವೋಟು ಕೊಟ್ಟು ಗೆಲ್ಲಿಸುವುದು ಆಯ್ಕೆಯೆನಿಸಿಕೊಳ್ಳುತ್ತದೆ. ಅದು ಮತ. ನಿನ್ನ 'ಮತ' ಯಾರಿಗೆ ಅಂತ ಕೇಳುವುದು ಈ ಹಿನ್ನೆಲೆಯಲ್ಲಿ. 'ಮತಗಟ್ಟೆ' ಅನ್ನುವುದು ಮತ್ತೊಂದು ರೂಪಾಂತರ. ಅದು ನಮ್ಮ Personal ಆಯ್ಕೆ. ಅದು ನಮಗೆ ಸರಿಕಂಡಿದ್ದು, ಒಪ್ಪಿತವಾದದ್ದು. "ಜಗನ್ಮಿಥ್ಯಾ ಬ್ರಹ್ಮ ಸತ್ಯ" ಎಂದು ಶಂಕರಾಚಾರ್ಯರು ಹೇಳಿದರು. ಅದನ್ನು ಯಾರೂ 'ಶಂಕರಧರ್ಮ' ಅಂತ ಹೇಳುವುದಿಲ್ಲ. ಅದು ನಮಗೆ ಒಪ್ಪಿಗೆಯಾಗಲಿ ಬಿಡಲಿ ವಿಶಾಲವಾದ ಸನಾತನ ಧರ್ಮಕ್ಕೆ ಶಂಕರರ ವ್ಯಾಖ್ಯೆ ಅಷ್ಟೇ! ಅವರ ಅಭಿಪ್ರಾಯ, ಗ್ರಹಿಕೆ ಅಷ್ಟೇ! ಅವರ ತರ್ಕ, ವಿವರಣೆ ಆಧಾರ ಅವರಿಗಿದೆ. ಅದು ಎಲ್ಲರಿಗೂ ಮಾನ್ಯವಾಗಬೇಕಿಲ್ಲ. ಹಾಗೆಂದು ಅದನ್ನು ಇಟ್ಟುಕೊಂಡು ಜಗಳ ಮಾಡಬೇಕಿಲ್ಲ. ಆದರೆ ಅದು ಆಗುತ್ತಿದೆ. ಅದು ಬೇರೆ ವಿಚಾರ. ಇದು ಮಧ್ವ ರಾಮಾನುಜ, ವಲ್ಲಭ, ಚೈತನ್ಯ, ಅಲ್ಲಮ, ಪುರಂದರ ಎಲ್ಲರಿಗೂ ಅನ್ವಯಿಸುತ್ತದೆ.

'ಪಂಥ' ಎಂದರೆ ಧರ್ಮವನ್ನು ಆಧರಿಸಿ ಬಂದ ಒಂದು ಜೀವನಕ್ರಮ. ಸಿಕ್ಕಸಿಕ್ಕದ್ದೆಲ್ಲ ಪಂಥ ಆಗದು. ಗುರುನಾನಕ್ ಪಂಥ, ಕಬೀರ ಪಂಥ, ನಾಥ ಪಂಥ, ಶಾಕ್ತ ಪಂಥ, ನಾರಾಯಣಗುರು ಪಂಥ, ಭಕ್ತಿ ಪಂಥ ಹೀಗೆ ಹಲವು ಪಂಥಗಳಿವೆ. ಇವೆಲ್ಲ ಭಾರತೀಯ ಧರ್ಮದ ಹರವಿನಲ್ಲೇ ಬರುತ್ತವೆ. ಮತ, ಪಂಥ, ದರ್ಶನ ಇವುಗಳಿಗೆಲ್ಲಾ ಒಂದು ಮಿತಿ, ಒಂದು 'ಲಿಮಿಟ್' ಅಂತ ಇದೆ. ಆದರೆ ಧರ್ಮ ಹಾಗಲ್ಲ. ಅದು ದುರ್ವಿಜ್ಞೇಯ. ಅಂದರೆ ತಿಳಿಯಲು ಕಷ್ಟಸಾಧ್ಯವಾದುದು. ಸುಳ್ಳೂ ಧರ್ಮವಾಗುವ, ಹಿಂಸೆಯೂ ಧರ್ಮವಾಗುವ ಸಂದರ್ಭವಿದೆ. ಇದರ ಸೂಕ್ಷ್ಮವನ್ನು, ಮರ್ಮವನ್ನು ತೋರಿಸಿ ಕೊಟ್ಟವರು ಶ್ರೀರಾಮ, ಶ್ರೀಕೃಷ್ಣನಂತಹವರು.

ರಾಮಾಯಣದಲ್ಲಿ ಒಂದು ಘಟನೆ ಬರುತ್ತದೆ. ಶ್ರೀರಾಮ ವನವಾಸಕ್ಕೆ ಹೊರಟ ಸಂದರ್ಭ ಅದು. ಅವನು ಅಡವಿಗೆ ಹೋಗುವುದು ದಶರಥನಿಗೆ ಇಷ್ಟವಿಲ್ಲ. ಸುಮಂತ್ರ ರಾಮನನ್ನು ಬಿಟ್ಟುಬರುವುದಕ್ಕೆಂದು ರಥವನ್ನು ಸಜ್ಜುಗೊಳಿಸಿ ಹೊರಟಿದ್ದಾನೆ. ರಥ ವೇಗದಿಂದ ಹೊರಡಲು ತೊಡಗಿದೆ. ಆಗ ದಶರಥ– "ನಿಲ್ಲು ನಿಲ್ಲು. ಹೋಗಬೇಡ" ಅಂತ ಕೂಗಿಕೊಳ್ಳುತ್ತಾನೆ. ಅದಕ್ಕೆ ರಾಮ ಸುಮಂತ್ರನಿಗೆ "ನಿಲ್ಲಿಸಬೇಡ. ನಡೆ ನಡೆ" ಎಂದು ಹೇಳುತ್ತಾನೆ. "ತಿಷ್ಠೇತಿ ರಾಜಾ ಚುಕ್ರೋಶ ಯಾಹಿ ಯಾಹೀತಿ ರಾಘವಃ" ಎಂಬುದು ಅಯೋಧ್ಯಾಕಾಂಡದಲ್ಲಿ ಬರುವ ವಾಕ್ಯ. ದಶರಥನೇನಾದರೂ ಆಮೇಲೆ ನಿನ್ನನ್ನು ಗದರಿಸಿ ಕೇಳಿದರೆ "ನೀವು ಹೇಳಿದ್ದು ಗದ್ದಲದಲ್ಲಿ ಕೇಳಲಿಲ್ಲವೆಂದು ಹೇಳಿಬಿಡು" ("ನಾಶ್ರೌಷಮಿತಿ") ಅಂತ ಹೇಳುತ್ತಾನೆ.

ಇಲ್ಲಿ ರಾಮ ಸುಮಂತ್ರನ ಬಳಿ ಸುಳ್ಳು ಹೇಳುವಂತೆ ಪ್ರಚೋದಿಸಲಿಲ್ಲವೆ? ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಹೌದು. ಇಲ್ಲಿ ದುಃಖದ ಪ್ರಸಂಗವನ್ನು ಹೆಚ್ಚು ಬೆಳೆಸಬಾರದು ಎಂಬುದು ಒಂದು ನೀತಿ. ಹಾಗೆಯೇ ದಶರಥನಿಗೆ ರಾಮನ ಮೇಲೆ ಎಲ್ಲಿಲ್ಲದ ಪ್ರೀತಿ, ವ್ಯಾಮೋಹವಿತ್ತು. ಅದರಿಂದಾಗಿ ಆತ ರಾಮನನ್ನು ಬಿಡಲೊಲ್ಲ. ಅದು ಹಾಗೆಯೇ ಬೆಳೆಯುತ್ತಾ ಹೋದರೆ ರಾಮನ ವನವಾಸ ದೀಕ್ಷೆ ನೆರವೇರುವುದಿಲ್ಲ. ಅಂತಹ ಸಂದರ್ಭದಲ್ಲಿ ಸುಳ್ಳು ಹೇಳಿದರೂ ಪಾಪವಾಗುವುದಿಲ್ಲ; ಅಧರ್ಮವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಸುಳ್ಳೂ ಧರ್ಮಕ್ಕೇ ಪೋಷಕವಾಗುತ್ತದೆ ಅನ್ನುವುದು ರಾಮನ ಖಚಿತ ಅಭಿಪ್ರಾಯ.

**ಸತ್ಯಮೇವ ತು ವಕ್ತವ್ಯಂ ವಕ್ತವ್ಯಮನೃತಂ ಭವೇತ್।
ಯತ್ರಾನೃತಂ ಭವೇತ್ ಸತ್ಯಂ ಸತ್ಯಂ ಚಾಪ್ಯನೃತಂ ಭವೇತ್ ॥**

"ಸತ್ಯವನ್ನೇ ಹೇಳಬೇಕು. ಸುಳ್ಳನ್ನೂ ಹೇಳಬೇಕಾದೀತು! ಸುಳ್ಳೇ ಸತ್ಯದಂತೆ ಒಳ್ಳೆಯದಾಗುವ ಸಂದರ್ಭವೂ ಉಂಟು. ಸತ್ಯವೇ ಸುಳ್ಳಿನಂತೆ ಕೇಡಾಗುವ ಸಂದರ್ಭವೂ ಉಂಟು". ರಾಮ ಸುಳ್ಳನ್ನು ಧರ್ಮವಾಗುವಂತೆ ಮಾಡಿದ ಒಂದು ಘಟನೆ ಇದು.

ಮಂದಗತಿಯ ಕಾಮಗಾರಿಯಿಂದ ವಾಹನ ಸಂಚಾರ ಮಾತ್ರವಲ್ಲ ವಾಣಿಜ್ಯ ವಹಿವಾಟಿಗೂ ಭಾರೀ ಪೆಟ್ಟು

ವ್ಯಾಪಾರಿಗಳು, ಸಾರ್ವಜನಿಕರ ಅಸಮಾಧಾನ

ಮೈಸೂರು, ಡಿ.25(ಎಸ್‌ಪಿಎನ್)– ಹಲವು ದಿನಗಳ ಹಿಂದೆ ಆರಂಭವಾದ ಯುಜಿಡಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವುದರಿಂದ ಲಷ್ಕರ್ ಮತ್ತು ಮಂಡಿ ಮೊಹಲ್ಲಾದ ವ್ಯಾಪಾರಿಗಳು ಮತ್ತು ವಾಹನ ಸವಾರರಿಗೆ ತೀವ್ರ ತೊಂದರೆಯಾಗುತ್ತಿದೆ ಎಂಬ ದೂರು ಕೇಳಿ ಬರುತ್ತಿವೆ.

ಲಷ್ಕರ್ ಪೊಲೀಸ್ ಠಾಣೆಯಿಂದ ಸಂತ ಫಿಲೋಮಿನಾ ಚರ್ಚ್‌ವರೆಗೆ ಅಶೋಕ ರಸ್ತೆಯಲ್ಲಿ ಎರಡು ತಿಂಗಳ ಹಿಂದೆ ಆರಂಭಿಸಿದ ಯುಜಿಡಿ ಪೈಪ್‌ಲೈನ್ ಕಾಮಗಾರಿ ಬಹುತೇಕ ಮುಗಿದಿದ್ದು, ಇದಕ್ಕಾಗಿ ತೋಡಿದ್ದ ಗುಂಡಿಗಳಿಗೆ ಬರೀ ಜಲ್ಲಿಕಲ್ಲು ಹಾಕಿ ಮುಚ್ಚಿದ್ದಾರೆ. ಈ ಜಲ್ಲಿಕಲ್ಲು ರಸ್ತೆಯೆಲ್ಲಾ ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡು ವಾಹನ ಸವಾರರು, ಪಾದಚಾರಿಗಳು ಓಡಾಡುವಾಗ ಬಿದ್ದು, ಎಷ್ಟೋ ಮಂದಿ ಗಾಯಗೊಂಡಿದ್ದಾರೆ.

ಕ್ರಿಸ್‌ಮಸ್ ಆಚರಣೆಗೆ ಸಂತ ಫಿಲೋಮಿನಾ ಚರ್ಚ್‌ಗೆ ಭಕ್ತರೊಬ್ಬರು ತಮ್ಮ ಬೈಕ್‌ನಲ್ಲಿ ತೆರಳುತ್ತಿದ್ದರು. ಅವರು ಗುಂಡಿ ತಪ್ಪಿಸಲು ಹೋಗಿ ಆಯಾತಪ್ಪಿ ಬಿದ್ದು ಗಾಯಗೊಂಡಿದ್ದಾರೆ. ಇದಕ್ಕೆ ಹೊಣೆ ಯಾರು ಎಂದು ಪ್ರಶ್ನಿಸಿದ ಅವರ ಸಂಬಂಧಿಕರು, ಮೈಸೂರು ನಗರ ಒಳಚರಂಡಿ ವಿಭಾಗದ ಸಿಬ್ಬಂದಿ ಸಾಂಸ್ಕೃತಿಕ ನಗರವನ್ನು ಹಾಳು ಮಾಡುವಂತಹ ಕೆಲಸ ಮಾಡುತ್ತಿದೆ. ಇವರನ್ನು ನಿಯಂತ್ರಿಸುವವರೇ ಇಲ್ಲವೇನೊ ಎಂದೆನಿಸುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದು, ಕೂಡಲೇ ಈ ರಸ್ತೆಗೆ ಡಾಂಬರ್ ಹಾಕುವಂತೆ ಮನವಿ ಮಾಡಿದ್ದಾರೆ.

ಮಂಡಿ ಮೊಹಲ್ಲಾ ಹಾಗೂ ಲಷ್ಕರ್ ಮೊಹಲ್ಲಾಗಳಲ್ಲಿ ಬೆಳಗ್ಗೆಯಿಂದ ರಾತ್ರಿಯವರೆಗೆ ಭಾರೀ ಪ್ರಮಾಣದಲ್ಲಿ ನಾನಾ ವಾಣಿಜ್ಯ ವಹಿವಾಟು ನಡೆಯುತ್ತದೆ. ಇಲ್ಲಿಗೆ ಮೈಸೂರು ಜಿಲ್ಲೆಯ ವಿವಿಧ ಗ್ರಾಮಗಳಿಂದ ನಾನಾ ಕೆಲಸಗಳಿಗಾಗಿ ನಿತ್ಯ ಬೈಕು, ಇನ್ನಿತರ ವಾಹನಗಳಲ್ಲಿ ಆಗಮಿಸಿ, ವ್ಯವಹಾರ ನಡೆಸುತ್ತಾರೆ. ಇಂತಹ ಸಂದರ್ಭದಲ್ಲಿ ತಿಂಗಳುಗಟ್ಟಲೇ ಕಾಮಗಾರಿಗಾಗಿ ರಸ್ತೆಗಳನ್ನು ಬಂದ್ ಮಾಡಿರುವುದರಿಂದ ಈ ಮಾರ್ಗದ ವ್ಯಾಪಾರಿಗಳು, ಗ್ರಾಹಕರು ತಮ್ಮ ಅಂಗಡಿ ಮುಂಗಟ್ಟು ತಲುಪಲು ಹರಸಾಹಸ ಪಡುವಂತಾಗಿದೆ. ಅಂತೆಯೇ ಮಂಡಿ ಪೊಲೀಸ್ ಠಾಣೆ ಮುಂಭಾಗ(ಕಬೀರ್ ರಸ್ತೆಯಲ್ಲಿ)ದ ವೃತ್ತದಿಂದ ಅಶೋಕ ರಸ್ತೆಯವರೆಗೆ ಯುಜಿಡಿ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ನಿಧಾನವಾಗಿ ಸಾಗುತ್ತಿದೆ. ಈ ಕಾಮಗಾರಿ ಆರಂಭಿಸುವ ಮುನ್ನ ಅಧಿಕಾರಿಗಳು, ಕೇವಲ 15 ದಿನದೊಳಗೆ ಕಾಮಗಾರಿ ಮುಗಿಸುವುದಾಗಿ ಭರವಸೆ ನೀಡಿದ್ದರು. ಇದೀಗ ಒಂದೂವರೆ ತಿಂಗಳು ಕಳೆದರೂ ಈ ಕಾಮಗಾರಿ ಮುಗಿಯುವ ಲಕ್ಷಣ ಕಾಣುತ್ತಿಲ್ಲ ಎಂದು ಇಲ್ಲಿನ ನಿವಾಸಿ ನಚಿಕೇತ 'ಮೈಸೂರು ಮಿತ್ರ'ನಲ್ಲಿ ದೂರಿದರು.

ಈ ಕುರಿತು ಅಧಿಕಾರಿಗಳನ್ನು ಪ್ರಶ್ನಿಸಿದರೆ, ಬೇರೆ ಕಥೆಯನ್ನೇ ಹೇಳುತ್ತಿದ್ದಾರೆ. ಹಾಗಾಗಿ ನಗರದ ಹೃದಯ ಭಾಗದ ಇವೆರಡು (ಮಂಡಿ ಮತ್ತು ಲಷ್ಕರ್ ಮೊಹಲ್ಲಾ) ಮೊಹಲ್ಲಾದಲ್ಲಿ ಹಮ್ಮಿಕೊಂಡಿರುವ ಯುಜಿಡಿ ಪೈಪ್‌ಲೈನ್ ಕಾಮಗಾರಿಗೆ ನಾವ್ಯಾರು ವಿರೋಧಿಸುತ್ತಿಲ್ಲ. ಆದರೆ, ಈ ಕಾಮಗಾರಿಗಳನ್ನು ಬೇಗ ಮುಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ ಮಾಡುತ್ತಿದ್ದೇವೆ. ನಗರದ ಪ್ರಮುಖ ರಸ್ತೆಗಳಲ್ಲಿ ಕಾಮಗಾರಿ ಆರಂಭಿಸಿ ತಿಂಗಳುಗಟ್ಟಲೇ ಹಾಗೇ ಬಿಟ್ಟರೆ ಇಲ್ಲಿಗೆ ಗ್ರಾಹಕರು ಬಂದು–ಹೋಗಲು ತೊಂದರೆಯಾಗುತ್ತದೆ ಎಂಬ ಕನಿಷ್ಠ ಪರಿಜ್ಞಾನ ಒಳಚರಂಡಿ ವಿಭಾಗದ ಅಧಿಕಾರಿಗಳಿಗಿಲ್ಲವೇ ಎಂದು ಪ್ರಶ್ನಿಸಿದ್ದಾರೆ.





ಮುರುಘಾ ಮಠಕ್ಕೆ ಆಡಳಿತಾಧಿಕಾರಿ ನೇಮಕ ವಿರೋಧಿಸಿ ಮಠಾಧೀಶರು, ಭಕ್ತರ ಧರಣಿ

ಚಿತ್ರದುರ್ಗ: ಮುರುಘಾ ಮಠಕ್ಕೆ ಆಡಳಿತಾಧಿಕಾರಿ ನೇಮಕ ಮಾಡಿದ ಸರ್ಕಾರದ ಕ್ರಮವನ್ನು ವಿರೋಧಿಸಿ ಬಸವಪ್ರಭು ಸ್ವಾಮೀಜಿ ನೇತೃತ್ವದಲ್ಲಿ ಸೋಮವಾರ ಧರಣಿ ನಡೆಸಲಾಯಿತು. ನೇಮಕಾತಿ ಆದೇಶವನ್ನು ಸರ್ಕಾರ ಕೂಡಲೇ ರದ್ದುಪಡಿಸಬೇಕು ಹಾಗೂ ಆಡಳಿತಾಧಿಕಾರಿ ಹಿಂದಕ್ಕೆ ಕರೆಸಿಕೊಳ್ಳಬೇಕು ಎಂದು ಆಗ್ರಹಿಸಿದರು. ಮಠಾಧೀಶರು ಮುರುಘಾ ಮಠದಿಂದ ಜಿಲ್ಲಾಧಿಕಾರಿ ಕಚೇರಿಗೆ ಬಂದು ಧರಣಿ ಕುಳಿತರು. ಭಕ್ತರು ಹಳೆ ಮಾಧ್ಯಮಿಕ ಶಾಲಾ ಆವರಣದಿಂದ ಹೊರಟು ಪ್ರವಾಸಿ ಮಂದಿರ, ಒನಕೆ ಓಬವ್ವ ವೃತ್ತದ ಮೂಲಕ ಧರಣಿ ಸ್ಥಳಕ್ಕೆ ಧಾವಿಸಿದರು. ಸರ್ಕಾರದ ಕ್ರಮವನ್ನು ಒಕ್ಕೊರಲಿನಿಂದ ಖಂಡಿಸಿದರು. ಮಠದಿಂದ ಜಿಲ್ಲಾಧಿಕಾರಿ ಕಚೇರಿಗೆ ಪ್ರತಿಭಟನಾ ಮೆರವಣಿಗೆ ನಡೆಸಲು ಪೊಲೀಸರು ಅನುಮತಿ ನೀಡಲಿಲ್ಲ.

ಮುರುಘಾ ಮಠದ ಉಸ್ತುವಾರಿ ಆಗಿದ್ದ ಬಸವಪ್ರಭು ಸ್ವಾಮೀಜಿ ಮಾತನಾಡಿ, ಮುರುಘಾ ಮಠಕ್ಕೆ ಭವ್ಯ ಪರಂಪರೆ ಇದೆ. ಸಮಾಜ ಸೇವೆಯಲ್ಲಿ ಮಠ ಛಾಪು ಮೂಡಿಸಿದೆ. ಶಿಕ್ಷಣ ಕ್ಷೇತ್ರಕ್ಕೆ ಒತ್ತು ನೀಡಿದ ಮುರುಘಾ ಮಠ, ಬಡ ವಿದ್ಯಾರ್ಥಿಗಳಿಗೆ ಮೊದಲು ಹಾಸ್ಟೆಲ್ ಸ್ಥಾಪಿಸಿತು. ಬೆಳಗಾವಿ, ಮಹಾರಾಷ್ಟ್ರ, ಮೈಸೂರು, ಕಾಶಿ ಸೇರಿ ದೇಶದ ಹಲವೆಡೆ ಹಾಸ್ಟೆಲ್ ಸ್ಥಾಪಿಸಿದ ಕೀರ್ತಿ ಮುರುಘಾ ಮಠಕ್ಕೆ ಸಲ್ಲುತ್ತದೆ. ರಾಜ್ಯದ ಉಳಿದ ಮಠಗಳು ಮುರುಘಾ ಮಠದ ಆದರ್ಶ ಪಾಲನೆ ಮಾಡುತ್ತಿವೆ' ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಸುರಕ್ಷತಾ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿ ಸೂಚನೆ



ಮೈಸೂರು,ಡಿ.26(ಆರ್‌ಕೆ)–ರಸ್ತೆ ಸುರಕ್ಷತಾ ಕ್ರಮಗಳ ಪಾಲನೆ ಬಗ್ಗೆ ಸಂಬಂಧಪಟ್ಟ ಇಲಾಖೆಗಳು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ರಸ್ತೆ ಸುರಕ್ಷತಾ ಸಂಬಂಧ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿರುವ ಅಪಘಾತ ವಲಯಗಳನ್ನು ಗುರುತಿಸುವುದು, ಫಲಕಗಳನ್ನು ಅಳವಡಿಸುವುದು, ಸ್ಥಳೀಯವಾಗಿ ದೊರೆಯುವ ಆಂಬುಲೆನ್ಸ್‌ಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಕಾಣುವಂತೆ ಬರೆಸುವುದು, ರಸ್ತೆ ಕಾಮಗಾರಿ ದುರಸ್ತಿಯಲ್ಲಿದ್ದರೆ ಕಡ್ಡಾಯವಾಗಿ ವಾಹನ ಚಾಲಕರಿಗೆ ಕಾಣುವಂತೆ ಸೂಚನೆಗಳನ್ನು ಹಾಕಿಸುವುದು, ಹಂಪ್ಸ್‌ಗಳಿಗೆ ಬಣ್ಣ ಹಚ್ಚಿಸುವುದು, ರಿಫ್ಲೆಕ್ಸ್‌ಗಳನ್ನು ಅಳವಡಿಸುವುದು, ಮತ್ತಷ್ಟು ಪೊಲೀಸ್ ಬ್ಯಾರಿಗೇಟ್‌ಗಳನ್ನು ಹಾಕಿಸುವುದು, ಸಂಚಾರಿ ನಿಯಮಗಳನ್ನು ಪರಿಣಾಮಕಾರಿಯಾಗಿಸಿ ಅವುಗಳನ್ನು ಸಂಚಾರಿಗಳು ಕಡ್ಡಾಯವಾಗಿ ಪಾಲಿಸುವಂತೆ ಮಾಡುವುದು ಹಾಗೂ ಇತರೆ ಟ್ರಾಫಿಕ್ ಸಮಸ್ಯೆಗಳನ್ನು ಕಡಿಮೆ ಮಾಡುವುದು ರಸ್ತೆ ಸುರಕ್ಷತೆಯಲ್ಲಿ ಬಹಳ ಮುಖ್ಯ ಎಂದರು.

ದುರಸ್ತಿಯಲ್ಲಿರುವ ರಸ್ತೆ ಕಾಮಗಾರಿಗೆ ಕೇವಲ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವನ್ನೇ ಅವಲಂಭಿಸುವುದು ಬೇಡ. ಬದಲಾಗಿ ನಗರಾಭಿವೃದ್ಧಿ ಪ್ರಾಧಿಕಾರದ ಸಹಾಯವನ್ನು ತೆಗೆದುಕೊಳ್ಳಿ, ಯಾವುದೇ ಸಂಚಾರರು ಮಾರಣಾಂತಿಕ, ಸಾಮಾನ್ಯ ಅಪಘಾತಗಳಿಗೆ ತುತ್ತಾಗದಂತೆ ಸಂಚಾರಿ ನಿಯಮಗಳನ್ನು ಪಾಲಿಸುವಂತೆ ಮಾಡುವುದು ಸ್ಥಳೀಯ ಆಡಳಿತದ ಜವಾಬ್ದಾರಿ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಪ್ರಾದೇಶಿಕ ಸಾರಿಗೆ ಕಚೇರಿ, ಪೊಲೀಸ್ ಮತ್ತು ಲೋಕೋಪಯೋಗಿ ಅಧಿಕಾರಿಗಳು ಜಂಟಿಯಾಗಿ ಅಪಘಾತ ಪೀಡಿತ ಪ್ರದೇಶಗಳನ್ನು ಪರಿಶೀಲಿಸಬೇಕು ಮತ್ತು ಪರಿಣಾಮಕಾರಿ ಕ್ರಮಗಳನ್ನು ಜಾರಿಗೊಳಿಸಬೇಕು. 15 ದಿನಗಳಿಗೊಮ್ಮೆ ವರ್ಚುವಲ್ ಮೀಟಿಂಗ್ ಮೂಲಕ ಹಾಗೂ ತಿಂಗಳಿಗೊಮ್ಮೆ ಫಿಸಿಕಲ್ ಮೀಟಿಂಗ್ ಮೂಲಕ ವರದಿ ನೀಡಲು ಸೂಚಿಸಿದರು. ಸಭೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಟ್ಕರ್, ಪೊಲೀಸ್ ಉಪ ಆಯುಕ್ತೆ (ಅಪರಾಧ ಮತ್ತು ಸಂಚಾರ) ಗೀತಾ ಪ್ರಸನ್ನ, ಲೋಕೋಪಯೋಗಿ ಕಾರ್ಯನಿರ್ವಾಹಕ ಇಂಜಿನಿಯರ್ ರಾಜು, ಪ್ರಾದೇಶಿಕ ಸಾರಿಗೆ ಆಯುಕ್ತರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ರಾಕೇಶ್ ಪಾಪಣ್ಣ ಹುಟ್ಟುಹಬ್ಬ



ಮೈಸೂರು,ಡಿ.26–ಮೈಸೂರು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮತ್ತು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಮುಖಂಡ ರಾಕೇಶ್ ಪಾಪಣ್ಣ ಅವರ ಹುಟ್ಟುಹಬ್ಬವನ್ನು ಮಂಗಳವಾರ (ಡಿ.27) ವಿವಿಧ ಸೇವಾ ಕಾರ್ಯಕ್ರಮಗಳ ಮೂಲಕ ಆಚರಿಸಲಾಗುವುದು ಎಂದು ರಾಕೇಶ್ ಪಾಪಣ್ಣ ಅಭಿಮಾನಿಗಳ ಬಳಗದವರು ತಿಳಿಸಿದ್ದಾರೆ.

ರಾಕೇಶ್ ಪಾಪಣ್ಣನವರು ಮಂಗಳವಾರ ಬೆಳಗ್ಗೆ ಮನೆಯಲ್ಲಿ ತಂದೆ–ತಾಯಿಯ ಆಶೀರ್ವಾದ ಪಡೆದು, ಹಿನಕಲ್‌ನಲ್ಲಿರುವ ನನ್ನೇಶ್ವರ ದೇವ ಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸುವರು. ನಂತರ ಅಭಿಮಾನಿಗಳು ಹಿನಕಲ್ ಗ್ರಾಮದಲ್ಲಿ ಏರ್ಪಡಿಸಲಾಗಿರುವ ರಕ್ತದಾನ ಶಿಬಿರದಲ್ಲಿ ಪಾಲ್ಗೊಳ್ಳುವರು. ಇದರೊಂದಿಗೆ ಮೈಸೂರು ತಾಲೂಕಿನ ಬೋಗಾದಿ ಗ್ರಾಮದಲ್ಲಿರುವ ಸರ್ಕಾರಿ ಶಾಲೆಯಲ್ಲಿ ಶಾಲಾ ಮಕ್ಕಳಿಗೆ ತಟ್ಟೆ ಸೇರಿದಂತೆ ವಿವಿಧ ಪರಿಕರಗಳನ್ನು ವಿತರಿಸುವರು. ಜೊತೆಗೆ ಮಕ್ಕಳ ಜೊತೆ ಕೇಕ್ ಕತ್ತರಿಸಿ, ವಿತರಿಸುವರು.

ಚಾಮುಂಡೇಶ್ವರಿ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಅಭಿಮಾನಿಗಳು ಕೇಕ್ ಕತ್ತರಿಸಿ ಹಂಚುವುದರೊಂದಿಗೆ ಸಿಹಿ ವಿತರಿಸುವರು ಎಂದು ಅಭಿಮಾನಿಗಳ ಬಳಗದವರು ತಿಳಿಸಿದ್ದಾರೆ. ಕ್ಷೇತ್ರದಲ್ಲಿ ಕೆಲವು ಕಡೆ ವಸ್ತ್ರಗಳನ್ನು ವಿತರಿಸಲಾಗುತ್ತದೆ. ಅಲ್ಲಲ್ಲಿ ಅನ್ನದಾನ, ರಕ್ತದಾನ ಶಿಬಿರಗಳನ್ನು ಏರ್ಪಡಿಸಲಾಗಿದೆ. ಇಡೀ ದಿನ ಕ್ಷೇತ್ರದಾದ್ಯಂತ ರಾಕೇಶ್ ಪಾಪಣ್ಣ ಅವರು ಸಂಚರಿಸಿ, ಸೇವಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಡಿ.29, ಅಂತರ್ಜಲ ಜನಜಾಗೃತಿ ಕಾರ್ಯಾಗಾರ

ಮೈಸೂರು,ಡಿ.26– ಜಿಲ್ಲಾ ಅಂತರ್ಜಲ ಕಚೇರಿ ವತಿಯಿಂದ ಡಿ.29ರಂದು ಬೆಳಗ್ಗೆ 10 ಗಂಟೆಗೆ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಒಂದು ದಿನ ಅಂತರ್ಜಲ ಜನಜಾಗೃತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಅಂತರ್ಜಲ ಕಚೇರಿಯ ಹಿರಿಯ ಭೂ ವಿಜ್ಞಾನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ರಾಷ್ಟ್ರೀಯ ಗ್ರಾಹಕ ದಿನಾಚರಣೆ

ಮೈಸೂರು,ಡಿ.26– ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯಾಪಾರ ಇಲಾಖೆಯಿಂದ ರಾಷ್ಟ್ರೀಯ ಗ್ರಾಹಕ ದಿನಾಚರಣೆಯನ್ನು ಡಿ.28ರಂದು ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದ ಎಂಬಿಎ ವಿಭಾಗದಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಬಿ.ನಾರಾಯಣಪ್ಪ ಉದ್ಘಾಟಿಸಲಿದ್ದಾರೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶ ದೇವರಾಜ ಭೂತೆ ಮತ್ತು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾದ ಎಂ.ಕೆ.ಲಲಿತ, ಮಾರುತಿ ಹೆಚ್.ವಡ್ಡರ್, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ ಪಾಲ್ಗೊಳಲಿದ್ದಾರೆ.

ಜ.2, ವೈಕುಂಠ ಏಕಾದಶಿ

ಮೈಸೂರು,ಡಿ.26–ಮೈಸೂರಿನ ಜಯನಗರದಲ್ಲಿರುವ ಶ್ರೀರಾಮಮಂದಿರದಲ್ಲಿ ಜ.2ರಂದು 'ವೈಕುಂಠ ಏಕಾದಶಿ' ಆಚರಿಸಲಾಗುತ್ತಿದೆ. ಅಂದು ಮುಂಜಾನೆ 5.30ರಿಂದ ರಾತ್ರಿ 9.30 ರವರೆಗೆ ವಿಧಿ ವಿಧಾನಗಳ ಮೂಲಕ ಪೂಜೆ ನೆರವೇರಿಸಲಾಗುವುದು. ಜೊತೆಗೆ 'ಸ್ವರ್ಗದ ಬಾಗಿಲು ದರ್ಶನ' ಕೂಡ ಏರ್ಪಡಿಸಲಾಗಿದೆ.







ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಮೈಸೂರು ಉಪವಿಭಾಗ, ಮೈಸೂರು

ಪಿ.ಟಿ.ಸಿ.ಎಲ್ 20/2014

ಅರ್ಜಿದಾರರು: ಶ್ರೀಮತಿ ಜಯಮ್ಮ, ಕೋಂ. ಲೇಟ್ ಮುನಿಯಪ್ಪ, ಬಿನ್ ಲೇಟ್ ನಾಗಪ್ಪ @ ನಾಗಯ್ಯ

ವಿರುದ್ಧ

ಎದುರುದಾರರು: 1) ಚೌಡಮ್ಮ ಬಿನ್ ಗಿರಿಗೌಡರು
2) ಕೆಂಪಮ್ಮ ಬಿನ್ ಬೋರನಹಳ್ಳಿ ನಂಜಯ್ಯ.
ಇಬ್ಬರ ವಾಸ: ಸಿದ್ದಲಿಂಗಪುರ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಈ ಕೇಸಿನ ಅರ್ಜಿದಾರರು ಶ್ರೀಮತಿ ಜಯಮ್ಮ ಕೋಂ ಲೇಟ್ ಮುನಿಯಪ್ಪ ಇವರು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಸಿದ್ದಲಿಂಗಪುರದ ನಿವಾಸಿಗಳಾದ ಮೇಲ್ಕಂಡ ಎದುರುದಾರರ ವಿರುದ್ಧ ಈ ದಾವೆಯನ್ನು ಮೇಲ್ಕಂಡ ನ್ಯಾಯಾಲಯದಲ್ಲಿ ಮೇಲ್ಕಂಡ ಕೇಸಿನ ನಂಬರಿನಲ್ಲಿ ಅರ್ಜಿ ಸಲ್ಲಿಸಿದ್ದು ಈ ನ್ಯಾಯಾಲಯದ ದಾವಾ ಸಮನ್ಸ್ ಮತ್ತು ನೋಂದಣಿ ಅಂಚೆ ಮೂಲಕ ಕಳುಹಿಸಲಾದ ನ್ಯಾಯಾಲಯದ ಸಮನ್ಸ್‌ನ್ನು ಸಹ ಎದುರುದಾರರು ಸ್ವೀಕರಿಸದೇ ಇರುವುದರಿಂದ ಈ ಪತ್ರಿಕಾ ಪ್ರಕಟಣೆ ಮಾಡಲಾಗಿದೆ.

ಮೇಲ್ಕಂಡ ಪಿ.ಟಿ.ಸಿ.ಎಲ್. ಕೇಸ್ ನಂ. 20/14 ಇದೇ ತಾರೀಖು 11–1–2023 ರಂದು ಬೆಳಿಗ್ಗೆ 11 ಗಂಟೆಗೆ ನಿಗಧಿಯಾಗಿರುತ್ತದೆ. ಮೇಲ್ಕಂಡ ಚೌಡಮ್ಮ ಮತ್ತು ಕೆಂಪಮ್ಮ ರವರಿಗೆ ಈ ಮೂಲಕ ತಿಳುವಳಿಕೆ ನೀಡಲಾಗಿದೆ. ತಪ್ಪಿದರೆ ಮುಂದಿನ ಕಾನೂನು ಕ್ರಮ ಜರುಗಿಸಲು ನ್ಯಾಯಾಲಯ ಅಧಿಕಾರ ಹೊಂದಿರುತ್ತಾರೆ.

ಆದೇಶದ ಮೇರೆಗೆ
ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಮೈಸೂರು
ಸಹಿ/– ತಹಶೀಲ್ದಾರ್, ಉಪವಿಭಾಗಾಧಿಕಾರಿಗಳ ಕಛೇರಿ, ಮೈಸೂರು ಉಪವಿಭಾಗ, ಮೈಸೂರು

ಎಲ್. ಶಶಿಧರ್, ಪವಿತ್ರ ಆರ್. ತೇಜೂರು
ವಕೀಲರುಗಳು, #100, ಶ್ರೇಯಸ್ 7ನೇ ಮುಖ್ಯ ರಸ್ತೆ, ಪಡುವಾರಹಳ್ಳಿ, ಮೈಸೂರು–570 012
ದಿನಾಂಕ: 3–12–2022, ಸ್ಥಳ: ಮೈಸೂರು

ಮೈಸೂರು ಮಿತ್ರ 43

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು





ಪಟ್ಟಣ ಪಂಚಾಯಿತಿ ಕಾರ್ಯಾಲಯ, ಅರಕಲಗೂಡು, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ–573102

ಫೋ.ನಂ. 220350 E-mail: townpanchayath.arakalagud62@gmail.com
ನಂ/ಅ.ಪ.ಪಂ/ಕಿ.ಅ/ವಾರ್ಷಿಕ ಟೆಂಡರ್/01/2022–23 ದಿನಾಂಕ:23.12.2022

ಟೆಂಡರ್ ಪ್ರಕಟಣೆ

ಅರಕಲಗೂಡು ಪಟ್ಟಣ ಪಂಚಾಯಿತಿಯ 2022–23ನೇ ಸಾಲಿನ ಸ್ಥಳೀಯ ಅನುದಾನದಡಿ ಈ ಕೆಳಕಂಡ ಕೆಲಸಗಳಿಗೆ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದ್ದು, ಅರ್ಹ ಸರಬರಾಜುದಾರರು ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ (https://eproc.karnataka.gov.in/eprocurement/login.seam) ಮೂಲಕ ಮಾತ್ರ ಸಲ್ಲಿಸತಕ್ಕದ್ದು, ಟೆಂಡರ್ ನಿಯಮಾವಳಿಗಳ ಕುರಿತು ಹೆಚ್ಚಿನ ವಿವರಕ್ಕಾಗಿ ಪಟ್ಟಣ ಪಂಚಾಯಿತಿಯ ಕಾಮಗಾರಿ ಶಾಖೆ/ಕಿರಿಯ ಅಭಿಯಂತರರು, ಪಟ್ಟಣ ಪಂಚಾಯಿತಿ, ಅರಕಲಗೂಡು ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. 1)ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 09–01–2023 ಸಂಜೆ 5.30 ಗಂಟೆ. 2)ಟೆಂಡರ್ ತೆರೆಯುವ ದಿನಾಂಕ: 11–01–2023 ಬೆಳಗ್ಗೆ 11.00 ಗಂಟೆ. ಕ್ರ.ಸಂ.1)ವಿವರ:DMA/2022-23/INDENT14805 ಇ.ಎಂ.ಡಿ (ರೂ. ಗಳಲ್ಲಿ):37500.00 ಕೆಲಸದ ಕಾಲಾವಧಿ:12 ತಿಂಗಳು 2)DMA/2022-23/INDENT14806 ಇ.ಎಂ.ಡಿ(ರೂ. ಗಳಲ್ಲಿ): 37500.00 ಕೆಲಸದ ಕಾಲಾವಧಿ:12 ತಿಂಗಳು 3)DMA/2022-23/INDENT14807 ಇ.ಎಂ.ಡಿ (ರೂ. ಗಳಲ್ಲಿ):17500.00 ಕೆಲಸದ ಕಾಲಾವಧಿ:12 ತಿಂಗಳು

ಸಹಿ/–ಅಧ್ಯಕ್ಷರು, ಪಟ್ಟಣ ಪಂಚಾಯಿತಿ, ಅರಕಲಗೂಡು
ಸಹಿ/–ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಅರಕಲಗೂಡು

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/892/2022–23



ಮೈಸೂರು ಮಿತ್ರ

ಮಂಗಳವಾರ 27 ಡಿಸೆಂಬರ್ 2022

ವಿಶ್ವ ದಾಖಲೆ ನಿರ್ಮಾಣದ ಕೊಡವ ಕುಟುಂಬಗಳ ಬೃಹತ್ ಸಮ್ಮಿಲನ



● ಲಾರ್ಜೆಸ್ಟ್ ಫ್ಯಾಮಿಲಿ ಗ್ಯಾದರಿಂಗ್ ಗಿನ್ನಿಸ್ ದಾಖಲೆ ಬ್ರೇಕ್ ಮಾಡಲು 6000ಕ್ಕೂ ಅಧಿಕ ಕೊಡವ ಬಂಧುಗಳ ಸಮಾಗಮ ● ಸಿಂಗಾಪುರ್, ಯುಎಸ್ಎ, ದುಬೈನಿಂದಲೂ ಆಗಮನ

ವಿರಾಜಪೇಟೆ/ಮಡಿಕೇರಿ, ಡಿ.26– ಅಲ್ಲಿ ಸಾವಿರಾರು ಮಂದಿ ಕೊಡವರು ಸೇರಿದ್ದರು. ಅವರ ಸಂಪ್ರದಾಯ ಮೇಳೈಸಿತ್ತು. ಎಲ್ಲಿ ನೋಡಿದರೂ ಕೊಡವರೇ. ಈ ಸಮ್ಮಿಲನ ಗಿನ್ನಿಸ್ ದಾಖಲೆ ಸ್ಥಾಪಿಸುವುದಾಗಿತ್ತು.

ಇತ್ತೀಚೆಗೆ ವಿರಾಜಪೇಟೆ ಸಮೀಪದ ಬಿಟ್ಟಂಗಾಲದಲ್ಲಿ 'ಕೂರ್ಗ್ ಎತ್ನಿಕ್' ಕಾರ್ಯಕ್ರಮದಲ್ಲಿ ಎಲ್ಲಾ ಕುಟುಂಬಗಳ 6 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಂಡು ಈ ಹಿಂದಿನ ಗಿನ್ನಿಸ್ ದಾಖಲೆಯನ್ನು ಮುರಿದು, ಹೊಸ ದಾಖಲೆ ನಿರ್ಮಿಸಲು ಮುಂದಾಗಿದ್ದರು. ಇದು ವಿಶೇಷ ಮತ್ತು ವಿಭಿನ್ನ ಕಾರ್ಯಕ್ರಮವಾಗಿತ್ತು.

ಕೊಡವರ ಎಲ್ಲಾ ಒಕ್ಕಗಳ ವಂಶಾವಳಿ ವೃಕ್ಷವನ್ನು www.kodavaclan.com ಮೂಲಕ ಒಂದುಗೂಡಿಸಿ ಎಲ್ಲಾ ಕೊಡವರು ಒಂದೇ ಕುಟುಂಬಕ್ಕೆ ಸೇರಿದವರೆಂದು ದೃಢೀಕರಿಸುವ ಪ್ರಯತ್ನದಲ್ಲಿ ಕೊಡವ ಕ್ಲಾನ್ ಸಂಸ್ಥೆ ಈ ಮೂಲಕ ಯಶಸ್ಸು ಕಂಡಿದೆ.

ಈಗಾಗಲೇ ಗಿನ್ನಿಸ್ ಬುಕ್‌ನಲ್ಲಿ ದಾಖಲಾಗಿರುವ 4514 ಮಂದಿಯ 'ಲಾರ್ಜೆಸ್ಟ್ ಫ್ಯಾಮಿಲಿ ಗ್ಯಾದರಿಂಗ್' ದಾಖಲೆಯನ್ನು ಮುರಿಯುವ ಗುರಿಯ ಭಾಗವಾಗಿ ಕೊಡವ ಕುಟುಂಬಗಳ ಸಮ್ಮಿಲನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಫ್ರಾನ್ಸ್‌ನಲ್ಲಿ ಒಲಿಮಿಯಾ ಕುಟುಂಬದ 4514 ಮಂದಿ ಒಂದೆಡೆ ಸೇರಿದ ದಾಖಲೆಯನ್ನು ಮುರಿಯುವುದಕ್ಕಾಗಿ ಸುಮಾರು 6 ಸಾವಿರಕ್ಕೂ ಹೆಚ್ಚಿನ ಕೊಡವರು ಕಾರ್ಯಕ್ರಮದಲ್ಲಿ ಸೇರಿದ್ದರು ಎಂದು ಅಂದಾಜಿಸಲಾಗಿದೆ.

'ಕೂರ್ಗ್ ಎತ್ನಿಕ್'ನಲ್ಲಿ 50 ಮಳಿಗೆಗಳನ್ನು ತೆರೆಯಲಾಗಿತ್ತಲ್ಲದೇ, ವಿವಿಧ ಸ್ಪರ್ಧೆಗಳು, ಪ್ರಸಾದ್ ಬಿದ್ದಪ್ಪ ಅವರ ಫ್ಯಾಷನ್ ಶೋ, ಸೂಪರ್ ಸಿಂಗರ್ ಮತ್ತು ವಾಲಗತ್ತಾಟ್ ನೃತ್ಯಗಳು, ಮನರಂಜನಾ ಕಾರ್ಯಕ್ರಮಗಳು ಗಮನ ಸೆಳೆದವು. ಮಹಿಳೆಯರು ಮಕ್ಕಳಾದಿಯಾಗಿ ನೆರೆದಿದ್ದವರು ಕೊಡವ ವಾಲಗಕ್ಕೆ ಕುಣಿದು ಸಂಭ್ರಮಿಸಿದರು.

ಹಿರಿಯ ಕಲಾವಿದ ಮುಳ್ಳೇರ ಜಿಮ್ಮಿ ಅಯ್ಯಪ್ಪ ಅವರ ನೆನಪಿನಲ್ಲಿ ಅವರ ಹಾಡುಗಳು ಕೊಡವ ನೈಟ್ಸ್‌ನಲ್ಲಿ ಮೂಡಿ ಬಂದವು. ಕೊಡವ ಸಾಹಿತಿಗಳು ಬರೆದಿರುವ ಪುಸ್ತಕಗಳ ಮಾರಾಟಕ್ಕಾಗಿ ಪ್ರತ್ಯೇಕ ಮಳಿಗೆ ವ್ಯವಸ್ಥೆ ಮಾಡಲಾಗಿತ್ತು. ಈ ಕುರಿತು ಮಾಹಿತಿ ನೀಡಿದ ಕಾರ್ಯಕ್ರಮ ಆಯೋಜಕರಾದ ಗೊಮ್ಮಟ್ಟಿರ ಕಿಶು ಉತ್ತಪ್ಪ, ವಿರಾಜಪೇಟೆಯಲ್ಲಿ ನಡೆದ ಈ ಕಾರ್ಯಕ್ರಮಕ್ಕೆ 'ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್'ನ ಪ್ರತಿನಿಧಿಗಳು ಆಗಮಿಸಿದ್ದರಲ್ಲದೇ, ಒಟ್ಟು ಸಂಖ್ಯೆಯ ದಾಖಲೀಕರಣವನ್ನು ಸ್ಥಳದಲ್ಲಿಯೇ ಮಾಡಿಕೊಂಡಿದ್ದಾರೆ ಎಂದರು.

ಅಲ್ಲಿ ಸೇರಿದವರೆಲ್ಲ ಒಂದೇ ಕುಟುಂಬದ ವಂಶವೃಕ್ಷಕ್ಕೆ ಸೇರಿದವರೆಂದು ನಿರ್ಧರಿಸಲು ಮತ್ತು ಅದನ್ನು ಖಚಿತಪಡಿಸಲು ಕೆಲವು ಮಾನದಂಡಗಳಿವೆ. ಈ ಪ್ರಕ್ರಿಯೆಗಳು ಪೂರ್ಣಗೊಳ್ಳಲು ಒಂದೂವರೆ ತಿಂಗಳ ಕಾಲಾವಕಾಶ ಬೇಕಾಗುತ್ತದೆ. ಆ ಬಳಿಕ ವಿಶ್ವ ದಾಖಲೆಗೆ ಶಿಫಾರಸ್ಸು ಆಗಲಿದೆ ಎಂದು ಗೊಮ್ಮಟ್ಟಿರ ಕಿಶು ಉತ್ತಪ್ಪ ಮಾಹಿತಿ ನೀಡಿದ್ದಾರೆ.

ಕೊಡಗು ಸೇರಿದಂತೆ ದೆಹಲಿ, ಚೆನ್ನೈ, ಹೈದರಾಬಾದ್ ಮಾತ್ರವಲ್ಲದೇ ಸಿಂಗಾಪುರ್, ಯುಎಸ್ಎ, ದುಬೈಯಂತಹ ವಿದೇಶಗಳಿಂದಲೂ ಕೊಡವ ಕುಟುಂಬಗಳು ಆಗಮಿಸಿದ್ದವು ಎಂದು ಕಿಶು ಉತ್ತಪ್ಪ ಮಾಹಿತಿ ನೀಡಿದ್ದಾರೆ. ಕಾರ್ಯಕ್ರಮದಲ್ಲಿ ಬಂದು ಸೇರಿದ ಎಲ್ಲರೂ ಕೊಡವ ವಂಶ ವೃಕ್ಷಕ್ಕೆ ಜೋಡಿಸಬೇಕಿದೆ. ಈ ಕಾರ್ಯ ಪ್ರಗತಿಯಲ್ಲಿದೆ ಎಂದೂ ಕಿಶು ಉತ್ತಪ್ಪ ವಿವರಿಸಿದರು.

> **6** ಕೊಡವ ಕ್ಲಾನ್ ಸಂಸ್ಥೆ ಕಳೆದ 8 ವರ್ಷಗಳಿಂದ 21 ಸಾವಿರಕ್ಕೂ ಹೆಚ್ಚಿನ ಕೊಡವರು ಒಂದೇ ವಂಶ ವೃಕ್ಷದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದ್ದು, ಈಗಾಗಲೇ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿದೆ. 18 ತಲೆಮಾರಿನ ಒಟ್ಟು 751 ಕೊಡವ ಕುಟುಂಬಗಳ ದಾಖಲೆಗಳು ಕೊಡವ ಕ್ಲಾನ್ ವಂಶವೃಕ್ಷದಲ್ಲಿದೆ. ಈ ದಾಖಲೆಗಳು ವೆಬ್‌ಸೈಟ್‌ನಲ್ಲಿಯೂ ಲಭ್ಯವಿದೆ. ಇಂತಹ ಒಂದು ಬೃಹತ್ ಕುಟುಂಬ ಸಮ್ಮಿಲನ ಈ ಹಿಂದೆ ಫ್ರಾನ್ಸ್‌ನಲ್ಲಿ ಮಾತ್ರವೇ ನಡೆದಿದೆ. ಭಾರತದಲ್ಲಿ ಇಂತಹ ಪ್ರಯತ್ನ ಈ ಮೊದಲು ನಡೆದಿರಲಿಲ್ಲ. ಹೀಗಾಗಿ ಈ ಕಾರ್ಯಕ್ರಮ ಒಂದು ಹೊಸ ಐತಿಹಾಸಿಕ ದಾಖಲೆ ಬರೆಯುವ ವಿಶ್ವಾಸವಿದೆ.
>
> –ಗೊಮ್ಮಟ್ಟಿರ ಕಿಶು ಉತ್ತಪ್ಪ, ಕೊಡವ ಕ್ಲಾನ್ ಸಂಸ್ಥಾಪಕರು.



ಕಾರು–ಸ್ಕೂಟರ್ ಡಿಕ್ಕಿ: ಒಬ್ಬನಿಗೆ ಗಾಯ



ವಿರಾಜಪೇಟೆ, ಡಿ.26– ದ್ವಿಚಕ್ರ ವಾಹನ ಕಾರಿನ ನಡುವೆ ಸಂಭವಿಸಿದ ಡಿಕ್ಕಿಯಿಂದ ಸ್ಕೂಟರ್ ಸವಾರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿರುವ ಘಟನೆ ನಗರ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ವಿರಾಜಪೇಟೆಯ ಅಮ್ಮತ್ತಿ ರಸ್ತೆಯಲ್ಲಿ ಗ್ಯಾಸ್ ಕಛೇರಿ ಬಳಿ ಕೇರಳದ ನೊಂದಣಿ ಕಾರು (ಕೆಎಲ್13–ಎಎಫ್3030) ಅಮ್ಮತ್ತಿ ಕಡೆ ಹೋಗುತ್ತಿದ್ದ ಸಂದರ್ಭದಲ್ಲಿ ಎದುರಿನಿಂದ ಬಂದ ದ್ವಿಚಕ್ರ (ಕೆಎ12–7381) ವಾಹನ ಡಿಕ್ಕಿ ಹೊಡೆಯಿತು. ಇದರಿಂದ ಮಲೆತಿರಿಕೆ ಬೆಟ್ಟದ ನಿವಾಸಿ ಆರುಗ ಗಾಯಗೊಂಡಿದ್ದು, ಆಸ್ಪತ್ರೆಗೆ ಸೇರಿಸಲಾಗಿದೆ. ಕಾರು ಮತ್ತು ಸ್ಕೂಟರ್ ಮುಂಭಾಗ ಜಖಂಗೊಂಡಿದ್ದು, ಈ ಸಂಬಂಧ ಕಾರು ಚಾಲಕ ಸೈಯದ್ ಅಹ್ಮದ್ ಎಂಬುವರು ನಗರ ಠಾಣೆಗೆ ದೂರು ನೀಡಿದ್ದಾರೆ. ಠಾಣಾಧಿಕಾರಿ ಶ್ರೀಧರ್ ಪ್ರಕರಣ ದಾಖಲಿಸಿ ಕೊಂಡು ಸ್ಥಳ ಪರಿಶೀಲನೆ ನಡೆಸಿ ಕ್ರಮ ಕೈಗೊಂಡಿದ್ದಾರೆ.

ಕೋಮುವಾದದ ಮೂಲಕ ಕಾರ್ಮಿಕರ ನೈಜ ಸಮಸ್ಯೆಗಳು ಗೌಣ

ಸಿಐಟಿಯು ವಿಚಾರ ಸಂಕಿರಣದಲ್ಲಿ ಕೃಷ್ಣೇಗೌಡ ಆರೋಪ



ಮಡಿಕೇರಿ, ಡಿ.26– ಕೋಮುವಾದದ ಮೂಲಕ ಕಾರ್ಮಿಕರ ಹಾದಿ ತಪ್ಪಿಸುವ ಪ್ರಯತ್ನಗಳು ನಡೆಯುತ್ತಿದ್ದು, ಶ್ರಮಿಕ ವರ್ಗದ ನೈಜ ಸಮಸ್ಯೆಗಳನ್ನು ಮರೆಮಾಚಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘದ ರಾಜ್ಯ ಮುಖಂಡ ಕೃಷ್ಣೇಗೌಡ ಆರೋಪಿಸಿದ್ದಾರೆ.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ಕೊಡಗು ಜಿಲ್ಲಾ ಸಮಿತಿಯ 17ನೇ ಅಖಿಲ ಭಾರತ ಸಮ್ಮೇಳನದ ಭಾಗವಾಗಿ ನಗರದ ಪತ್ರಿಕಾ ಭವನದಲ್ಲಿ ನಡೆದ 'ಜನಪರ ಚಳವಳಿಗಳು ಹಾಗೂ ಪತ್ರಿಕಾ ಮಾಧ್ಯಮಗಳು' ಎಂಬ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕೋಮುವಾದವನ್ನಷ್ಟೇ ವಿರೋಧಿಸುವ ಪ್ರಗತಿಪರರ ನಿಲುವು ಸರಿಯಲ್ಲ. ಕೋಮುವಾದದ ಜೊತೆಗೆ ಉದಾರೀಕರಣವನ್ನೂ ವಿರೋಧಿಸಬೇಕಾಗಿದೆ. ಆಗ ಮಾತ್ರ ಕಾರ್ಮಿಕರ ಹೋರಾಟಕ್ಕೆ ಫಲ ಸಿಗುತ್ತದೆ. ಕೋಮುವಾದ ಮತ್ತು ಉದಾರೀಕರಣ ನೀತಿಯ ವಿರುದ್ಧ ಹೋರಾಟವನ್ನು ತೀವ್ರಗೊಳಿಸುವ ಅನಿವಾರ್ಯತೆ ಎದುರಾಗಿದೆ ಎಂದರು. ಪ್ರತಿ ಜಾತಿಗಳೂ ಮೀಸಲಾತಿ ಕೇಳುತ್ತಿರುವುದು ಒಳ್ಳೆಯ ಬೆಳವಣಿಗೆ ಅಲ್ಲ, ಇದು ಒಗಟ್ಟಿನ ಸಮಾಜಕ್ಕೆ ಅಪಾಯಕಾರಿಯಾಗಿ ಪರಿಣಮಿಸಲಿದೆ ಎಂದು ಕೃಷ್ಣೇಗೌಡ ಆತಂಕ ವ್ಯಕ್ತಪಡಿಸಿದರು. ಸಿಐಟಿಯು ಮಾಜಿ ಅಧ್ಯಕ್ಷ ಐ.ಆರ್.ದುರ್ಗಾಪ್ರಸಾದ್ ಮಾತನಾಡಿ, ಕಾರ್ಮಿಕ ವರ್ಗ ಒಗ್ಗಟ್ಟಿನಿಂದ ಹೋರಾಟ ನಡೆಸಿದಾಗ ಮಾತ್ರ ಹಕ್ಕುಗಳನ್ನು ಪಡೆಯಬಹುದಾಗಿದೆ ಎಂದರು. ಕಾರ್ಮಿಕ ಚಳುವಳಿಗಳನ್ನು ಜಾತಿ, ಧರ್ಮದ ಹೆಸರಿನಲ್ಲಿ ವಿಭಜಿಸುವ ಹುನ್ನಾರ ನಡೆಯುತ್ತಿದೆ. ಶ್ರಮಿಕ ವರ್ಗ ಸಂಘಟಿತರಾಗದಿದ್ದರೆ ಎಲ್ಲಾ ಹೋರಾಟಗಳು ವಿಫಲವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಜಿಲ್ಲಾಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿ, ಸಮಾಜದಲ್ಲಿ ಇಂದು ಕೋಮುವಾದ ಬಲಗೊಳ್ಳುತ್ತಿದ್ದು, ದುಡಿಯುವ ವರ್ಗಗಳ ಚಳುವಳಿ ಬಲಹೀನವಾಗುತ್ತಿದೆ. ಹೋರಾಟಗಳಲ್ಲಿ ಹಿಂದೆ ಇದ್ದ ಗಟ್ಟಿತನ ಈಗ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಿಐಟಿಯು ಕೊಡಗು ಜಿಲ್ಲಾಧ್ಯಕ್ಷ ಪಿ.ಆರ್.ಭರತ್ ಮಾತನಾಡಿ, ಬೆಲೆ ಏರಿಕೆ, ಬಂಡವಾಳಶಾಹಿ ಪರ ಆಡಳಿತ ಮತ್ತು ಸರ್ಕಾರದ ಜನ ವಿರೋಧಿ ನೀತಿಗಳಿಂದಾಗಿ ಕಾರ್ಮಿಕರಿಗೆ ಉಳಿಗಾಲವಿಲ್ಲದ ಪರಿಸ್ಥಿತಿ ಉದ್ಭವಿಸಿದೆ ಎಂದು ಆರೋಪಿಸಿದರು. ಅಖಿಲ ಭಾರತ ಸಮ್ಮೇಳನದ ಭಾಗವಾಗಿ ಕಾರ್ಮಿಕ ಕಾನೂನು ತಿದ್ದುಪಡಿ, ರೈತರ ಆತ್ಮಹತ್ಯೆ, ಬೆಲೆ ಏರಿಕೆಯಂತಹ ವಿಷಯಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ವಿಚಾರ ಸಂಕಿರಣಗಳನ್ನು ಆಯೋಜಿಸಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ವಕೀಲ ಕುಂಞ ಅಬ್ದುಲ್ಲ ಮಾತನಾಡಿ, ಕಾರ್ಮಿಕ ಕಾಯ್ದೆಗಳ ಉಲ್ಲಂಘನೆ ಮತ್ತು ಶ್ರಮಿಕ ವರ್ಗದ ಹಕ್ಕುಗಳ ಕುರಿತು ವಿವರಿಸಿದರು. ಸಿಐಟಿಯು ಕೊಡಗು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಸಿ.ಸಾಬು, ಖಜಾಂಚಿ ಎನ್.ಡಿ.ಕುಟ್ಟಪ್ಪನ್, ಸಹಕಾರ್ಯದರ್ಶಿ ಶಾಜಿ ರಮೇಶ್, ರಾಜಪ್ಪಾಜಿ ಮತ್ತಿತರರು ಉಪಸ್ಥಿತರಿದ್ದರು.

ಎಲ್ಲರಿಗೂ ಕೋವಿಡ್ ಪರೀಕ್ಷೆ ಅನಿವಾರ್ಯ



ಮಡಿಕೇರಿ, ಡಿ.26– ಕೊಡಗು ಜಿಲ್ಲೆಯಲ್ಲಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಈಗ ಪ್ರಾರಂಭವಾಗುತ್ತಿರುವ 4 ನೇ ಕೋವಿಡ್ ಅಲೆಯ ಕಾರಣ ಒಳರೋಗಿಗಳಾಗಿ ಆಸ್ಪತ್ರೆಗೆ ಬರುವವರನ್ನು ಕಡ್ಡಾಯವಾಗಿ ಐಎಲ್ಐ ಮತ್ತು ಎಸ್ಎಆರ್ಐ ಕೋವಿಡ್ ಪರೀಕ್ಷೆ (ಗಂಟಲು ದ್ರವ ಮಾದರಿ) ಮಾಡಲು ತಿಳಿಸಲಾಗಿದೆ.

ಅಲ್ಲದೇ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿಯೂ ಐಎಲ್ಐ ಮತ್ತು ಎಸ್ಎಆರ್ಐ ಲಕ್ಷಣಗಳು ಇರುವವರನ್ನು ಹಾಗೂ ಜನಸಂದಣಿ ಇರುವ ಪ್ರದೇಶಗಳಲ್ಲಿ (ಪ್ರವಾಸಿ ತಾಣಗಳು, ಶಾಲಾ ಕಾಲೇಜು ಹಾಗೂ ಶೈಕ್ಷಣಿಕ ಸಂಸ್ಥೆಗಳು, ಹೋಟೆಲ್‌ಗಳು, ಸಂತೆಗಳು, ಕಾರ್ಯಕ್ರಮಗಳು) ಕೋವಿಡ್ ಪರೀಕ್ಷೆ ಮಾಡಿಸಲು ತಿಳಿಸಲಾಗಿದೆ. ಅಲ್ಲದೇ ಮಾಸ್ಕ್ ಧರಿಸಬೇಕು ಹಾಗೂ ವೈಯುಕ್ತಿಕ ಸುರಕ್ಷೆ ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಮುಂದೆ ಕೋವಿಡ್ ಬರದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಿದೆ.

ವಿರಾಜಪೇಟೆ ಬಳಿ ಹುಲಿ ದಾಳಿಗೆ ಹಸು ಬಲಿ

ವಿರಾಜಪೇಟೆ, ಡಿ.27– ವಿರಾಜಪೇಟೆ ಬಳಿಯ ಆರ್ಜಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೆರುಂಬಾಡಿಯಲ್ಲಿ ಹುಲಿ ದಾಳಿಗೆ ಹಸುವೊಂದು ಮೃತಪಟ್ಟಿದ್ದು, ಮತ್ತೊಂದು ಹಸು ತೀವ್ರವಾಗಿ ಗಾಯಗೊಂಡಿರುವ ಘಟನೆ ಸಂಭವಿಸಿದೆ.

ವಿರಾಜಪೇಟೆ ಹೊರವಲಯದ ಪೆರಂಬಾಡಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಬಳಿ ರಾಮಯ್ಯ ಎಂಬುವವರಿಗೆ ಸೇರಿದ್ದ ಹಸುಗಳು ಮೇಯಲು ಬಿಟ್ಟಿದ್ದ ಸಂದರ್ಭ ಹುಲಿ ದಾಳಿ ನಡೆಸಿದೆ. ರಾಮಯ್ಯ ಅವರು ಹಸುಗಳನ್ನು ಹುಡುಕಿಕೊಂಡು ಹೋದಾಗ ವಸತಿ ಶಾಲೆಯ ಸಮೀಪದಲ್ಲಿ ಒಂದು ಹಸು ಸತ್ತು ಬಿದ್ದಿದ್ದರೆ, ಮತ್ತೊಂದು ತೀವ್ರ ರಕ್ತ ಸ್ರಾವದಿಂದ ಸಾವು ಬದುಕಿನ ಜೊತೆ ಹೋರಾಟ ನಡೆಸುತ್ತಿರುವುದು ಕಂಡು ಬಂದಿದೆ.

ಕೂಡಲೇ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದು, ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪಟ್ಟಣದಿಂದ ನಾಲ್ಕು ಕಿ.ಮೀ ದೂರದಲ್ಲಿ ಜನನಿಬಿಡ ಪ್ರದೇಶದಲ್ಲಿ ಹುಲಿ ದಾಳಿ ನಡೆಸಿರುವುದರಿಂದ ಜನತೆ ಭಯಬೀತರಾಗಿದ್ದಾರೆ.

ಸಕ್ಕರೆ ನಾಡಲ್ಲಿ ಪಂಚರತ್ನ ರಥಯಾತ್ರೆಗೆ ಅಭೂತಪೂರ್ವ ಬೆಂಬಲ

ನಾಗಮಂಗಲದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅಭಿಮತ



ನಾಗಮಂಗಲ, ಡಿ.26– ಸಕ್ಕರೆ ನಾಡು ಮಂಡ್ಯ ಜಿಲ್ಲೆಯಲ್ಲಿ ಪಂಚರತ್ನ ರಥಯಾತ್ರೆಗೆ ನಿರೀಕ್ಷೆಗೂ ಮೀರಿದ ಬೆಂಬಲ ವ್ಯಕ್ತವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸಂತಸ ವ್ಯಕ್ತಪಡಿಸಿದರು.

ನಾಗಮಂಗಲ ತಾಲೂಕಿನ ಸುಖಧರೆ ಗ್ರಾಮದಲ್ಲಿ ಸೋಮವಾರ ಪಂಚರತ್ನ ರಥಯಾತ್ರೆಯಲ್ಲಿ ಮಾತನಾಡಿದ ಅವರು, ಪಂಚರತ್ನ ರಥಯಾತ್ರೆ 30ನೇ ದಿನಕ್ಕೆ ಕಾಲಿಟ್ಟಿದೆ. ಜಿಲ್ಲೆಯಲ್ಲಿ ಕಳೆದ 7 ದಿನಗಳಿಂದ ಪ್ರವಾಸ ಮಾಡಿದ್ದೇನೆ. ಇಂದು ನಾಗಮಂಗಲ ತಾಲೂಕಿನಲ್ಲಿ ಅದ್ಧೂರಿಯಾಗಿ ಸ್ವಾಗತಿಸಿದ್ದಾರೆ. ಸಾವಿರಾರು ಹೆಣ್ಣು ಮಕ್ಕಳು ಕಳಸ ಹೊತ್ತು ಶುಭ ಹಾರೈಸಿದ್ದಾರೆ. ನಿರೀಕ್ಷೆಗೂ ಮೀರಿ ಜನ ಬೆಂಬಲ ಸಿಕ್ಕಿದೆ ಎಂದರು.

ನಾಗಮಂಗಲದಲ್ಲಿ ಯಾವುದೇ ಆತಂಕ ಇಲ್ಲ. ನಾಗಮಂಗಲಕ್ಕೂ ದೇವೇಗೌಡರಿಗೂ ಅವಿನಾಭಾವ ಸಂಬಂಧ ಇದೆ. ವೈಯಕ್ತಿಕ ಬಾಂಧವ್ಯ ಗಟ್ಟಿಯಾಗಿದೆ. ಜೆಡಿಎಸ್ ಹಿಮ್ಮೆಟ್ಟಿಸುವ ಕೆಲಸವನ್ನು ಈ ಕ್ಷೇತ್ರದ ಜನ ಇದುವರೆಗೆ ಮಾಡಿಲ್ಲ ಎಂದರು.

ಟಿಕೆಟ್ ಬದಲಿಸಲ್ಲ: ನಾಗಮಂಗಲದಲ್ಲಿ ಸುರೇಶ್‌ಗೌಡರ ವಿರುದ್ಧ ಷಡ್ಯಂತ್ರ ವಿಚಾರ ಪ್ರಸ್ತಾಪಿಸಿ, ಕಳೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಅಪ್ಪಾಜಿಗೌಡರನ್ನು ಷಡ್ಯಂತ್ರ ಮಾಡಿ ಸೋಲಿಸಿದರು. ನೈತಿಕವಾಗಿ ಅಪ್ಪಾಜಿಗೌಡರು ಸೋತಿಲ್ಲ. ನಾಗಮಂಗಲದಲ್ಲಿ ಎಲ್ಲಾ ನಾಯಕರು ಒಟ್ಟಾಗಿದ್ದಾರೆ. ಶಿವರಾಮೇಗೌಡರಿಗೂ ಬಹಳ ಜನ ಬುದ್ಧಿ ಹೇಳಿದ್ದಾರೆ. ಏನೇ ಕುತಂತ್ರ ಮಾಡಿದರು ಈ ಕ್ಷೇತ್ರದ ಜನರು ದಾರಿ ತಪ್ಪಲ್ಲ. ಜೆಡಿಎಸ್ ಟಿಕೆಟ್ ಬದಲಾವಣೆ ಆಗಲ್ಲ. ಶಿವರಾಮೇಗೌಡರಿಗೆ ಕೊಡಲ್ಲ, ಸುರೇಶ್‌ಗೌಡರೇ ಅಭ್ಯರ್ಥಿ ಎಂದು ಘೋಷಣೆಯಾಗಿದೆ ಎಂದರು.

ಮೀಸಲಾತಿ ಮನವರಿಕೆ ಮಾಡಿ: ಮೀಸಲಾತಿ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ. ನಾನು ಸಹ ನೋಡುತ್ತಿದ್ದೇನೆ. ಮೀಸಲಾತಿ ಪಡೆಯುವ ನಿಟ್ಟಿನಲ್ಲಿ ನಿಮ್ಮ ಧ್ವನಿಗೆ ಸರ್ಕಾರ ಸ್ಪಂದಿಸಬೇಕಾದರೆ, ನೀವು ಸರ್ಕಾರದ ಮೀಸಲಾತಿ ಕುರಿತು ಜನರಿಗೆ ಮನವರಿಕೆ ಮಾಡಿಕೊಡಬೇಕು. ಇದು ಎಲ್ಲರ ಕರ್ತವ್ಯ ಎಂದರು.

ಫೆಬ್ರವರಿಯಲ್ಲಿ ಬಜೆಟ್ ಮಂಡನೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಬಜೆಟ್‌ಗೆ ಮಾರ್ಚ್‌ನಲ್ಲಿ ಅನುದಾನ ಪಡೆಯಬೇಕಿದೆ. ಚುನಾವಣೆ ನಂತರ ಬರುವ ಸರ್ಕಾರ ಸ್ಥಿರವಾದ ಬಜೆಟ್ ಮಂಡನೆ ಮಾಡಬೇಕು ಎಂದರು.

ಉದ್ಧವ್ ಠಾಕ್ರೆ ವಿರುದ್ಧ ಕಿಡಿ: ಈ ಬಿಜೆಪಿ ಸರ್ಕಾರಕ್ಕೆ ಬೆನ್ನು ಇಲ್ಲ, ಮೂಳೆನೂ ಇಲ್ಲ. ಬೆಳಗಾವಿ ವಿಷಯದಲ್ಲಿ ಧಮ್, ತಾಕತ್ ಅನ್ನು ಪ್ರಧಾನಿ ಬಳಿ ತೋರಿಸಿ ಬನ್ನಿ. ಇತ್ತೀಚಿನ ದಿನಗಳಲ್ಲಿ ಮಹಾರಾಷ್ಟ್ರದ ಹಲವು ಪಕ್ಷಗಳು ಹಾಗೂ ಸರ್ಕಾರದ ಜೊತೆಗೆ ಬಿಜೆಪಿಯೂ ಸೇರಿಕೊಂಡಿದೆ. ಬೆಳಗಾವಿ ಜಿಲ್ಲೆಯನ್ನು ಮಹಾರಾಷ್ಟ್ರಕ್ಕೆ ಸೇರ್ಪಡೆಗೆ ಒತ್ತಾಯ ಇದೆ. ಇದು ದೇಶದ ಒಕ್ಕೂಟದ ವ್ಯವಸ್ಥೆಗೆ ಹಾನಿ ಮಾಡುವ ಕೃತ್ಯ. ಒಂದು ದೇಶ, ಒಂದು ಭಾಷೆ, ಒಂದು ದೇಶ ಒಂದು ಚುನಾವಣೆ ಎನ್ನುವ ಬಿಜೆಪಿ ನಾಯಕರಿಗೆ ಸಾಮಾನ್ಯ ಜ್ಞಾನ ಇದ್ದರೆ ಇಂತಹ ವಿಷಯ ಕುರಿತು ಜನರಲ್ಲಿ ಪ್ರಚೋದನೆ ಮಾಡುವುದನ್ನು ನಿಲ್ಲಿಸಬೇಕು. ಬೆಳಗಾವಿ ಕರ್ನಾಟಕದ ಸ್ವತ್ತು. ಅದನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡುವುದಕ್ಕೆ ಬಿಡುವುದಿಲ್ಲ ಎಂದರು.

ಬೆಳಗಾವಿ ಕುರಿತು ಯಾವುದೇ ವಿವಾದ ಇಲ್ಲ. ನಮ್ಮ ಮುಖ್ಯಮಂತ್ರಿ ಬೆಳಗಾವಿ ವಿವಾದ ಅಂತ ಪದ ಬಳಸಿದ್ದಾರೆ. ತಕ್ಷಣ ವಿವಾದ ಪದವನ್ನು ವಾಪಸ್ ಪಡೆಯಬೇಕು. ಇದು ವಿವಾದ ಅಲ್ಲ, ಬೆಳಗಾವಿ ವಿಷಯ. ಬೆಳಗಾವಿ ವಿಷಯವನ್ನು ಮಹಾರಾಷ್ಟ್ರ ಎತ್ತಿದೆ. ಅವರು ವಿವಾದ ಸೃಷ್ಟಿ ಮಾಡ್ಕೊಂಡರೆ, ನಾವು ಯಾಕೆ ವಿವಾದ ಎನ್ನಬೇಕು. ಕರ್ನಾಟಕದ ಏಕೀಕರಣದಲ್ಲಿ ಕರ್ನಾಟಕದ ಭಾಗದ ತೀರ್ಮಾನವಾಗಿದೆ. ಬೆಳಗಾವಿ ಅಭಿವೃದ್ಧಿಗೆ ಭಾರೀ ಪ್ರಮಾಣದ ಕನ್ನಡಿಗರ ಹಣವನ್ನು ಬಂಡವಾಳ ಹಾಕಿದ್ದೇವೆ ಎಂದು ಹೇಳಿದರು.

ಮಹಾರಾಷ್ಟ್ರದ ವಿವಿಧ ಪಕ್ಷಗಳು ಬೆಳಗಾವಿಯ ಆರ್ಥಿಕ ಶಕ್ತಿ ಗಮನಿಸಿ ಲಪಟಾಯಿಸಲು ಹೊರಟಿದ್ದಾರೆ. ಠಾಕ್ರೆ ಮಾತಿಗೆ ಸರ್ಕಾರ ಡ್ರಮ್ ಹೊಡೆಯಲು ಹೊರಟಿದೆ. ಇದು ಬಿಜೆಪಿಯ ನಾಚಿಗೆಗೇಡಿನ ಕೆಲಸ. ಈ ದೇಶದಲ್ಲಿ ಒಕ್ಕೂಟ ವ್ಯವಸ್ಥೆ, ಪ್ರಜಾಪ್ರಭುತ್ವ, ಸಂವಿಧಾನದ ಗೌರವ ಕಾಪಾಡಬೇಕಾದರೆ ಮಹಾರಾಷ್ಟ್ರ ಸರ್ಕಾರ ಜವಾಬ್ದಾರಿಯುತವಾಗಿ ನಡೆಯುವುದನ್ನು ಕಲಿಯಬೇಕು. ಅಕ್ಕಪಕ್ಕದ ರಾಜ್ಯದಲ್ಲಿ ದ್ವೇಷ, ಸಂಘರ್ಷ ಉಂಟು ಮಾಡುತ್ತಾರೆ. ಮುಖ್ಯಮಂತ್ರಿಗಳೇ ಈ ವಿಷಯವನ್ನು ಸುಲಭವಾಗಿ ತೆಗೆದುಕೊಳ್ಳಬೇಡಿ. ಮಹಾರಾಷ್ಟ್ರದ ಕುತಂತ್ರಕ್ಕೆ ಬಲಿಯಾಗಬೇಡಿ. ದೆಹಲಿಯಲ್ಲಿ ನಿಮ್ಮ ಕೇಂದ್ರ ಸರ್ಕಾರ ಕರ್ನಾಟಕದವರನ್ನು ಲೆಕ್ಕಕ್ಕೇ ಇಟ್ಟಿಲ್ಲ. 25 ಜನ ಲೋಕಸಭಾ ಸದಸ್ಯರ ಸ್ಥಿತಿ ಹೇಗಿದೆ ಎಂಬುದು ಗೊತ್ತಿದೆ ಎಂದರು.

ನಾಗಮಂಗಲದಲ್ಲಿ ಪಂಚರತ್ನ ರಥಯಾತ್ರೆ ಯಶಸ್ವಿ

ಕಳೆದ 6 ದಿನಗಳಿಂದ ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿರುವ ಪಂಚರತ್ನ ಯಾತ್ರೆ ಸೋಮವಾರ ಜೆಡಿಎಸ್ ಭದ್ರಕೋಟೆ ನಾಗಮಂಗಲ ತಾಲೂಕನ್ನು ಪ್ರವೇಶಿಸಿತು. ನಿನ್ನೆ ಕೆ.ಆರ್.ಪೇಟೆಯಲ್ಲಿ ಯಾತ್ರೆ ಮುಗಿಸಿ ತಾಲೂಕಿನ ಸಂತೆಬಾಚಹಳ್ಳಿ ಗ್ರಾಮದಲ್ಲಿ ವಾಸ್ತವ್ಯ ಹೂಡಿದ್ದ ಹೆಚ್ಡಿಕೆ, ಇಂದು ನಾಗಮಂಗಲ ತಾಲೂಕಿನ ಬೋಗಾದಿ ಮುಖಾಂತರ ಪಂಚರತ್ನ ರತ್ನಯಾತ್ರೆ ಆರಂಭಿಸಿದರು.

ಬೋಗಾದಿಗೆ ಆಗಮಿಸುತ್ತಿದ್ದಂತೆ ಬೃಹತ್ ನವಿಲುಗರಿ ಹಾರ, ಸೌತೆಕಾಯಿ ಹಾರ ಹಾಕಿ ಕುಮಾರಸ್ವಾಮಿ ಅವರನ್ನು ಸ್ವಾಗತಿಸಲಾಯಿತು. ದಾರಿಯುದ್ದಕ್ಕೂ ಕೊಬ್ಬರಿ ಹಾರ, ಬೆಲ್ಲದ ಹಾರ, ಹೂವಿನ ಹಾರ ಹೀಗೆ ವಿವಿಧ ರೀತಿಯ ಹಾರ ತುರಾಯಿಗಳನ್ನು ಕುಮಾರಸ್ವಾಮಿ ಅವರಿಗೆ ಸಮರ್ಪಿಸಲಾಯಿತು. ಪೂರ್ಣಕುಂಭ ಕಳಶ ಹೊತ್ತ ಮಹಿಳೆಯರ ಮೆರವಣಿಗೆ, ಬೈಕ್ ರ‍್ಯಾಲಿ ಗಮನ ಸೆಳೆಯಿತು. ವಿವಿಧೆಡೆ ಕುಮಾರಸ್ವಾಮಿ ಹುಟ್ಟುಹಬ್ಬದ ಅಂಗವಾಗಿ ಕೇಕ್ ಕತ್ತರಿಸಿ ಸಂಭ್ರಮಿಸಲಾಯಿತು.

ನಾಗಮಂಗಲ ತಾಲೂಕಿನ ಬೋಗಾದಿಯಿಂದ ಆರಂಭವಾದ ಯಾತ್ರೆ, ಸುಖಧರೆ, ಬೊಮ್ಮನಾಯಕನಹಳ್ಳಿ, ಅದ್ದಿಹಳ್ಳಿ ವೃತ್ತ, ಬಿಂಡಿಗನವಿಲೆ ಪ್ರವೇಶಿಸಿ, ಅಲ್ಲಿಂದ ಗುಂಡೇನಹಳ್ಳಿ, ಚಾಮಲಾಪುರ, ಬೆಳ್ಳೂರು, ಅಂಚೆ ಚಿಟ್ಟನಹಳ್ಳಿ, ನಾಗಮಂಗಲ ಟೌನ್ ಟಿ.ಬಿ. ಸರ್ಕಲ್, ದೇವಲಾಪುರ, ಭೀಮನಹಳ್ಳಿ, ಮುದ್ದೇನಹಳ್ಳಿ, ಕೊಪ್ಪದಲ್ಲಿ ಯಶಸ್ವಿಯಾಗಿ ಸಾಗಿ ಮರಳಿಗ ಗ್ರಾಮದಲ್ಲಿ ಯಾತ್ರೆ ಮುಕ್ತಾಯವಾಯಿತು. ಯಾತ್ರೆಯಲ್ಲಿ ಶಾಸಕ ಕೆ.ಸುರೇಶ್‌ಗೌಡ, ವಿಧಾನಪರಿಷತ್ ಮಾಜಿ ಸದಸ್ಯ ಎನ್.ಅಪ್ಪಾಜಿಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಮನ್‌ಮುಲ್ ನಿರ್ದೇಶಕರಾದ ನೆಲ್ಲಿಗೆರೆ ಬಾಲು, ಕೋಟಿ ರವಿ ಸೇರಿದಂತೆ ತಾಲೂಕಿನ ಜೆಡಿಎಸ್ ಮುಖಂಡರು ಭಾಗವಹಿಸಿದ್ದರು.

ಪತ್ರ ಚಳವಳಿ, ಪ್ರಚಾರಾಂದೋಲನ ಭಿತ್ತಿ ಪತ್ರ ಬಿಡುಗಡೆ

ಒಕ್ಕಲಿಗ ಸಮುದಾಯಕ್ಕೆ ಮೀಸಲಾತಿ ಹೆಚ್ಚಳಕ್ಕೆ ಎನ್.ಚಲುವರಾಯಸ್ವಾಮಿ ಆಗ್ರಹ



ಮಂಡ್ಯ, ಡಿ.26– ಆರ್ಥಿಕವಾಗಿ ಹಿಂದುಳಿದಿರುವ ಒಕ್ಕಲಿಗರ ಸಮುದಾಯಕ್ಕೆ ನೀಡಿರುವ ಮೀಸಲಾತಿಯನ್ನು ಸರ್ಕಾರ ಹೆಚ್ಚಳ ಮಾಡಬೇಕು ಎಂದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಆಗ್ರಹಿಸಿದರು.

ನಗರದ ಗಾಂಧಿ ಭವನದಲ್ಲಿ ವಿಶ್ವ ಒಕ್ಕಲಿಗರ ಜನಜಾಗೃತಿ ಸಂಘ, ಒಕ್ಕಲಿಗ ಧರ್ಮ ಮಹಾಸಭಾ ವತಿಯಿಂದ ನಡೆದ ಒಕ್ಕಲಿಗರ ಜನಸಂಖ್ಯಾ ಆಧಾರದ ಮೇಲೆ ಶೇ.18 ರಷ್ಟು ಮೀಸಲಾತಿಗಾಗಿ ಸರ್ಕಾರವನ್ನು ಆಗ್ರಹಿಸಿ ಪತ್ರ ಚಳವಳಿ ಹಾಗೂ ಪ್ರಚಾರಾಂದೋಲನ ಭಿತ್ತಿ ಪತ್ರ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಶೇ.10 ರಷ್ಟು ಅನ್ನು ಮೀಸಲಾತಿ ಕೊಡಬೇಕು ಎಂದು ಒತ್ತಾಯಿಸಲಾಗಿದೆ. ಒಕ್ಕಲಿಗ ಸಮುದಾಯದಲ್ಲಿ ರೈತರು, ಯುವಕರು ಸೇರಿದಂತೆ ಎಲ್ಲರಿಗೂ ಅನ್ಯಾಯವಾಗುತ್ತಿದೆ. ಚುಂಚಶ್ರೀಗಳ ಆಶೀರ್ವಾದ ಹಾಗೂ ಅವರ ಸಲಹೆ ಮೇರೆಗೆ ಹೋರಾಟಮಾಡೋಣ ಎಂದು ತಿಳಿಸಿದರು.

ಒಕ್ಕಲಿಗರು ಯಾವುದೇ ಸಮಾಜವನ್ನು ಕಡೆಗಣಿಸಿಲ್ಲ, ಯಾರನ್ನೂ ತೇಜೋವಧೆ ಮಾಡೊಲ್ಲ, ರೈತರ ಪರವಾಗಿರುವ ಸಮುದಾಯ ಒಕ್ಕಲಿಗರ ಸಮುದಾಯ. ಬೇರೆ ಸಮಾಜಕ್ಕೆ ಹೋಲಿಸಿಕೊಂಡರೆ ಒಕ್ಕಲಿಗರ ಸಮಾಜವು ಹೋರಾಟದಲ್ಲಿ ಹಿಂದೆ ಉಳಿದಿದೆ ಎಂದು ವಿಷಾದಿಸಿದರು.

ಒಕ್ಕಲಿಗ ಸಮಾಜವು ಹೋರಾಟಕ್ಕೆ ಸಿದ್ಧವಾಗಬೇಕು. ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕಾದರೆ ಹೋರಾಟ ಅನಿವಾರ್ಯ. ಒಕ್ಕಲಿಗ ಸಮುದಾಯಕ್ಕೆ ಮೀಸಲಾತಿ ಹೆಚ್ಚಳವಾಗುವ ತನಕ ಹೋರಾಟ ಮಾಡಬೇಕು. ನಮ್ಮ ಸಮುದಾಯಕ್ಕೆ ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ಹೆಚ್ಚಳ ಮಾಡಬೇಕು. ಮುಖ್ಯವಾಹಿನಿಗೆ ನಮ್ಮ ಸಮುದಾಯ ಬರಬೇಕು ಎಂದು ಸಲಹೆ ನೀಡಿದರು.

ಕುಣಿಗಲ್ ಅರೇ ಶಂಕರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಸದ್ದಿರಾಮ ಚೈತನ್ಯ ಸ್ವಾಮೀಜಿ ಮಾತನಾಡಿ, ಕರ್ನಾಟದಲ್ಲಿ ಒಕ್ಕಲಿಗರ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ. ಒಕ್ಕಲಿಗರ ಸಮುದಾಯ ಮೆಡಿಕಲ್, ಇಂಜಿನಿಯರಿಂಗ್ ಸೇರಿದಂತೆ ವಿವಿಧ ತಾಂತ್ರಿಕ ವಿಷಯಗಳಲ್ಲಿ ಒಕ್ಕಲಿಗ ವಿದ್ಯಾರ್ಥಿಯು ಅನ್ಯ ಸಮುದಾಯದ ವಿದ್ಯಾರ್ಥಿಗಿಂತ ಹೆಚ್ಚು ಅಂಕ ಪಡೆದಿದ್ದರೂ ಸಹ ಉನ್ನತ ವ್ಯಾಸಂಗಕ್ಕೆ ಅವಕಾಶ ಸಿಗುವುದಿಲ್ಲ, ಕಡಿಮೆ ಅಂಕ ಪಡೆದಿರುವ ಬೇರೆ ಸಮುದಾಯದ ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತಿದೆ. ಕೇವಲ ಒಕ್ಕಲಿಗರು ಪ್ರಭಾವಿಗಳು ಎಂಬುದರಲ್ಲಿಯೇ ಮುಳುಗಿ ಹೋಗಿದ್ದೇವೆ, ಹಾಗಾಗಿ ಮೀಸಲಾತಿ ಹೆಚ್ಚಳಕ್ಕೆ ಉಗ್ರ ಪ್ರತಿಭಟನೆ ಆರಂಭಿಸಬೇಕು ಎಂದು ಆಗ್ರಹಿಸಿದರು.

ಒಕ್ಕಲಿಗರ ಸಮುದಾಯಕ್ಕೆ ಮಿಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಪತ್ರ ಚಳವಳಿ ಹಾಗೂ ಪ್ರಚಾರಾಂದೋಲನದ ಭಿತ್ತಿಪತ್ರ ಬಿಡುಗಡೆ ಮಾಡಲಾಯಿತು. ನಂತರ ಹೊಸ ವರ್ಷದ 2023ರ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಯುವ ರತ್ನ ಪ್ರಶಸ್ತಿ ಪುರಸ್ಕೃತ ಎಂ.ಜಿ.ಸಿದ್ಧರೂಢ(ಸತೀಶ್‌ಗೌಡ), ಕಸ್ತೂರಿ ಕನ್ನಡ ಜನಪರ ವೇದಿಕೆಯ ರಾಜ್ಯಾಧ್ಯಕ್ಷ ರಮೇಶ್‌ಗೌಡ, ವಿಶ್ವ ಒಕ್ಕಲಿಗರ ಜನಜಾಗೃತಿ ಸಂಘದ ರಾಜ್ಯಾಧ್ಯಕ್ಷ ಕೆ.ಎಂ.ರಾಮಕೃಷ್ಣ, ಕರುನಾಡು ಸೇವಕರು ಸಂಘಟನೆ ಮೈಸೂರು ವಿಭಾಗೀಯ ಅಧ್ಯಕ್ಷ ಎಂ.ಬಿ.ನಾಗಣ್ಣಗೌಡ, ಮುಖಂಡರಾದ ಸಿ.ಎಂ.ಕ್ರಾಂತಿ ಸಿಂಹ, ಉಮಾಶಂಕರ್, ಶಿವಲಿಂಗೇಗೌಡ ಎಚ್.ಸಿ., ಲಕ್ಷ್ಮಿಮಂಜುಳ ಬೋರೇಗೌಡ ಸೇರಿದಂತೆ ಇತರರು ಭಾಗವಹಿಸಿದ್ದರು.

ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡರ 58ನೇ ಹುಟ್ಟುಹಬ್ಬ

ಪೌರಕಾರ್ಮಿಕರಿಗೆ ಸಮವಸ್ತ್ರ ವಿತರಣೆ



ಭಾರತೀನಗರ, ಡಿ.26– ವಿಧಾನ ಪರಿಷತ್ ಸದಸ್ಯ ಮಧು ಜಿ ಮಾದೇಗೌಡರ 58ನೇ ಹುಟ್ಟುಹಬ್ಬದ ಅಂಗವಾಗಿ ಭಾರತೀನಗರ ಗ್ರಾಪಂನ ಪೌರಕಾರ್ಮಿಕರಿಗೆ ಭಾರತೀ ಎಜುಕೇಷನ್ ಟ್ರಸ್ಟ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ಆಶಯ್ ಜಿ.ಮಧು ಸಮವಸ್ತ್ರ ವಿತರಿಸಿದರು.

ನಂತರ ಮಾತನಾಡಿದ ಅವರು, ನಮ್ಮ ತಂದೆ ಹುಟ್ಟುಹಬ್ಬವನ್ನು ಅಭಿಮಾನಿಗಳು ನಾನಾ ಕಡೆಗಳಲ್ಲಿ ಆಚರಿಸುತ್ತಿರುವುದು ಸಂತಸ ತಂದಿದೆ. ನಮ್ಮ ತಾತ ಜಿ.ಮಾದೇಗೌಡರು ಬದುಕಿನಲ್ಲಿ ಸಾಮಾಜಿಕ ಕಳಕಳಿ ಹೊಂದಿದ್ದರು. ಅದೇ ಹಾದಿಯಲ್ಲಿ ನಮ್ಮ ತಂದೆ, ನಾವು ಬದುಕುತ್ತಿದ್ದೇವೆ. ಸೋತಾಗ ಕುಗ್ಗದೆ, ಗೆದ್ದಾಗ ಹಿಗ್ಗದೆ ಸಾಮಾಜಿಕ ಕಾರ್ಯಗಳನ್ನು ನಿರಂತರವಾಗಿ ಮಾಡುತ್ತಿದ್ದೇವೆ ಎಂದರು.

ಭಾರತೀ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಬಿ.ಎಂ.ನಂಜೇಗೌಡ ಮಾತನಾಡಿ, ಪೌರಕಾರ್ಮಿಕರಿಗೆ ಸಹಾಯ ಮಾಡುವವರ ಸಂಖ್ಯೆ ವಿರಳ. ಆದರೆ, ಅವರ ತಂದೆ ಮತ್ತು ತಾತರ ಆದರ್ಶವನ್ನು ಮೈಗೂಡಿಸಿಕೊಂಡಿರುವ ಆಶಯ್ ಜಿ ಮಧು ಅವರು ಪೌರಕಾರ್ಮಿಕರಿಗೆ ಸಮವಸ್ತ್ರ ವಿತರಿಸಿದರು. ಸಮಾಜಮುಖಿ ಕಾರ್ಯದಲ್ಲಿ ತೊಡಗಿದ್ದಾರೆ ಎಂದರು.

ಭಾರತೀ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿ ಸಿದ್ದೇಗೌಡ, ಟ್ರಸ್ಟಿ ಬಸವೇಗೌಡ, ತಾಪಂ ಮಾಜಿ ಸದಸ್ಯ ಭರತೇಶ, ಗ್ರಾಪಂ ಅಧ್ಯಕ್ಷ ವೆಂಕಟೇಶ್, ಉಪಾಧ್ಯಕ್ಷೆ ಮಹದೇವಮ್ಮ ಚೌಡಯ್ಯ, ಸದಸ್ಯ ವಿನಯ್, ಮಿಥುನ್, ಕಬ್ಬಾಳಯ್ಯ, ಪುಟ್ಟರಾಮು, ಕೆ.ವಿ.ಶ್ರೀನಿವಾಸ್, ರವಿಚಂದ್ರ, ಸೌಮ್ಯ ಇತರರು ಇದ್ದರು.



ಪಾಲಹಳ್ಳಿ ಗ್ರಾಪಂ ಉಪಾಧ್ಯಕ್ಷೆಯಾಗಿ ಜಯಲಕ್ಷ್ಮೀ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಚುನಾವಣಾಧಿಕಾರಿ ಇಓ ವೀಣಾ, ಗ್ರಾಪಂ ಅಧ್ಯಕ್ಷೆ ರೇಖಾ, ಪಿಡಿಓ ರವಿ, ಕಾರ್ಯದರ್ಶಿ ಕುಸುಮ, ಗ್ರಾಮದ ಮುಖಂಡರಾದ ಪೈ.ಮುಕುಂದ, ರಮೇಶ್ ಬಾಬು, ನಾಗರಾಜು, ಪಟೇಲ್ ಬೋರಣ್ಣ, ಪಿ.ಎಂ. ಪ್ರಭಾಕರ್, ಶಂಕರೇಗೌಡ, ಕೃಷ್ಣಪ್ಪ, ಶೇಖರ್, ಜಯಶೇಖರ್, ಪುಟ್ಟರಾಮು ಹಾಗೂ ಗ್ರಾಮಸ್ಥರು ಇದ್ದರು.

223 ಕೋಟಿ ಆದಾಯ ಗಳಿಸಿದ ಶಬರಿಮಲೆ ದೇವಾಲಯ



ತಿರುವನಂತಪುರಂ: ಶಬರಿಮಲೆ ಅಯ್ಯಪ್ಪಸ್ವಾಮಿ ದೇವಾಲಯ ಮೊದಲ 39 ದಿನಗಳಲ್ಲಿ 223 ಕೋಟಿ ರೂ. ಆದಾಯ ಗಳಿಸಿದೆ. ಪ್ರಸ್ತುತ ಶಬರಿಮಲೆ ಯಾತ್ರೆಯ ಋತುವಿದ್ದು, ಈ ಅವಧಿಯಲ್ಲಿ ಹುಂಡಿಯ ಸಂಗ್ರಹ ಒಂದೇ 70.10 ಕೋಟಿ ರೂಪಾಯಿ ಆಗಿದೆ ಎಂದು ತಿರುವಾಂಕೂರು ದೇವಸ್ವಂ ಮಂಡಳಿ ಅಧ್ಯಕ್ಷ ಕೆ.ಆನಂದಗೋಪನ್ ಹೇಳಿದ್ದಾರೆ. ಬೇರೆ ಮೂಲಗಳ ಆದಾಯದ ಬಗ್ಗೆ ಮಾಹಿತಿ ನೀಡಲು ಟಿಡಿಬಿ ನಿರಾಕರಿಸಿದೆ. ಈ ಪೈಕಿ ಅರವನ ಪ್ರಸಾದ ಮಾರಾಟ ಪ್ರಮುಖ ಆದಾಯದ ಮೂಲವಾಗಿದೆ. ಡಿ.30ರಂದು ಆರಂಭವಾಗುವ ಮಕರವಿಲಕ್ಕು ಋತುವಿನ ಕೊನೆಯ ಹಂತಕ್ಕೆ ಈಗಾಗಲೇ ಸಕಲ ಸಿದ್ಧತೆಗಳೂ ನಡೆದಿವೆ. ಜ.11ರಂದು ಸಾಂಪ್ರದಾಯಿಕ ಎರುಮೆಲಿ ಪೆಟ್ಟತುಲ್ಲಾಲ್ ಆಚರಣೆ ಹಾಗೂ ಪಂದಳಂನಿಂದ ಜ.12ರಿಂದ ತಿರುವಾಭರಣಂ ಮೆರವಣಿಗೆಗೂ ಸಿದ್ಧತೆ ನಡೆಸಲಾಗಿದೆ.

ಅತಿಥಿ ಉಪನ್ಯಾಸಕರ ಗೌರವಧನ ಪರಿಷ್ಕರಣೆಯಲ್ಲಿ ತಾರತಮ್ಯದ ಆರೋಪ

ಉನ್ನತ ಶಿಕ್ಷಣ ಸಚಿವರ ಧೋರಣೆ ವಿರುದ್ಧ ಮರಿತಿಬ್ಬೇಗೌಡ ಧರಣಿ



ಬೆಳಗಾವಿ: ಅತಿಥಿ ಉಪನ್ಯಾಸಕರ ಗೌರವಧನ ಪರಿಷ್ಕರಣೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದು ಆರೋಪಿಸಿ ಜೆಡಿಎಸ್ ಸದಸ್ಯ ಮರಿತಿಬ್ಬೇಗೌಡ ವಿಧಾನಪರಿಷತ್‌ನಲ್ಲಿ ಕೆಲಕಾಲ ಧರಣಿ ನಡೆಸಿದರು.

ಪದವಿ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಅತಿಥಿ ಉಪನ್ಯಾಸಕರ ಗೌರವಧನ ಪರಿಷ್ಕರಣೆ ಕುರಿತು ಮರಿತಿಬ್ಬೇಗೌಡರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಸೇವಾವಧಿ, ಅರ್ಹತೆ ಮತ್ತು ಕಾರ್ಯಭಾರದ ಆಧಾರದಲ್ಲಿ ಅತಿಥಿ ಉಪನ್ಯಾಸಕರಿಗೆ ತಿಂಗಳಿಗೆ 26,000ದಿಂದ 32,000ದವರೆಗೂ ಗೌರವಧನ ನಿಗದಿಪಡಿಸಲಾಗಿದೆ. ಪರಿಷ್ಕೃತ ದರದಲ್ಲೇ ಗೌರವಧನ ಪಾವತಿಸಲಾಗುತ್ತಿದೆ ಎಂದು ಹೇಳಿದರು.

ಮೈಸೂರು ವಿವಿಯಲ್ಲಿ ಅತಿಥಿ ಉಪನ್ಯಾಸಕರ ಗೌರವಧನ ಪರಿಷ್ಕರಣೆ ಹಿಂಪಡೆಯಲಾಗಿದೆ. ಒಂದು ತಿಂಗಳು ಮಾತ್ರ ಪರಿಷ್ಕೃತ ದರದಲ್ಲಿ ಗೌರವಧನ ನೀಡಿದ್ದರು. ನಂತರ ಸ್ಥಗಿತಗೊಳಿಸಲಾಗಿದೆ. ಈ ಉಪನ್ಯಾಸಕರಿಗೆ ತಿಂಗಳಿಗೆ ರಜಾ ಸೌಲಭ್ಯ ಹಾಗೂ ಮೌಲ್ಯಮಾಪನದ ಅವಧಿಯ ವೇತನವನ್ನೂ ನೀಡುತ್ತಿಲ್ಲ. ಸಚಿವರು ಸುಳ್ಳು ಹೇಳುತ್ತಿದ್ದಾರೆ ಎಂದು ಆಕ್ಷೇಪಿಸಿದರು. ವಿವಿಗಳು ಸ್ವತಂತ್ರ ನಿರ್ಧಾರ ಕೈಗೊಳ್ಳುತ್ತವೆ. ವಿಶ್ವವಿದ್ಯಾಲಯಗಳ ಆರ್ಥಿಕ ಸಮಿತಿಯ ತೀರ್ಮಾನದಂತೆ ಈ ನಿರ್ಧಾರ ಕೈಗೊಳ್ಳಲಾಗಿರುತ್ತದೆ ಎಂದು ಸಚಿವರು ತಮ್ಮ ಮಾತನ್ನು ಸಮರ್ಥಿಸಿಕೊಂಡರು. ಪುನಃ ಸಚಿವರ ಉತ್ತರವನ್ನು ಮರಿತಿಬ್ಬೇಗೌಡ ಏರಿದ ಧ್ವನಿಯಲ್ಲಿ ವಿರೋಧಿಸಿದರು. ಸತ್ಯ ಹೇಳಿದರೆ ನಿಮ್ಮ ಜತೆ ಯಾರೂ ಇರುವುದಿಲ್ಲ ಎಂದು ಅಶ್ವತ್ಥ ನಾರಾಯಣ ಪ್ರತ್ಯುತ್ತರ ನೀಡಿದರು.

ಸಚಿವರ ಉತ್ತರ ವಿರೋಧಿಸಿ ಸಭಾಪತಿಯವರ ಪೀಠದ ಎದುರು ಧಾವಿಸಿದ ಮರಿತಿಬ್ಬೇಗೌಡ ಧರಣಿ ಆರಂಭಿಸಿದರು. ಕಾಂಗ್ರೆಸ್‌ನ ಹಲವು ಸದಸ್ಯರು ಧರಣಿಯಲ್ಲಿ ಭಾಗವಹಿಸಿದರು. ಬಳಿಕ ಕಲಾಪ ಮುಂದೂಡಿದ ಸಭಾಪತಿ ಬಸವರಾಜ ಹೊರಟ್ಟಿ, ತಮ್ಮ ಕಚೇರಿಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಪ್ರಮುಖ ನಾಯಕರ ಸಭೆ ನಡೆಸಿದರು. ನಂತರ ಮತ್ತೆ ಕಲಾಪ ಆರಂಭವಾಗುತ್ತಿದ್ದಂತೆಯೇ ಮಾತನಾಡಿದ ಅಶ್ವತ್ಥ ನಾರಾಯಣ, ಸದಸ್ಯರ ಉಪಸ್ಥಿತಿಯಲ್ಲೇ ಅಧಿಕಾರಿಗಳ ಸಭೆ ನಡೆಸಿ ಸಾಧಕ-ಬಾಧಕಗಳನ್ನು ಚರ್ಚಿಸಿ, ಸಮಸ್ಯೆಗೆ ಪರಿಹಾರ ದೊರಕಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು. ಬಳಿಕ ಮರಿತಿಬ್ಬೇಗೌಡ ಮತ್ತು ಕಾಂಗ್ರೆಸ್ ಸದಸ್ಯರು ಧರಣಿ ಅಂತ್ಯಗೊಳಿಸಿದರು.



ಮೈಸೂರು ವಿಶ್ವವಿದ್ಯಾನಿಲಯ ಕೆರಿಯರ್ ಹಬ್, ಮಹಾರಾಣಿ ಮಹಿಳಾ ಕಲಾ ಕಾಲೇಜು ಮತ್ತು ವಿದ್ಯಾವರ್ಧಕ ಸ್ಪರ್ಧಾ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ಕೌಶಲ್ಯ ಅಭಿವೃದ್ಧಿ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು. ಈ ವೇಳೆ ಯುಜಿಸಿ ಸಂಚಾಲಕ ಬಿ.ಸತ್ಯಕುಮಾರ್, ಸಲಹೆಗಾರರಾದ ಎಂ.ಜೆ.ಜಯಶ್ರೀ, ಡಿ.ರವಿಕುಮಾರ್, ಕಾಲೇಜಿನ ಪ್ರಾಂಶುಪಾಲ ಡಾ.ಬೊಮ್ಮರಾಯ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

ಅರಮನೆ ಆವರಣದಲ್ಲಿ ಕಂಚಿನ ಕಂಠದ ವಿಜಯ ಪ್ರಕಾಶ್ ಗಾನ ಸುಧೆ

ನೆರೆದವರಿಗೆ ಮಳೆ ನಡುವೆಯೂ ಮಸ್ತ್ ಮನರಂಜನೆ





ಮೈಸೂರು, ಡಿ.26(ಜಿಎ)- ತುಂತುರು ಮಳೆಯ ನಡುವೆಯೂ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಬಂದ ಪ್ರವಾಸಿಗರಿಗೆ ಕಂಚಿನ ಕಂಠದ ಗಾಯಕ ವಿಜಯ್ ಪ್ರಕಾಶ್ ಗಾನ ಮಾಧುರ್ಯದ ಮೂಲಕ ಸಂಗೀತ ಗಾನಾಮೃತ ಉಣಬಡಿಸಿದರು.

ಮೈಸೂರು ಅರಮನೆ ಮಂಡಳಿ ವತಿಯಿಂದ ಅರಮನೆ ಆವರಣದಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ ಪ್ರಯುಕ್ತ ಏರ್ಪಡಿಸಿರುವ ಸಾಂಸ್ಕೃತಿಕ ಕಾರ್ಯಕ್ರಮದ 3ನೇ ದಿನವಾದ ಇಂದು ಮೈಸೂರಿನ ಹೆಮ್ಮೆಯ ಬಹುಭಾಷಾ ಖ್ಯಾತ ಗಾಯಕ ವಿಜಯ ಪ್ರಕಾಶ್ ಮತ್ತು ತಂಡದವರು ಮೈಸೂರು ಸಂಸ್ಥಾನದ ಪುಣ್ಯ ಭೂಮಿಯಲ್ಲಿ ಸಂಗೀತ ಸುಧೆ ಹರಿಸಿದರು.

ಜಯ ಹೋ ಎಂದು ವೇದಿಕೆ ಏರಿದ ಕಂಚಿನ ಕಂಠದ ವಿಜಯಪ್ರಕಾಶ್ ಕರ್ನಾಟಕ ರತ್ನ ಡಾ. ಪುನೀತ್ ರಾಜ್‌ಕುಮಾರ್ ಅಭಿನಯದ 'ರಾಜಕುಮಾರ' ಚಿತ್ರದ 'ಬೊಂಬೆ ಹೇಳುತೈತೆ' ಗೀತೆ ಮೂಲಕ ಅಪ್ಪು ನೆನಪು ಮೂಡಿಸುತ್ತಿದ್ದಂತೆ ಎಲ್ಲರ ಕಣ್ಣಂಚಿನಲ್ಲಿ ನೀರು ಜಿನುಗುವುದರ ಜೊತೆಗೆ ಇಡೀ ಅರಮನೆ ಆವರಣ ಮೌನದಿಂದೆದ್ದು, ನಂತರ ವಿಶೇಷ ನಮನ ಸಲ್ಲಿಸಿದರು.

ಪುನೀತ್ ರಾಜ್‌ಕುಮಾರ್ ಅಭಿನಯಿಸಿ, ಗಾಯನದ ಮೂಲಕ ಗಮನ ಸೆಳೆದಿದ್ದ 'ಚಲಿಸುವ ಮೋಡಗಳು' ಮತ್ತು 'ಅಣ್ಣಾ ಬಾಂಡ್' ಚಿತ್ರದ 'ಕಾಣದಂತೆ ಮಾಯವಾದನು ನಮ್ಮ ಶಿವ' ಗೀತೆ ಹಾಡುತ್ತಿದ್ದಂತೆ



ಯುವ ಸಮೂಹ ಕುಣಿದು ಕುಪ್ಪಳಿಸಿದರೆ, ಕಿರಿಕ್ ಪಾರ್ಟಿ ಚಿತ್ರದ 'ಬೆಳಗೆದ್ದು ಯಾರ ಮುಖವ ನಾನು ನೋಡಿದೆ' ಗೀತೆಗೆ ನೆರೆದಿದ್ದ ಎಲ್ಲಾ ವಯೋಮಾನದವರು ದನಿಗೂಡಿಸಿ ಸಂಭ್ರಮಿಸಿದರು.

ಮೈಸೂರು ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಅವರು ಕುಟುಂಬ ಸಮೇತರಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಂಗೀತ ಸವಿದರು. ಅವರಿಗಾಗಿ ವಿಜಯ ಪ್ರಕಾಶ್ ಅವರ ನೆಚ್ಚಿನ ಭಾವಗೀತೆ ಡಾ.ಜಿ.ಎಸ್. ಶಿವರುದ್ರಪ್ಪ ಅವರ ರಚನೆಯ 'ಕಾಡು ಮಲ್ಲಿಗೆ' ಗೀತೆಯನ್ನು ಹಾಡಿ ವಿಶೇಷ ಗೌರವ ಸಲ್ಲಿಸಿದರೆ, ಕೆ.ವಿ.ರಾಜೇಂದ್ರ ಅವರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡುತ್ತ ತಮ್ಮ ನೆಚ್ಚಿನ ಗೀತೆಯನ್ನು ಗುನುಗಿದ್ದು, ಎಲ್ಲರ ಗಮನ ಸೆಳೆಯಿತು.

ಅರಮನೆ ಆವರಣದಲ್ಲಿ ಪುಷ್ಪಗಳಲ್ಲಿ ಅರಳಿರುವ ಕಾಶಿ ವಿಶ್ವನಾಥನಿಗೆ ತಲುಪುವಂತೆ 'ಓಂ ಶಿವೋಂ' ಗೀತೆಯನ್ನು ಹಾಡುವ ಮೂಲಕ ಎಲ್ಲರನ್ನು ಭಕ್ತಿ ಸುಧೆಯಲ್ಲಿ ತೇಲಿಸಿದರೆ, ಗಾಯಕಿ ಲಕ್ಷ್ಮೀ ನಾಗರಾಜ್ ಡಾ. ರಾಜ್‌ಕುಮಾರ್ ನಟಿಸಿ, ಗಾಯನದ ಮೂಲಕ ರಾಷ್ಟ್ರ ಪ್ರಶಸ್ತಿ ಪಡೆದ 'ಜೀವನ ಚೈತ್ರ' ಚಿತ್ರದ 'ನಾದಮಯ ಈ ಲೋಕವೆಲ್ಲ' ಗೀತೆ ಮತ್ತು ಗಾಯಕಿ ಅನುರಾಧ ಭಟ್ ಡಾ.ವಿಷ್ಣುವರ್ಧನ್ ಅಭಿಯಿಸಿರುವ ನೀನು ನಕ್ಕರೆ ಹಾಲು ಸಕ್ಕರೆ ಚಿತ್ರದ 'ಬಾನಲ್ಲಿ ನಿನ್ನಿಂದ ಸೂರ್ಯೋದಯ' ಹಾಡಿ ಅರಮನೆ ಆವರಣದಲ್ಲಿ ಭಕ್ತಿ ಲೋಕ ಸೃಷ್ಟಿಸಿದರು.

ಇಡೀ ಅರಮನೆ ಆವರಣದಲ್ಲಿದ್ದ ಜನತೆ ಕಾರ್ಯಕ್ರಮದ ಆರಂಭದಿಂದಲೂ ವಿಶೇಷ ಬೇಡಿಕೆ ಇಟ್ಟಿದ್ದ ರಿಷಬ್ ಶೆಟ್ಟಿ ಅಭಿನಯಿಸಿ, ನಿರ್ದೇಶಿಸಿ, ಭಾರತ ಚಿತ್ರರಂಗ ಹಾಗೂ ಇಡೀ ವಿಶ್ವದ ಗಮನ ಸೆಳೆದ 'ಕಾಂತರ' ಚಿತ್ರದ 'ಸಿಂಗಾರ ಸಿರಿಯೇ' ಗೀತೆಯನ್ನು ವಿಜಯ ಪ್ರಕಾಶ್ ಮತ್ತು ಅನುರಾಧ ಭಟ್ ಹಾಡುವ ಮೂಲಕ ಎಲ್ಲರನ್ನು ಮೂಕವಿಸ್ಮಿತರಾಗಿಸಿದರು.

ಇದಕ್ಕೂ ಮೊದಲು ಬಿ.ಎನ್.ಗಾಯಿತ್ರಿದೇವಿ ಮತ್ತು ತಂಡದವರು ಶಾಸ್ತ್ರೀಯ ಸಂಗೀತ ಪ್ರಸ್ತುತಪಡಿಸಿದರೆ, ನಿತ್ಯ ನಿರಂತರ ಟ್ರಸ್ಟ್‌ನ ವಿಶೇಷಚೇತನ ಮಕ್ಕಳು 'ಚೆನ್ನಪ್ಪ ಚೆನ್ನೇಗೌಡ' ಸಿ.ಅಶ್ವಥ್ ಅವರ 'ಶ್ರಾವಣ ಬಂತು ಶ್ರಾವಣ' ಹಾಗೂ 'ನಮೋ ನಮೋ ಭಾರತಾಂಬೆಗೆ' ಎಂಬ ದೇಶ ಭಕ್ತಿಗೀತೆಗೆ ಹೆಜ್ಜೆ ಹಾಕಿ ಎಲ್ಲರ ಮೆಚ್ಚುಗೆ ಪಡೆದರು.



ಮೈಸೂರು ತಾಲೂಕಿನ ಜಯಪುರ ಹೋಬಳಿಯ ಧನಗಹಳ್ಳಿ ಗ್ರಾಮ ಪಂಚಾಯಿತಿಗೆ ನೂತನ ಅಧ್ಯಕ್ಷರಾಗಿ ಕೆರೆಹುಂಡಿ ಗ್ರಾಮದ ನಿಂಗಮ್ಮ ಅವಿರೋಧವಾಗಿ ಆಯ್ಕೆಯಾದರು. ತಮ್ಮ ಆಯ್ಕೆಗೆ ಸಹಕರಿಸಿದ ಶಾಸಕ ಜಿ.ಟಿ.ದೇವೇಗೌಡ, ಎಪಿಎಂಸಿ ಮಾಜಿ ಸದಸ್ಯ ಕೋಟೆಹುಂಡಿ ಮಹದೇವು ಹಾಗೂ ಗ್ರಾಪಂ ಸದಸ್ಯರನ್ನು ಈ ವೇಳೆ ಆತ್ಮೀಯವಾಗಿ ಅಭಿನಂದಿಸಲಾಯಿತು.

ನಿರ್ಮಲಾ ಸೀತಾರಾಮನ್ ಏಮ್ಸ್‌ಗೆ ದಾಖಲು



ನವದೆಹಲಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ರಾಷ್ಟ್ರ ರಾಜಧಾನಿ ನವದೆಹಲಿಯ ಏಮ್ಸ್ ಆಸ್ಪತ್ರೆಗೆ ದಾಖಲಾಗಿದ್ದಾರೆಂದು ತಿಳಿದುಬಂದಿದೆ. ಆಸ್ಪತ್ರೆಯ ಖಾಸಗಿ ವಾರ್ಡ್‌ನಲ್ಲಿ ನಿರ್ಮಲಾ ಸೀತಾರಾಮನ್ ಅವರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆಂದು ಮೂಲಗಳು ತಿಳಿಸಿವೆ.

ಜೆಡಿಎಸ್ ರಾಜ್ಯ ಉಪಾಧ್ಯಕ್ಷರಾಗಿ ನೇಮಕ



ಮೈಸೂರು,ಡಿ.26-ಪ್ರದೇಶ ಜಾತ್ಯಾತೀತ ಜನತಾದಳದ ಉಪಾಧ್ಯಕ್ಷರನ್ನಾಗಿ ಬನ್ನಿಮಂಟಪದ ಕೃಷ್ಣ ಅವರನ್ನು ನೇಮಕ ಮಾಡಿ ಪ್ರದೇಶ ಜಾತ್ಯಾತೀತ ಜನತಾದಳದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಆದೇಶ ಹೊರಡಿಸಿದ್ದಾರೆ.

ನೇಪಾಳ ಪ್ರಧಾನಿಯಾಗಿ ಪ್ರಚಂಡ ಪ್ರಮಾಣ



ಕಠ್ಮಂಡು: ಸಿಪಿಎನ್-ಮಾವೋವಾದಿ ಸೆಂಟರ್(ಸಿಪಿಎನ್-ಎಂಸಿ) ಅಧ್ಯಕ್ಷ ಪುಷ್ಪ ಕಮಲ್ ದಹಾಲ್ 'ಪ್ರಚಂಡ' ಸೋಮವಾರ ನೇಪಾಳದ ನೂತನ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಈ ಮೂಲಕ 'ಪ್ರಚಂಡ' 3ನೇ ಬಾರಿ ನೇಪಾಳ ಪ್ರಧಾನಿ ಗದ್ದುಗೆ ಏರಿದರು. ಶೀತಲ್ ನಿವಾಸದಲ್ಲಿ ನಡೆದ ಸಮಾರಂಭದಲ್ಲಿ ಪ್ರಚಂಡ ಅವರಿಗೆ ಅಧ್ಯಕ್ಷೆ ಬಿದ್ಯಾದೇವಿ ಭಂಡಾರಿ ಪ್ರತಿಜ್ಞಾವಿಧಿ ಬೋಧಿಸಿದರು. ಇದೇ ವೇಳೆ ನೂತನ ಸಮ್ಮಿಶ್ರ ಸರ್ಕಾರದ ಇತರ ಸಂಪುಟ ಸದಸ್ಯರಿಗೂ ಅಧ್ಯಕ್ಷರು ಪ್ರಮಾಣ ವಚನ ಬೋಧಿಸಿದರು. 275 ಸದಸ್ಯರ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನಲ್ಲಿ 169 ಸದಸ್ಯರ ಬೆಂಬಲ ಹೊಂದಿರುವ ಪತ್ರವನ್ನು ನೇಪಾಳ ಅಧ್ಯಕ್ಷ ಬಿದ್ಯಾದೇವಿ ಭಂಡಾರಿ ಅವರಿಗೆ ಸಲ್ಲಿಸಿದ ನಂತರ 68 ವರ್ಷದ 'ಪ್ರಚಂಡ' ಅವರನ್ನು ನೂತನ ಪ್ರಧಾನಿಯಾಗಿ ನೇಮಿಕ ಮಾಡಿದ್ದರು. ಹೊಸ ಕ್ಯಾಬಿನೆಟ್ 3 ಉಪಪ್ರಧಾನಿಯನ್ನು ಹೊಂದಿದ್ದು, CPN-UMLನಿಂದ ಬಿಷ್ಣು ಪೌಡೆಲ್, CPN-ಮಾವೋವಾದಿ ಸೆಂಟರ್‌ನಿಂದ ನಾರಾಯಣ ಕಾಜಿ ಶ್ರೇಷ್ಠ ಮತ್ತು ರಾಷ್ಟ್ರೀಯ ಸ್ವತಂತ್ರ ಪಕ್ಷದಿಂದ ರಬಿ ಲಮಿಚಾನೆ ಉಪಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ನೇಪಾಳಿ ಕಾಂಗ್ರೆಸ್ ಪಕ್ಷ 89 ಸ್ಥಾನಗಳೊಂದಿಗೆ ಅತಿ ದೊಡ್ಡ ಪಕ್ಷವಾಗಿದ್ದರೂ ಅಧ್ಯಕ್ಷರು ನೀಡಿದ ಗಡುವಿನೊಳಗೆ ಇತರ ಪಕ್ಷಗಳ ಬೆಂಬಲ ಪಡೆದು ಸರ್ಕಾರ ರಚಿಸಲು ಸಾಧ್ಯವಾಗಲಿಲ್ಲ. ಈಗಿನ ನೂತನ ಸರ್ಕಾರದಲ್ಲಿ ಮೊದಲ ಎರಡೂವರೆ ವರ್ಷದ ಅವಧಿಗೆ ಸಿಪಿಎನ್-ಮಾವೋವಾದಿ ಸೆಂಟರ್‌ನ ಪುಷ್ಪ ಕಮಲ್ ದಹಾಲ್ ಪ್ರಚಂಡ ಅವರು ಪ್ರಧಾನಿಯಾಗಿದ್ದು, ಉಳಿದ ಅವಧಿಗೆ ಶರ್ಮಾ ಓಲಿಯವರು ಪ್ರಧಾನಿಯಾಗಲಿದ್ದಾರೆ ಎಂದು ಒಪ್ಪಂದ ಮಾಡಿಕೊಳ್ಳಲಾಗಿದೆ.

ಸುಳ್ಳು ದಾಖಲೆ ಸೃಷ್ಟಿಸಿ ಗ್ರಾಮಲೆಕ್ಕಿಗ ಹುದ್ದೆ ವಂಚನೆ

ಸಂತ್ರಸ್ತೆ ಕುಟುಂಬದಿಂದ ಪ್ರತಿಭಟನೆ



ಮೈಸೂರು, ಡಿ.26(ಎಂಟಿವೈ)- ಸುಳ್ಳು ದಾಖಲೆ ಸೃಷ್ಟಿಸಿ ಅಕ್ರಮವಾಗಿ ಗ್ರಾಮ ಸಹಾಯಕರ ಹುದ್ದೆ ಪಡೆದುಕೊಂಡಿರುವ ಎ.ಆರ್.ರಘುವಯ್ಯ ಅವರನ್ನು ಹುದ್ದೆಯಿಂದ ವಜಾಗೊಳಿಸಿ, ಮೂಲ ಗ್ರಾಮ ಸಹಾಯಕ ತಿಮ್ಮಯ್ಯನವರ ಕುಟುಂಬದ ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ಹುದ್ದೆ ನೀಡಬೇಕೆಂದು ಒತ್ತಾಯಿಸಿ ತಿಮ್ಮಯ್ಯ ಕುಟುಂಬದ ಸದಸ್ಯರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಆಯರಹಳ್ಳಿ ಗ್ರಾಮದ ಗ್ರಾಮ ಸಹಾಯಕ ಹುದ್ದೆಗೆ ತಿಮ್ಮಯ್ಯ ಎಂಬುವವರು ಜಿಲ್ಲಾಧಿಕಾರಿಗಳ ಆಯ್ಕೆ ಮಂಡಳಿಯಿಂದ ಆಯ್ಕೆಯಾಗಿದ್ದರು. ಇವರನ್ನು ಏಕಾಏಕಿ ಹುದ್ದೆಯಿಂದ ತೆಗೆದು ಹಾಕಿ, ಎ.ಆರ್.ರಘುವಯ್ಯ ಎಂಬುವವರಿಗೆ ತಿಮ್ಮಯ್ಯರ ಸ್ವಂತ ತಮ್ಮನ ಮಗನೆಂದು ಹುದ್ದೆ ನೀಡಲಾಗಿದೆ. ಆದರೆ, ಎ.ಆರ್.ರಘುವಯ್ಯ, ತಿಮ್ಮಯ್ಯ ರಕ್ತ ಸಂಬಂಧಿಯೇ ಅಲ್ಲ. ಇದೇ ವಿಚಾರವಾಗಿ ಪ್ರತಿಭಟನೆ ನಡೆಸಿದ್ದರಿಂದ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ತಹಶೀಲ್ದಾರ್ ತಿಮ್ಮಯ್ಯನ ವಂಶವೃಕ್ಷ ಮತ್ತು ಎ.ಆರ್.ರಘುವಯ್ಯನವರ ವಂಶವೃಕ್ಷವನ್ನು ಪರಿಶೀಲನೆ ಮಾಡಿದ್ದಾರೆ. ಆದರೆ ತಹಸೀಲ್ದಾರ್ ವರದಿಯಲ್ಲಿ ವಂಶವೃಕ್ಷದ ಬಗ್ಗೆ ಯಾವುದೇ ಮಾಹಿತಿ ಪರಿಗಣಿಸದೇ ಕಡೆಗಣಿಸಲಾಗಿದೆ. ಇಬ್ಬರ ವಂಶವೃಕ್ಷವನ್ನು ತಾಳೆ ಮಾಡಿಲ್ಲ. ಕೇವಲ ರಘುವಯ್ಯನವರ ಹೇಳಿಕೆಯನ್ನು ಮಾತ್ರ ಪರಿಗಣಿಸಿ ಮುಂದಿನ ಕ್ರಮಕ್ಕೆ ಸೂಚಿಸಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ರಘುವಯ್ಯ ಅವರನ್ನು ನೇಮಕ ಮಾಡಿರುವ ಆದೇಶ ಪತ್ರಕ್ಕೆ ಉಪತಹಶೀಲ್ದಾರ್ ಸಹಿ ಮಾಡಿಲ್ಲ. ಅಕ್ರಮವಾಗಿ ದಾಖಲೆ ಸೃಷ್ಟಿಸಿಕೊಂಡಿದ್ದಾರೆ. ತಿಮ್ಮಯ್ಯನ ಮಗಳಾದ ದೇವಮ್ಮ ವಿಕಲಚೇತನರಾಗಿದ್ದು, ಜೀವನ ನಡೆಸಲು ಕಷ್ಟಪಡುವ ಸ್ಥಿತಿಯಿದೆ. ಹೀಗಾಗಿ ಅನುಕಂಪದ ಆಧಾರದ ಮೇಲೆ ತಿಮ್ಮಯ್ಯನವರು ನಿರ್ವಹಿಸುತ್ತಿದ್ದ ಗ್ರಾಮ ಸಹಾಯಕ ಹುದ್ದೆ ನೀಡಬೇಕು. ಇಬ್ಬರ ವಂಶವೃಕ್ಷ ಪರಿಶೀಲಿಸಿ ಮೂಲ ಗ್ರಾಮ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ತಿಮ್ಮಯ್ಯನವರ ಕುಟುಂಬಕ್ಕೆ ನ್ಯಾಯಕೊಡಿಸಿಕೊಡಬೇಕು. ಇಲ್ಲವಾದಲ್ಲಿ ದಯಾ ಮರಣಕ್ಕೆ ಅನುಮತಿ ನೀಡಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ದೇವಮ್ಮ, ಬಾಲರಾಜ್ ಪಾಲ್ಗೊಂಡಿದ್ದರು.

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ನಡೆಯುತ್ತಿರುವ ಹೋರಾಟ ಬೆಂಬಲಿಸಿ

ಮೈಸೂರಲ್ಲೂ ದಲಿತ ಸಂಘಟನೆಗಳ ಪ್ರತಿಭಟನೆ



ಮೈಸೂರು,ಡಿ.26(ಎಂಟಿವೈ)- ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಬೆಂಗಳೂರು ಮತ್ತು ಬೆಳಗಾವಿಯಲ್ಲಿ ನಡೆಯುತ್ತಿರುವ ಹೋರಾಟ ಬೆಂಬಲಿಸಿ ಪ್ರಗತಿಪರ, ದಲಿತ ಮತ್ತು ಮಾದಿಗ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿ, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಳೆದ 3 ದಶಕಗಳಿಂದ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಹೋರಾಟ ಮಾಡುತ್ತಿದ್ದರೂ ನಮ್ಮ ನ್ಯಾಯಯುತ ಬೇಡಿಕೆ ಈಡೇರಿಸುವಲ್ಲಿ ಎಲ್ಲಾ ಸರ್ಕಾರಗಳು ವಿಫಲವಾಗಿವೆ. ಮಾದಿಗ ಮತ್ತು ಇತರ ಉಪಜಾತಿಗಳ ಬೇಡಿಕೆ ಸಾಮಾಜಿಕ ನ್ಯಾಯದ ಪರವಾಗಿದ್ದು, ಸಂವಿಧಾನದ ಯಾವ ಅಂಶವೂ ಇದಕ್ಕೆ ವಿರುದ್ಧವಾಗಿಲ್ಲ. ಆದರೂ, ನ್ಯಾಯಮೂರ್ತಿ ಅರುಣ್ ಮಿಶ್ರ ನೇತೃತ್ವದ ಪಂಚಪೀಠ ನೀಡಿರುವ ತೀರ್ಪು ಸಾಕ್ಷಿಯಾಗಿದ್ದರೂ ಯಾವ ಸರ್ಕಾರಗಳು ಒಳ ಮೀಸಲಾತಿ ನೀಡದೇ ಇರುವುದು ಪ್ರಜಾಪ್ರಭುತ್ವಕ್ಕೆ ಮಾಡಿದ ಅಪಮಾನ ಎಂದು ಕಿಡಿಕಾರಿದರು.

ಇಷ್ಟೊಂದು ದೊಡ್ಡ ಸಮೂಹದ ಹೋರಾಟ ಕಡೆಗಣಿಸಿ ಕೆಳ ಸಮುದಾಯಗಳ ಹಕ್ಕನ್ನು ದಮನ ಮಾಡಲು ಹೊರಟಿರುವುದು ಖಂಡನೀಯ. ಈ ಹೋರಾಟ ಪರಿಶಿಷ್ಟ ಜಾತಿಗಳ ಒಳಗೆ ಬರುವ ನೂರೊಂದು ಜಾತಿಗಳಿಗೆ ಸಂಬಂಧಿಸಿದ್ದು, ಇವರೆಲ್ಲರೂ ಎಲ್ಲಾ ಕ್ಷೇತ್ರಗಳಲ್ಲಿಯೂ ವಂಚಿತರಾಗಿದ್ದಾರೆ. ಇವರೆಲ್ಲರಿಗೂ ಸಾಮಾಜಿಕ ನ್ಯಾಯ ಸಿಗಬೇಕು ಎನ್ನುವ ಉದ್ದೇಶದಿಂದ ಸುಮಾರು 30 ವರ್ಷಗಳಿಂದ ನಡೆಯುತ್ತಿರುವ ಈ ಹೋರಾಟದಲ್ಲಿ ಹಲವಾರು ಜನ ಪ್ರಾಣ ಕಳೆದುಕೊಂಡಿದ್ದಾರೆ. ಹಲವರು ಜೈಲಿಗೆ ಹೋಗಿದ್ದಾರೆ. ರಾಜಕೀಯ ಲಾಭಕ್ಕಾಗಿ ಎಡ-ಬಲವೆಂದು ಎತ್ತಿಕಟ್ಟುವ ಕೆಲಸವನ್ನು ಆಡಳಿತ ಪಕ್ಷಗಳು ಮಾಡುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ರಾಜ್ಯ ಸರ್ಕಾರ ಕೂಡಲೇ ಸದಾಶಿವ ಆಯೋಗದ ವರದಿ ಅಂಗೀಕರಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ತಕ್ಕಪಾಠ ಕಲಿಸುವುದಾಗಿ ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಮುಖಂಡರಾದ ವಿ.ಮೂರ್ತಿ, ಶಿವಣ್ಣ, ಈಶ್ವರ್, ರಾಚಪ್ಪ, ಕನಕಮೂರ್ತಿ, ರವೀಂದ್ರ, ಸಿ.ರಮೇಶ್, ಸೋಮಶೇಖರ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮಕ್ಕಳು ಸುರಕ್ಷಿತವಾಗಿ ರಸ್ತೆ ದಾಟಲು ಸಂಚಾರಿ ಪೊಲೀಸ್ ಸಿಬ್ಬಂದಿ ನೆರವಾಗಬೇಕಲ್ಲವೇ...?

● ಮಕ್ಕಳ ಬಗ್ಗೆ ಕಳಕಳಿಯುಳ್ಳ ನಾಗರಿಕರಿಂದ ಪೊಲೀಸ್ ಇಲಾಖೆಗೆ ಮನವಿ ● ಪಾರ್ಕಿಂಗ್ ಶುಲ್ಕ ಪಾವತಿಸುವುದರಿಂದ ತಪ್ಪಿಸುವ ಸಲುವಾಗಿ ಮಕ್ಕಳಿಗೆ ಪ್ರಯಾಸ!

ಮೈಸೂರು,ಡಿ.26(ಎಂಟಿವೈ)- ಶಾಲಾ ಶೈಕ್ಷಣಿಕ ಪ್ರವಾಸದ ಅವಧಿ ಆರಂಭವಾಗಿದ್ದು, ಎರಡು ವರ್ಷದ ಬಳಿಕ ಶಾಲಾ ಮಕ್ಕಳು ಪ್ರವಾಸಕ್ಕೆಂದು ಸಾಂಸ್ಕೃತಿಕ ನಗರಿ ಮೈಸೂರಿಗೆ ತಂಡೋಪತಂಡವಾಗಿ ಆಗಮಿಸುತ್ತಿದ್ದಾರೆ. ಆದರೆ, ಮೃಗಾಲಯ, ದಸರಾ ವಸ್ತು ಪ್ರದರ್ಶನ ಹಾಗೂ ಅರಮನೆ ವೀಕ್ಷಿಸಲು ಅಧಿಕ ಸಂಖ್ಯೆಯಲ್ಲಿ ಬರುತ್ತಿರುವ ವಿದ್ಯಾರ್ಥಿಗಳು ವಾಹನ ದಟ್ಟಣೆಯಿಂದ ರಸ್ತೆ ದಾಟಲು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಹೊಸ ವರ್ಷ ಹಾಗೂ ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಳ ಕಂಡಿದೆ. ಪ್ರವಾಸಿಗರೊಂದಿಗೆ ಶಾಲಾ-ಕಾಲೇಜು ವಿದ್ಯಾರ್ಥಿಗಳು ಮೈಸೂರಿಗೆ ಬರುತ್ತಿದ್ದು, ಪ್ರವಾಸಿ ತಾಣಗಳಲ್ಲಿ ಮಕ್ಕಳ ಕಲರವ ಎದ್ದು ಕಾಣುತ್ತಿದೆ. ಆದರೆ, ಹೊರಗಿನಿಂದ ವಿದ್ಯಾರ್ಥಿಗಳು ಬಂದ ವಾಹನಗಳಿಗೆ ಪಾರ್ಕಿಂಗ್ ಶುಲ್ಕ ಹೊರೆಯಾಗುತ್ತಿದ್ದು, ಅದರಿಂದ ತಪ್ಪಿಸಿಕೊಳ್ಳಲು ಲಭ್ಯವಿರುವ ಸ್ಥಳದಲ್ಲಿ ವಾಹನ ನಿಲುಗಡೆ ಮಾಡಿ, ವಿದ್ಯಾರ್ಥಿಗಳನ್ನು ಕಾಲ್ನಡಿಗೆಯಲ್ಲಿ ಕರೆದುಕೊಂಡು ಹೋಗುವುದರಿಂದ ರಸ್ತೆ ದಾಟಲು ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಕಳೆದೊಂದು ವಾರದಿಂದ ಮೈಸೂರಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುವುದರಿಂದ ಅರಮನೆ ಸುತ್ತಮುತ್ತಲಿನ ರಸ್ತೆ, ಮೃಗಾಲಯ ರಸ್ತೆ, ದಸರಾ ವಸ್ತು ಪ್ರದರ್ಶನದ ಸುತ್ತಲಿನ ರಸ್ತೆಗಳಲ್ಲಿ ವಾಹನದಟ್ಟಣೆ ಇರುವುದರಿಂದ ಪ್ರವಾಸಕ್ಕೆಂದು ಬರುವ ಶಾಲಾ ವಿದ್ಯಾರ್ಥಿಗಳೊಂದಿಗೆ ಬರುವ ಶಿಕ್ಷಕರು ರಸ್ತೆ ದಾಟಿಸಲು ಪರದಾಡುವಂತಾಗಿದೆ. ಮಕ್ಕಳು ರಸ್ತೆ ದಾಟುವ ವೇಳೆ ಶಿಕ್ಷಕರು ವಾಹನ ನಿಲ್ಲಿಸುವಂತೆ ಕೈ ತೋರಿಸಿದರೂ, ಕೆಲವರು ನಿಲ್ಲಿಸದೆ ಉದ್ಧಟತನ ಪ್ರದರ್ಶಿಸಿ ಮಕ್ಕಳಲ್ಲಿ ಭಯದ ವಾತಾವರಣ ಉಂಟು ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದಸರಾ ವಸ್ತುಪ್ರದರ್ಶನ ಮುಖ್ಯ ದ್ವಾರದ ಬಳಿ ಬೆಳಗಿನಿಂದ ಸಂಜೆವರೆಗೆ ಓರ್ವ ಸಂಚಾರಿ ಪೇದೆಯನ್ನು ನಿಯೋಜಿಸಿ ರಸ್ತೆ ದಾಟುವವರಿಗೆ ನೆರವಾಗುವಂತೆ ಸಾರ್ವಜನಿಕರು ಮನವಿ ಮಾಡಿದ್ದಾರೆ. ಅಲ್ಲಿರುವ ಅಂಡರ್‌ಪಾಸ್‌ಗೆ ಕೆಲವೊಮ್ಮೆ ಬೀಗ ಹಾಕಲಾಗಿರುತ್ತದೆ. ಕೆಲವೊಮ್ಮೆ ಮಧ್ಯಾಹ್ನದ ನಂತರವಷ್ಟೇ ತೆರೆಯಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಮವಸ್ತ್ರದಲ್ಲಿರುವ ಸಂಚಾರಿ ಪೇದೆಯೊಬ್ಬರನ್ನು ಮುಂದಿನ 10 ದಿನಗಳವರೆಗೆ ಬಿ.ಎನ್. ರಸ್ತೆಯಲ್ಲಿ ನಿಯೋಜಿಸಿದರೆ, ಪ್ರವಾಸಕ್ಕೆಂದು ಬರುವ ಶಾಲಾ ಮಕ್ಕಳ ಸುರಕ್ಷತೆಗೆ ಕ್ರಮ ಕೈಗೊಂಡಂತಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.



ಸದಾ ವಾಹನ ದಟ್ಟಣೆಯಿಂದ ಕೂಡಿರುವ ಮೈಸೂರಿನ ಬಿಎನ್ ರಸ್ತೆ ದಾಟುತ್ತಿರುವ ಶಾಲಾ-ಕಾಲೇಜು ವಿದ್ಯಾರ್ಥಿಗಳನ್ನು ಚಿತ್ರದಲ್ಲಿ ಕಾಣಬಹುದು.

ಕಾಲ್ನಡಿಗೆಗೆ ಕಾರಣ: ಮೃಗಾಲಯ, ಅರಮನೆ ಹಾಗೂ ದಸರಾ ವಸ್ತು ಪ್ರದರ್ಶನ ವೀಕ್ಷಣೆಗೆಂದು ಬರುವವರು ಮೂರು ಸ್ಥಳದಲ್ಲೂ ಪಾರ್ಕಿಂಗ್‌ಗೆ ಹಣ ನೀಡಬೇಕು. 1 ಬಸ್‌ಗೆ 100 ರೂ. ಪಾರ್ಕಿಂಗ್ ಶುಲ್ಕ ನಿಗದಿ ಮಾಡಿರುವುದರಿಂದ ಮೂರು ಸ್ಥಳದಿಂದ 300 ರೂ. ಪಾವತಿಸಬೇಕಾಗುತ್ತದೆ. ಇದನ್ನು ಗಮನಿಸಿರುವ ಸರ್ಕಾರಿ ಶಾಲೆಗಳ ಶಿಕ್ಷಕರು ದೊಡ್ಡಕೆರೆ ಮೈದಾನ ಅಥವಾ ದಸರಾ ವಸ್ತುಪ್ರದರ್ಶನದ ಆವರಣದಲ್ಲಿರುವ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲುಗಡೆ ಮಾಡಿಸಿ, ಮೃಗಾಲಯಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ. ಅಲ್ಲಿಂದ ವಸ್ತು ಪ್ರದರ್ಶನಕ್ಕೆ, ಬಳಿಕ ಅರಮನೆಗೆ ಕಾಲ್ನಡಿಗೆಯಲ್ಲೇ ಕರೆದುಕೊಂಡು ಹೋಗಿ ಎಲ್ಲಾ ಮುಗಿದ ನಂತರ ಮತ್ತೆ ಪಾರ್ಕಿಂಗ್ ಸ್ಥಳಕ್ಕೆ ಮಕ್ಕಳನ್ನು ಕರೆತರುತ್ತಿದ್ದಾರೆ. ಈ ವೇಳೆ ರಸ್ತೆ ದಾಟುವುದೇ ಸಾಹಸವಾಗುತ್ತಿದೆ. ವಸ್ತು ಪ್ರದರ್ಶನ ಗೇಟ್ ಬಳಿ ವಾಹನ ತಪಾಸಣೆಯಲ್ಲಿ ತೊಡಗುವ ಪೊಲೀಸರು ಮಕ್ಕಳನ್ನು ಸುರಕ್ಷಿತವಾಗಿ ರಸ್ತೆ ದಾಟಿಸಲು ನೆರವಾಗಬೇಕು ಎಂದು ಮಕ್ಕಳ ಬಗ್ಗೆ ಕಳಕಳಿಯುಳ್ಳ ನಾಗರಿಕರು ಮನವಿ ಮಾಡಿದ್ದಾರೆ.



ಬಹುಮುಖ ಸ್ಪರ್ಧಾ ಕಣವಾಗಿರುವ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ


ಎನ್.ಮಹೇಶ್


ಜಿ.ಎನ್.ನಂಜುಂಡಸ್ವಾಮಿ


ಎಸ್.ಜಯಣ್ಣ


ಎಸ್.ಬಾಲರಾಜ್



ಎ.ಆರ್.ಕೃಷ್ಣಮೂರ್ತಿ


ಚಾಮರಾಜ್


ಚಂದ್ರಕಲಾಬಾಯಿ


ನಂಜುಂಡಸ್ವಾಮಿ


ಕಮಲ್


ಕೆಂಪರಾಜು


ಕಿನಕಳ್ಳಿ ರಾಚಯ್ಯ


ಮೋಹನ್‌ಕುಮಾರ್


ಬಿ.ಪುಟ್ಟಸ್ವಾಮಿ


ಶಿವಮಲ್ಲು

ಕ್ಷೇತ್ರದ ಶಾಸಕರ ಪರಂಪರೆ

1957–	ದ್ವಿಸದಸ್ಯ ಕ್ಷೇತ್ರ– ಟಿ.ಪಿ.ಬೋರಯ್ಯ, ಕೆಂಪಮ್ಮ	(ಕಾಂಗ್ರೆಸ್)
1962–	ಬಿ.ಬಸವಯ್ಯ	(ಕಾಂಗ್ರೆಸ್)
1967–	ಬಿ.ಬಸವಯ್ಯ	(ಕಾಂಗ್ರೆಸ್)
1972–	ಎಂ.ಸಿದ್ದಮಾದಯ್ಯ	(ಕಾಂಗ್ರೆಸ್)
1978–	ಎಂ.ಸಿದ್ದಮಾದಯ್ಯ	(ಕಾಂಗ್ರೆಸ್)
1983–	ಬಿ.ಬಸವಯ್ಯ	(ಜನತಾ ಪಕ್ಷ)
1985–	ಬಿ.ಬಸವಯ್ಯ	(ಜನತಾ ಪಕ್ಷ)
1989–	ಎಂ.ಸಿದ್ದಮಾದಯ್ಯ	(ಕಾಂಗ್ರೆಸ್)
1994–	ಎಸ್.ಜಯಣ್ಣ	(ಜನತಾದಳ)
1999–	ಜಿ.ಎನ್. ನಂಜುಂಡಸ್ವಾಮಿ	(ಕಾಂಗ್ರೆಸ್)
2004–	ಎಸ್.ಬಾಲರಾಜು	(ಪಕ್ಷೇತರ)
2008–	ಆರ್.ಧ್ರುವನಾರಾಯಣ್	(ಕಾಂಗ್ರೆಸ್)
2009–	ಉಪಚುನಾವಣೆ– ಜಿ.ಎನ್.ನಂಜುಂಡಸ್ವಾಮಿ	(ಬಿಜೆಪಿ)
2013–	ಎಸ್.ಜಯಣ್ಣ	(ಕಾಂಗ್ರೆಸ್)
2018–	ಎನ್.ಮಹೇಶ್	(ಬಿಎಸ್‌ಪಿ)

■ ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಡಿ.26– ಚಾಮರಾಜನಗರ ಜಿಲ್ಲೆಯ ಏಕೈಕ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರವಾದ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಿಂದ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸಲು ಮಾಜಿ ಶಾಸಕರೇ ಹೆಚ್ಚಿನ ಸಂಖ್ಯೆಯಲ್ಲಿ ಆಕಾಂಕ್ಷಿಗಳಾಗಿದ್ದಾರೆ. ಕೊಳ್ಳೇಗಾಲ, ಯಳಂದೂರು ಮತ್ತು ಚಾಮರಾಜನಗರ ತಾಲೂಕುಗಳನ್ನು ಈ ಕ್ಷೇತ್ರ ವ್ಯಾಪಿಸಿಕೊಂಡಿದೆ. ಈ ಹಿಂದೆ ಕೊಳ್ಳೇಗಾಲ ತಾಲೂಕು ಒಂದು ಭಾಗ ಹಾಗೂ ಸಂಪೂರ್ಣ ಯಳಂದೂರು ತಾಲೂಕು ಈ ಕ್ಷೇತ್ರಕ್ಕೆ ಒಳಪಟ್ಟಿತ್ತು. 2008ರಲ್ಲಿ ಕ್ಷೇತ್ರ ಪುನರ್ ವಿಂಗಡಣೆಯಾದಾಗ ಕೊಳ್ಳೇಗಾಲ ನಗರಸಭಾ ವ್ಯಾಪ್ತಿ ಮಾತ್ರ ಈ ಕ್ಷೇತ್ರಕ್ಕೆ ಸೇರಿದ್ದು, ಯಳಂದೂರು ತಾಲೂಕು ಜೊತೆಗೆ ಚಾಮರಾಜನಗರ ತಾಲೂಕಿನ ಸಂತೇಮರಹಳ್ಳಿ ಭಾಗವೂ ಕೂಡ ಈ ಕ್ಷೇತ್ರಕ್ಕೆ ಸೇರಿದೆ.

ಒಂದು ಉಪಚುನಾವಣೆ ಸೇರಿದಂತೆ ಈ ಕ್ಷೇತ್ರದಲ್ಲಿ ನಡೆದ ಒಟ್ಟು 15 ಚುನಾವಣೆಗಳಲ್ಲಿ 9ರಲ್ಲಿ ಗೆಲ್ಲುವ ಮೂಲಕ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆ ಎನಿಸಿದೆ. ಜನತಾ ಪರಿವಾರದ ಅಭ್ಯರ್ಥಿಗಳನ್ನು ಇಲ್ಲಿನ ಮತದಾರರು ಮೂರು ಬಾರಿ ಗೆಲ್ಲಿಸಿದ್ದು, ಒಮ್ಮೆ ಪಕ್ಷೇತರ ಅಭ್ಯರ್ಥಿಯನ್ನು ಕೂಡ ಜಯಶೀಲರನ್ನಾಗಿ ಮಾಡಿದ್ದಾರೆ. ಇಲ್ಲಿ ಶಾಸಕರಾಗಿದ್ದ ಧ್ರುವನಾರಾಯಣ್ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ, ಸಂಸದರಾಗಿದ್ದರಿಂದ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಜಿ.ಎನ್. ನಂಜುಂಡಸ್ವಾಮಿ ಗೆಲುವು ಸಾಧಿಸುವ ಮೂಲಕ ಈ ಕ್ಷೇತ್ರದಲ್ಲಿ ಬಿಜೆಪಿ ಖಾತೆಯನ್ನು ತೆರೆದರು. ಬಿಎಸ್ಪಿ ಕೂಡ ಈ ಕ್ಷೇತ್ರದಲ್ಲಿ ಖಾತೆ ತೆರೆದಿದ್ದು, ಬಿಎಸ್ಪಿಯಿಂದ ಗೆಲುವು ಸಾಧಿಸಿದ್ದ ಹಾಲಿ ಶಾಸಕ ಎನ್.ಮಹೇಶ್ ಈಗ ಬಿಜೆಪಿ ಸೇರ್ಪಡೆಗೊಂಡಿದ್ದಾರೆ.

ಈ ಕ್ಷೇತ್ರದಿಂದ ಆಯ್ಕೆಯಾದ ಇಬ್ಬರು ಶಾಸಕರು ಸಚಿವರಾದರೂ ಕೂಡ ಅವರು ಅಲ್ಪಾವಧಿಗೆ ಮಾತ್ರ ಮಂತ್ರಿಯಾಗಿದ್ದರು. ಮೊದಲಿಗೆ ಬಿ.ಬಸವಯ್ಯ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿ ಇಡೀ ರಾಜ್ಯದಲ್ಲಿ ಅತ್ಯಂತ ಅಲ್ಪಾವಧಿ ಸಚಿವ ಇವರಾಗಿದ್ದು, ಇವರು ಪ್ರಮಾಣವಚನ ಸ್ವೀಕರಿಸಿ ಕೊಳ್ಳೇಗಾಲ ಕ್ಷೇತ್ರಕ್ಕೆ ಕಾಲಿಡುವ ಮುನ್ನವೇ ಎಸ್.ಆರ್. ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರವನ್ನು ಅಂದಿನ ಕೇಂದ್ರ ಸರ್ಕಾರ ವಜಾಗೊಳಿಸಿದ್ದರಿಂದ ಆಗಲೇ ಬಿ. ಬಸವಯ್ಯ ಸಚಿವ ಸ್ಥಾನವನ್ನು ಕಳೆದುಕೊಂಡರು. ಬಿಎಸ್ಪಿ ಶಾಸಕರಾಗಿ ಆಯ್ಕೆಯಾದ ಎನ್. ಮಹೇಶ್ ಅವರು ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಸಚಿವರಾದರೂ ಕೂಡ ಕೆಲವೇ ದಿನಗಳಲ್ಲಿ ಬಿಎಸ್ಪಿ ಮುಖ್ಯಸ್ಥೆ ಮಾಯಾವತಿ ಅವರ ಸೂಚನೆ ಮೇರೆಗೆ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಈ ಕ್ಷೇತ್ರದ ಮತ್ತೊಂದು ವಿಶೇಷವೆಂದರೆ ಇಲ್ಲಿನ ಹಲವಾರು ಶಾಸಕರು ಪಕ್ಷಾಂತರರಾಗಿರುವುದು. ಮೊದಲಿಗೆ ಬಿ. ಬಸವಯ್ಯ ಅವರು 2 ಬಾರಿ ಕಾಂಗ್ರೆಸ್ ಶಾಸಕರಾಗಿ ಆಯ್ಕೆಯಾದ ನಂತರ ಟಿಕೆಟ್ ತಪ್ಪಿದ್ದರಿಂದ ಜನತಾಪಕ್ಷಕ್ಕೆ ಸೇರ್ಪಡೆಗೊಂಡು, ಆ ಪಕ್ಷದಿಂದಲೂ ಎರಡು ಬಾರಿ ಶಾಸಕರಾದರು. ನಂತರ ಜನತಾದಳದಿಂದ ಶಾಸಕರಾಗಿದ್ದ ಎಸ್. ಜಯಣ್ಣ ಅವರು ಸಿದ್ದರಾಮಯ್ಯ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡಾಗ ಅವರನ್ನು ಹಿಂಬಾಲಿಸಿ ಒಮ್ಮೆ ಕಾಂಗ್ರೆಸ್‌ನಿಂದಲೂ ಸ್ಪರ್ಧಿಸಿ ಶಾಸಕರಾದರು. ಕಾಂಗ್ರೆಸ್‌ನಿಂದ ಶಾಸಕರಾಗಿದ್ದ ಜಿ.ಎನ್. ನಂಜುಂಡಸ್ವಾಮಿ ಕ್ಷೇತ್ರ ಪುನರ್‌ವಿಂಗಡಣೆ ನಂತರ ತಮಗೆ ಟಿಕೆಟ್ ತಪ್ಪಿದ್ದರಿಂದ ಬಿಜೆಪಿ ಸೇರ್ಪಡೆಗೊಂಡು ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಶಾಸಕರಾದರು. ಇದೀಗ ಬಿಎಸ್ಪಿಯಿಂದ ಆಯ್ಕೆಯಾಗಿರುವ ಎನ್.ಮಹೇಶ್ ಆ ಪಕ್ಷದಿಂದ ಉಚ್ಚಾಟನೆಗೊಂಡು ಬಿಜೆಪಿ ಸೇರ್ಪಡೆಗೊಂಡಿದ್ದಾರೆ.


ಬಿಜೆಪಿಯಿಂದ ಹಾಲಿ ಶಾಸಕ ಎನ್.ಮಹೇಶ್ ಮತ್ತು ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ ಟಿಕೆಟ್‌ಗಾಗಿ ತೀವ್ರ ಪೈಪೋಟಿ ನಡೆಸುತ್ತಿದ್ದಾರೆ. ಸಮ್ಮಿಶ್ರ ಸರ್ಕಾರ ಪತನಗೊಂಡು ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರಲು ಸಹಕರಿಸಿದ್ದ ಕಾರಣ ತಮಗೆ ಟಿಕೆಟ್ ದೊರೆಯುತ್ತದೆ ಎಂಬ ವಿಶ್ವಾಸ ಎನ್. ಮಹೇಶ್ ಅವರದ್ದಾದರೆ, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ಆಪ್ತರಾಗಿರುವ ಜಿ.ಎನ್. ನಂಜುಂಡಸ್ವಾಮಿ ಅವರು ತಮಗೆ ಟಿಕೆಟ್ ದೊರೆಯುತ್ತದೆ ಎಂಬ ನಂಬಿಕೆಯಿಂದ ಕ್ಷೇತ್ರಾದ್ಯಂತ ಸಂಚರಿಸುತ್ತಿದ್ದಾರೆ. ಮಹಿಳೆಗೆ ಪ್ರಾತಿನಿಧ್ಯ ನೀಡಿದರೆ ತನಗೆ ಟಿಕೆಟ್ ದೊರೆಯುತ್ತದೆ ಎಂಬ ವಿಶ್ವಾಸದಿಂದ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಚಂದ್ರಕಲಾ ಬಾಯಿ ಅವರು ಕೂಡ ಟಿಕೆಟ್‌ಗಾಗಿ ಪ್ರಯತ್ನಿಸುತ್ತಿದ್ದಾರೆ. ಸಂಸದ ವಿ. ಶ್ರೀನಿವಾಸಪ್ರಸಾದ್ ಅವರ ಕಟ್ಟಾ ಬೆಂಬಲಿಗರಾದ ಮಾಂಬಳ್ಳಿ ನಂಜುಂಡಸ್ವಾಮಿ ಕೂಡ ಬಿಜೆಪಿ ಟಿಕೆಟ್‌ಗಾಗಿ ಪ್ರಯತ್ನಿಸುತ್ತಿದ್ದಾರೆ. ಅಲ್ಲದೆ, ಸರ್ಕಲ್ ಇನ್ಸ್‌ಪೆಕ್ಟರ್ ಬಿ. ಪುಟ್ಟಸ್ವಾಮಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಬಿಜೆಪಿಯಿಂದ ಈ ಕ್ಷೇತ್ರದಲ್ಲಿ ಸ್ಪರ್ಧಿಸಲು ತಯಾರಿ ನಡೆಸಿದ್ದು, ಕೆಲ ವರ್ಷಗಳಿಂದಲೇ ಬಿ.ಪುಟ್ಟಸ್ವಾಮಿ ಅಭಿಮಾನಿಗಳ ಸಂಘ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಸಾಮಾಜಿಕ ಕಾರ್ಯಗಳನ್ನು ಮಾಡುವ ಮೂಲಕ ಜನ ಸಂಘಟನೆಯಲ್ಲಿ ತೊಡಗಿದೆ. ಪುಟ್ಟಸ್ವಾಮಿ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ರಾಜಕೀಯ ಪ್ರವೇಶಿಸುವರು ಎಂಬ ಮಾತುಗಳು ಅವರ ಅಭಿಮಾನಿಗಳಿಂದಲೇ ಕೇಳಿಬರುತ್ತಿವೆ.

ಇನ್ನು ಕಾಂಗ್ರೆಸ್‌ನಲ್ಲಿ ಟಿಕೆಟ್‌ಗಾಗಿ ಪೈಪೋಟಿ ನಡೆಸುತ್ತಿರುವ ಎಲ್ಲರೂ ಮಾಜಿ ಶಾಸಕರೇ ಎಂಬುದು ವಿಶೇಷ. ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಆಪ್ತರಾಗಿರುವ ಮಾಜಿ ಶಾಸಕ ಎಸ್. ಜಯಣ್ಣ, ಒಮ್ಮೆ ಪಕ್ಷೇತರರಾಗಿ ಈ ಕ್ಷೇತ್ರದಿಂದ ಗೆಲುವು ಕಂಡಿದ್ದ ಮಾಜಿ ಸಂಸದರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ ಅವರ ಸ್ನೇಹಿತ ಎಸ್. ಬಾಲರಾಜು, ಸಂತೇಮರಹಳ್ಳಿ ಕ್ಷೇತ್ರದಿಂದ ಕೇವಲ ಒಂದು ಮತದಿಂದ ಪರಾಭವಗೊಂಡ ನಂತರ ಸತತವಾಗಿ ಸೋಲನುಭವಿಸುತ್ತಿರುವ ಮಾಜಿ ರಾಜ್ಯಪಾಲ ದಿವಂಗತ ಬಿ. ರಾಚಯ್ಯನವರ ಪುತ್ರ ಎ.ಆರ್. ಕೃಷ್ಣಮೂರ್ತಿ ಪ್ರಬಲ ಆಕಾಂಕ್ಷಿಗಳಾಗಿದ್ದಾರೆ. ಕ್ಷೇತ್ರ ಪುನರ್‌ವಿಂಗಡಣೆ ವೇಳೆ ಸಂತೇಮರಹಳ್ಳಿ ಕ್ಷೇತ್ರ ರದ್ದಾದ ಕಾರಣ ಎ.ಆರ್. ಕೃಷ್ಣಮೂರ್ತಿ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದತ್ತ ಕಣ್ಣು ಹಾಯಿಸಿದರು. ಬಿಜೆಪಿಯಲ್ಲಿದ್ದ ಇವರನ್ನು ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಕರೆತಂದ ಸಿದ್ದರಾಮಯ್ಯ ಕೊಳ್ಳೇಗಾಲ ಕ್ಷೇತ್ರದಲ್ಲಿ ಟಿಕೆಟ್ ನೀಡಿದ್ದರು. ಆದರೆ ಕೃಷ್ಣಮೂರ್ತಿ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ರಾಜ್ಯದಲ್ಲಿ ಮೊದಲ ಬಾರಿಗೆ ಬಿಎಸ್ಪಿ ಖಾತೆ ತೆರೆದದ್ದು ಕೊಳ್ಳೇಗಾಲ ಕ್ಷೇತ್ರದಲ್ಲಿ. ಹಾಲಿ ಶಾಸಕ ಎನ್. ಮಹೇಶ್ ಬಿಎಸ್ಪಿ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದರು. ಹೀಗಾಗಿ ಮುಂದಿನ ಚುನಾವಣೆಯಲ್ಲಿ ಪಕ್ಷ ಗೆಲ್ಲುತ್ತದೆ ಎಂಬ ವಿಶ್ವಾಸದಿಂದ ಆ ಪಕ್ಷದ ಕಾರ್ಯಕರ್ತರು ಕ್ಷೇತ್ರಾದ್ಯಂತ ತಮ್ಮದೇ ಆದ ಶೈಲಿಯಲ್ಲಿ ಪ್ರಚಾರ ನಡೆಸುತ್ತಿದ್ದಾರೆ. ಎನ್. ಮಹೇಶ್ ಬಿಜೆಪಿ ಸೇರ್ಪಡೆಯಾದಾಗ ಆ ಪಕ್ಷದಿಂದ ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗಿದ್ದ ಮುಳ್ಳೂರು ನಾಗರಾಜು ಅಲಿಯಾಸ್ ಕಮಲ್, ವಕೀಲ ಮೋಹನ್‌ಕುಮಾರ್ ಮತ್ತು ಕೃಷ್ಣಮೂರ್ತಿ ನಡುವೆ ಬಿಎಸ್ಪಿ ಟಿಕೆಟ್‌ಗಾಗಿ ಪೈಪೋಟಿ ನಡೆಯುತ್ತಿದೆ.



ಸಿದ್ದರಾಮಯ್ಯ ಪಕ್ಷ ತೊರೆದ ನಂತರ ಕೊಳ್ಳೇಗಾಲ ಕ್ಷೇತ್ರದಲ್ಲಿ ಜೆಡಿಎಸ್ ಹೇಳಿಕೊಳ್ಳುವಂತಹ ಸಾಧನೆ ಮಾಡದಿದ್ದರೂ ಕೂಡ ಆ ಪಕ್ಷದಿಂದ ಸ್ಪರ್ಧಿಸಲು ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಚಾಮರಾಜು ಮತ್ತು ಮುಳ್ಳೂರು ಶಿವಮಲ್ಲು ತೀವ್ರ ಪೈಪೋಟಿ ನಡೆಸುತ್ತಿದ್ದಾರೆ.

ಡಿ.29ರಂದು ನಗರದಲ್ಲಿ ವಿಶ್ವಮಾನವ ದಿನಾಚರಣೆ



ಚಾಮರಾಜನಗರ, ಡಿ.26– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನದ ಅಂಗವಾಗಿ ವಿಶ್ವ ಮಾನವ ದಿನಾಚರಣೆ ಕಾರ್ಯಕ್ರಮವನ್ನು ಡಿ.29ರಂದು ಬೆಳಿಗ್ಗೆ 11 ಗಂಟೆಗೆ ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಸೋಮಣ್ಣ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು.

ಲೋಕಸಭಾ ಸದಸ್ಯ ವಿ. ಶ್ರೀನಿವಾಸಪ್ರಸಾದ್ ಅವರು ಘನ ಉಪಸ್ಥಿತಿ ವಹಿಸುವರು. ಶಾಸಕರಾದ ಆರ್. ನರೇಂದ್ರ, ಎನ್. ಮಹೇಶ್, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಶಾಸಕರಾದ ಸಿ.ಎಸ್. ನಿರಂಜನಕುಮಾರ್, ಮರಿತಿಬ್ಬೇಗೌಡ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಿಜಗುಣರಾಜು, ನಗರಸಭೆ ಅಧ್ಯಕ್ಷರಾದ ಸಿ.ಎಂ. ಆಶಾ, ಉಪಾಧ್ಯಕ್ಷರಾದ ಪಿ. ಸುಧಾ, ಸದಸ್ಯ ಹೆಚ್.ಎಸ್. ಮಮತ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಪಿಡಿಒ ಅಮಾನತು

ಚಾಮರಾಜನಗರ, ಡಿ.26– ಕರ್ತವ್ಯಲೋಪ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ತಾಲೂಕಿನ ಚಿಕ್ಕಾಟಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎನ್. ವಿಶ್ವನಾಥ ಅವರನ್ನು ಅಮಾನತು ಮಾಡಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ ಅವರು ಆದೇಶ ಹೊರಡಿಸಿದ್ದಾರೆ.

ಕಳೆದ ಡಿ.22ರಂದು ಬೆಳಿಗ್ಗೆ 10.40ಕ್ಕೆ ಗ್ರಾಮ ಪಂಚಾಯಿತಿ ಕಚೇರಿಗೆ ಅನಿರೀಕ್ಷಿತ ಭೇಟಿ ನೀಡಿದ ವೇಳೆ ವಿಶ್ವನಾಥ ಅವರು ಅನಧಿಕೃತವಾಗಿ ಗೈರು ಹಾಜರಾಗಿದ್ದರು. ಅಲ್ಲದೇ ಇ–ಸ್ವತ್ತು ಅರ್ಜಿ ವಿಲೇವಾರಿ ಮಾಡದಿರುವ ಬಗ್ಗೆ ಸಾರ್ವಜನಿಕರು ದೂರಿದ್ದರು. ದಾಖಲೆ ಕಡತಗಳ ಸಮರ್ಪಕ ನಿರ್ವಹಣೆ ಮಾಡದೆ ಇರುವುದು ಇತರೆ ಕರ್ತವ್ಯಲೋಪಗಳು ಕಂಡು ಬಂದ ಹಿನ್ನೆಲೆಯಲ್ಲಿ ಎನ್. ವಿಶ್ವನಾಥ ವಿಶ್ವನಾಥ ಅವರನ್ನು ಅಮಾನತು ಮಾಡಿರುವುದಾಗಿ ಆದೇಶದಲ್ಲಿ ತಿಳಿಸಲಾಗಿದೆ.

ಜ.5ಕ್ಕೆ ಜಿಲ್ಲಾ ಪರಿಶಿಷ್ಟ ಜಾತಿ/ವರ್ಗಗಳ ಹಿತರಕ್ಷಣಾ ಸಮಿತಿ ಸಭೆ ಮುಂದೂಡಿಕೆ

ಚಾಮರಾಜನಗರ, ಡಿ.26– ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಡಿಸೆಂಬರ್ 28ರಂದು ನಿಗದಿಯಾಗಿದ್ದ ಜಿಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಹಿತರಕ್ಷಣಾ ಸಮಿತಿ ಸಭೆ ಜನವರಿ 5ಕ್ಕೆ ಮುಂದೂಡಲಾಗಿದೆ.

ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಹಿತರಕ್ಷಣಾ ಸಮಿತಿ ಸಭೆಯು ಜನವರಿ 5ರಂದು ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೆ ಕೆಡಿಪಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವ ಮುಖಂಡ ಗಣೇಶ್‌ಪ್ರಸಾದ್ ಅದ್ದೂರಿ ಹುಟ್ಟುಹಬ್ಬ ಆಚರಣೆ



ಬೇಗೂರು (ಗುಂಡ್ಲುಪೇಟೆ), ಡಿ.26– ಕಾಂಗ್ರೆಸ್ ಯುವ ಮುಖಂಡ ಎಚ್.ಎಸ್. ಗಣೇಶ್‌ಪ್ರಸಾದ್ ಅವರ ಹುಟ್ಟುಹಬ್ಬವನ್ನು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಅದ್ದೂರಿಯಾಗಿ ಆಚರಿಸಿದರು.

ಬೇಗೂರು ಗ್ರಾಮದ ಶ್ರೀ ಬಂಡಿಗೆರೆ ಮಹದೇಶ್ವರ ಸ್ವಾಮಿ ದೇವಸ್ಥಾನ ಆವರಣದಲ್ಲಿ ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪಕ್ಷದ ಬಾವುಟಗಳು, ಶಾಲುಗಳೊಂದಿಗೆ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆಯ ಮೂಲಕ ಗ್ರಾಮದತ್ತ ಸಾಗಿ ಕಂಸಾಳೆ, ವಾದ್ಯ, ಡೊಳ್ಳುಕುಣಿತ, ವೀರಗಾಸೆಯೊಂದಿಗೆ ಹೊರಟ ಕಾರ್ಯಕರ್ತರು ಗ್ರಾಮದ ಶ್ರೀ ಭಗೀರಥ ಪುತ್ಥಳಿಯ ಮುಂಭಾಗ ಕೇಕ್ ಕತ್ತರಿಸಿ ಕಾಂಗ್ರೆಸ್ ಯುವ ಮುಖಂಡ ಎಚ್.ಎಂ.ಗಣೇಶ್‌ಪ್ರಸಾದ್‌ಗೆ ಕ್ರೇನ್ ಮೂಲಕ ಸೇಬಿನ ಹಾರ ಹಾಕುವ ಮೂಲಕ ತುಂಬಾ ವಿಜೃಂಭಣೆಯಿಂದ ತಮ್ಮ ನಾಯಕನ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಶ್ರೀ ಬಂಡಿಗೆರೆ ಮಹದೇಶ್ವರ ಸ್ವಾಮಿ ದೇವಸ್ಥಾನದಿಂದ ಸಾಗಿದ ಮೆರವಣಿಗೆ ರಾಷ್ಟ್ರೀಯ ಹೆದ್ದಾರಿ (766) ಸೇರಿ ಬೇಗೂರಿನ ಶ್ರೀ ಭಗೀರಥ ಪುತ್ಥಳಿಯವರೆಗೂ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ಸ್ವಯಂ ಪ್ರೇರಣೆಯಿಂದ ಸೇರಿ ಸುಮಾರು ಒಂದು ಕಿಮಿ ವರೆಗೂ ಮೆರವಣಿಗೆಯಲ್ಲಿ ಕುಣಿಯುತ್ತ ತಮ್ಮ ನಾಯಕನಿಗೆ ಜೈಕಾರ ಹಾಕಿ ಮುಂದಿನ ಎಂ.ಎಲ್.ಎ. ಗೆ ತಮ್ಮ ಬೆಂಬಲ ಸೂಚಿಸಿದಂತಿತ್ತು. ಮೆರವಣಿಗೆಯ ಸಂದರ್ಭದಲ್ಲಿ ಸುಮಾರು ಮೂರು ಕಿ.ಮೀ.ವರೆಗೂ ವಾಹನಗಳು ನಿಂತು ರಸ್ತೆ ಸಂಚಾರ ಅಸ್ತವ್ಯಸ್ತಗೊಂಡು ವಾಹನ ಸವಾರರು ಸುಮಾರು 2ಗಂಟೆಗಳ ಕಾಲ ರಸ್ತೆ ಮಧ್ಯದಲ್ಲಿ ಸಿಲುಕಿ ಪರದಾಡಿದರೆ ದ್ವಿಚಕ್ರ ವಾಹನ ಸವಾರರು ಫುಟ್‌ಪಾತ್ ಅಂಗಡಿ–ಮುಂಗಟ್ಟುಗಳ ಮುಂದೆ ಸರ್ಕಸ್ ಮಾಡಿ ತೆರಳುವಂತಾಯಿತು.

ಜ.3, ಮಾಜಿ ಸಚಿವ ದಿ. ನಾಗಪ್ಪ ಪುಣ್ಯಸ್ಮರಣೋತ್ಸವ



ಕೊಳ್ಳೇಗಾಲ, ಡಿ.26– ಮಾಜಿ ಸಚಿವ ದಿ. ನಾಗಪ್ಪ ಅವರ 20ನೇ ಪುಣ್ಯ ಸ್ಮರಣೋತ್ಸವ ಸಮಾರಂಭದಲ್ಲಿ ಸುತ್ತೂರು ಶ್ರೀಗಳು, ಸಿದ್ದಗಂಗಾಶ್ರೀಗಳು ಹಾಗೂ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ, ಸಚಿವರಾದ ವಿ. ಸೋಮಣ್ಣ, ಶ್ರೀರಾಮುಲು, ಮಾಜಿ ಸಚಿವ ಪಿ ಜಿ ಆರ್ ಸಿಂಧ್ಯಾ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಮಾಜಿ ಶಾಸಕಿ ಹಾಗೂ ನಾಗಪ್ಪ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷರಾದ ಪರಿಮಳ ನಾಗಪ್ಪ ತಿಳಿಸಿದ್ದಾರೆ.

ಕೊಳ್ಳೇಗಾಲದ ವೆಂಕಟೇಶ್ವರ ಮಹಲ್‌ನಲ್ಲಿ ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಜ.3ರಂದು ಹನೂರಿನಲ್ಲಿ ನಾಗಪ್ಪ ಸ್ಮರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮದಲ್ಲಿ ಸಂಸದ ಶ್ರೀನಿವಾಸ ಪ್ರಸಾದ್, ಬಿ.ವೈ. ವಿಜಯೇಂದ್ರ, ಶಾಸಕ ನಿರಂಜನ್ ಕುಮಾರ್, ಎನ್.ಮಹೇಶ್ ಸೇರಿದಂತೆ ಅನೇಕ ಗಣ್ಯರು, ಸ್ವಾಮೀಜಿಗಳು ಆಗಮಿಸುತ್ತಿದ್ದು ಎಲ್ಲರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರ ಆತ್ಮಕ್ಕೆ ಶಾಂತಿ ಕೋರಬೇಕು ಎಂದರು.

ಮಧುವನಹಳ್ಳಿಯ ಹಿರಿಯ ಮುಖಂಡ ಪ್ರಭಾಕರ್ ಮಾತನಾಡಿ, ನಾಗಪ್ಪ ಅವರು ಸರಳ ಜೀವಿಯಾಗಿ ಜನರ ಜೊತೆ ಬೆರೆಯುತ್ತಿದ್ದರು, ಅವರ ಕುಟುಂಬಕ್ಕೆ ಮತ್ತೆ ಶುಭ ಘಳಿಗೆ ಬಂದಿದೆ. ನಾಗಪ್ಪ ಅವರು ಹಾಗೂ ಪರಿಮಳಾ ನಾಗಪ್ಪ ಅವರನ್ನು ಎಂಎಲ್‌ಎ ಮಾಡಿದ ರೀತಿಯಲ್ಲಿಯೇ ಅವರ ಮಗ ಪ್ರೀತಮ್ ಅವರನ್ನು ಒಂದು ಬಾರಿ ಶಾಸಕರನ್ನಾಗಿ ಆಯ್ಕೆ ಮಾಡಲು ಎಲ್ಲಾ ನಾಗಪ್ಪ ಅಭಿಮಾನಿಗಳು ಶ್ರಮಿಸಬೇಕು ಎಂದರು.

ಆಲಹಳ್ಳಿ ತೋಟೇಶ್, ಚಾಮುಲ್ ನಿರ್ದೇಶಕ ನಂಜುಂಡಸ್ವಾಮಿ, ದಿ. ನಾಗಪ್ಪ ಅವರ ಪುತ್ರ ಡಾ. ಪ್ರೀತನ್ ನಾಗಪ್ಪ ಸೇರಿದಂತೆ ಹಲವರು ಹಾಜರಿದ್ದರು.

ಲಾರಿ ಮಾಲೀಕರು, ಏಜೆಂಟರುಗಳ ಪ್ರತಿಭಟನೆ

6 ಚಕ್ರಕ್ಕಿಂತ ಮೇಲ್ಪಟ್ಟು ವಾಹನಗಳ ಸಂಚಾರ ನಿಷೇಧಕ್ಕೆ ಆಕ್ರೋಶ



ಚಾಮರಾಜನಗರ, ಡಿ.26– ಕೊಳ್ಳೇಗಾಲ– ಹಂದಿಯೂರು, ಮಹದೇಶ್ವರ ಬೆಟ್ಟದ – ಪುಣಜನೂರು ಮಾರ್ಗವಾಗಿ ತಮಿಳುನಾಡು ಸಂಪರ್ಕಿಸುವ ರಸ್ತೆಯಲ್ಲಿ 6 ಚಕ್ರಕ್ಕಿಂತ ಹೆಚ್ಚು ಚಕ್ರಗಳ ವಾಹನಗಳ ಸಂಚಾರವನ್ನು ನಿರ್ಬಂಧಿಸುವ ಆದೇಶವನ್ನು ಹಿಂಪಡೆಯುವಂತೆ ಮತ್ತು ಬಂಡೀಪುರ ಮಾರ್ಗವಾಗಿ ತಮಿಳುನಾಡಿಗೆ ಹಾಗೂ ಮೂಲೆಹೊಳೆ ಮಾರ್ಗವಾಗಿ ಕೇರಳ ರಾಜ್ಯಗಳಿಗೆ 24 ಗಂಟೆಗಳು ಸಂಚರಿಸಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿ ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಅಂಡ್ ಏಜೆಂಟ್ಸ್ ಅಸೋಸಿಯೇಷನ್ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಅಸೋಸಿಯೇಷನ್ ರಾಜ್ಯ ಅಧ್ಯಕ್ಷ ಆರ್.ಷಣ್ಮುಗಪ್ಪ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ ಅವರ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ್ದ ಅಸೋಸಿಯೇಷನ್ ರಾಜ್ಯ ಅಧ್ಯಕ್ಷ ಆರ್.ಷಣ್ಮುಗಪ್ಪ ಮಾತನಾಡಿ, ಚಾಮರಾಜನಗರ ಜಿಲ್ಲೆಯು ಕರ್ನಾಟಕದ ಗಡಿ ಜಿಲ್ಲೆಯಾಗಿದ್ದು ತೀರಾ ಹಿಂದುಳಿದಿದೆ. ಜಿಲ್ಲೆಯಲ್ಲಿ ಬೆಳೆಯುವ ತೆಂಗು, ಭತ್ತ, ಅಡಿಕೆ, ತರಕಾರಿ ಮುಂತಾದ ಪದಾರ್ಥಗಳಿಗೆ ತಮಿಳುನಾಡು ಮಾರುಕಟ್ಟೆಯಲ್ಲಿ ಉತ್ತಮವಾದ ದರದಲ್ಲಿ ವ್ಯಾಪಾರ ಮಾಡಲು ಅವಕಾಶ ಸಿಗುತ್ತಿತ್ತು. ಆದರೆ ಡಿ.23 ರಂದು ಹೊರಡಿಸಿರುವ ಆದೇಶದ ಅನ್ವಯ 6 ಚಕ್ರಕ್ಕಿಂತ ಮೇಲ್ಪಟ್ಟ ವಾಹನಗಳ ಸಂಚಾರ ನಿರ್ಬಂಧಿಸುವ ತಮ್ಮ ನಿರ್ಧಾರ ನಮ್ಮ ರೈತರ ಬೆಳೆಯನ್ನು ಯಾರೂ ಕೊಳ್ಳದ, ಚಾಮರಾಜನಗರ ಹಾಗೂ ಸುತ್ತಮುತ್ತಲಿನ ಜಿಲ್ಲೆಯ ರೈತರನ್ನು ತೀವ್ರ ಸಂಕಷ್ಟಕ್ಕೆ ಒಳಪಡಿಸುವ ಉದ್ದೇಶವೇನೋ ಎಂಬಂತೆ ಭಾಸವಾಗುತ್ತಿದೆ. ಇದರಿಂದಾಗಿ ಚಾಮರಾಜನಗರ ಜಿಲ್ಲೆಯ ಎಲ್ಲಾ ತಾಲೂಕಿನ ರೈತರು ಕಂಗಾಲಾಗಿದ್ದಾರೆ. ಕೇವಲ ವ್ಯವಸಾಯವನ್ನೇ ಅವಲಂಬಿಸಿರುವ ರೈತರ ಜೀವನಕ್ಕೆ ಯಾವುದೇ ರೀತಿಯಲ್ಲಿ ತೊಂದರೆ ಉಂಟಾದರೆ ತಾವೇ ಜವಾಬ್ದಾರರಾಗಿರುತ್ತೀರಿ. ಇದು ಆತುರದ ಹಾಗೂ ರೈತ ವಿರೋಧಿ ನಿಲುವಾಗಿದೆ ಎಂದು ಆರೋಪಿಸಿದರು.

ಇಂತಹ ಜನ ವಿರೋಧಿ, ಪ್ರಗತಿ ವಿರೋಧಿ ನಿರ್ಧಾರ ತೆಗೆದುಕೊಳ್ಳುವ ಮುನ್ನ ಸಭೆ ಕರೆದು ನಮ್ಮೊಂದಿಗೆ ಸೌಜನ್ಯಕ್ಕಾದರೂ ಸಾಧಕ ಬಾಧಕಗಳನ್ನು ಚರ್ಚಿಸಬೇಕಾಗಿತ್ತು. ಆದರೂ ತಾವು ಅದನ್ನು ಮರೆತು ಏಕಾಏಕಿ ರಸ್ತೆ ನಿರ್ಬಂಧಿಸುವ ತೀರ್ಮಾನ ಕೈಗೊಂಡಿದ್ದು ಲಾರಿ ಮಾಲೀಕರ ನಾಗಣೆಯ ಹಕ್ಕನ್ನೇ ಕಸಿದಂತಾಗಿದೆ. ತಾವು ನೀಡಿರುವ ಈ ಆದೇಶವು ರೈತರಿಗೆ ಮಾತ್ರವಲ್ಲದೆ ಚಾಮರಾಜನಗರ ಜಿಲ್ಲೆಯ ಎಲ್ಲಾ ರೀತಿಯ ಕಾರ್ಖಾನೆಗಳ ಮೇಲೆ ತುಂಬಾ ಅವಲಂಬಿಸಿರುವ ಲಾರಿ ಮಾಲೀಕರ ಮೇಲೆ ತೀರಾ ವ್ಯತಿರಿಕ್ತವಾಗಿ ಪರಿಣಾಮವನ್ನು ಬೀರುತ್ತಿದೆ ಎಂದರು.

ಲಾರಿ ಮಾಲೀಕರು ಸರ್ಕಾರಕ್ಕೆ ರಸ್ತೆ ತೆರಿಗೆ ಕಟ್ಟಿ ಸಂಚರಿಸುತ್ತಿರುವುದು. ನೀವು ಇಲ್ಲಸಲ್ಲದ ನೆಪವೊಡ್ಡಿ ಸಂಪೂರ್ಣವಾಗಿ ಮೈಸೂರು ಜಿಲ್ಲೆಯನ್ನೇ ನಿರ್ಬಂಧಿಸಲಾಗಿದೆ. ಸಂವಿಧಾನ ನೀಡಿರುವ ಮೂಲಭೂತ ಹಕ್ಕನ್ನೇ ಕಸಿದಂತಾಗಿದೆ. ಚಾಮರಾಜನಗರ ಮತ್ತು ಸುತ್ತಮುತ್ತಲಿನ ಜಿಲ್ಲೆಗಳ ರೈತರ ಹಿತದೃಷ್ಟಿಯಿಂದ ನೀವು ನೀಡಿರುವ ಆದೇಶವನ್ನು ಹಿಂಪಡೆಯಬೇಕು. ಇಲ್ಲದಿದ್ದರೆ ಜ.1 ರಿಂದ ಯಾವುದೇ ರೀತಿಯ ಸರಕು ಸಾಗಣೆ ವಾಹನಗಳ ಸಂಚಾರವನ್ನು ಸಂಪೂರ್ಣಗೊಳಿಸಿ ರಸ್ತೆತಡೆ ನಡೆಸುವ ಮೂಲಕ ತೀವ್ರ ಹೋರಾಟ ಮಾಡುವುದಾಗಿ ಜಿ.ಆರ್.ಷಣ್ಮುಗಪ್ಪ ಸರ್ಕಾರವನ್ನು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಅಶ್ವಥ್, ಕಾರ್ಯದರ್ಶಿ ಸ್ವಾಮಿ, ಚಾಮರಾಜನಗರ ಅಧ್ಯಕ್ಷ ಜಿಯಾವುಲ್ಲಾ, ಕಾರ್ಯದರ್ಶಿ ಇರ್ಷಾದ್, ನಂಜನಗೂಡು ಅಧ್ಯಕ್ಷ ವಿಶ್ವನಾಥ್, ರಾಜಶೇಖರ್, ಕೊಳ್ಳೇಗಾಲ ಅಧ್ಯಕ್ಷ ಉಣ್ಣಿಕೃಷ್ಣನ್, ಕಾರ್ಯದರ್ಶಿ ಅಕ್ರಂಪಾಷ, ಅವಿನಾಶ್, ಮೈಸೂರು ಅಧ್ಯಕ್ಷ ಬಿ.ಕೋದಂಡರಾಮು, ಮೊಹಮ್ಮದ್ ಮುಜು, ರಾಮಾಪುರ ಮಣಿಸೆಂದಿಲ್, ವಿಘ್ನೇಶ್ ಇತರರು ಭಾಗವಹಿಸಿದ್ದರು.

ಮೂವರು ಕಲಾವಿದರಿಗೆ ರಾಜ್ಯಮಟ್ಟದ ಸಿಜಿಕೆ ಪ್ರಶಸ್ತಿ ಪ್ರದಾನ



ಚಾಮರಾಜನಗರ, ಡಿ. 26– ಕರ್ನಾಟಕ ಬೀದಿ ನಾಟಕ ಅಕಾಡೆಮಿ, ಕರ್ನಾಟಕ ರಂಗ ಪರಿಷತ್ತು ಜಿಲ್ಲಾ ಘಟಕ, ರಂಗವಾಹಿನಿ ಸಹಯೋಗದಲ್ಲಿ ಡ್ರಾಮಾ ಸೀನರಿ ಮಾಲೀಕ ನಾಗಸುಂದರ್, ರಂಗಕಲಾವಿದ ಮಿಮಿಕ್ರಿ ಮಲ್ಲಣ್ಣ ರಂಗಕಲಾವಿದ ಕಲೆ ನಟರಾಜು ಅವರಿಗೆ ರಂಗಾಯಣ ಮಾಜಿ ನಿರ್ದೇಶಕ ಹೆಚ್. ಜನಾರ್ಧನ್ (ಜನ್ನಿ) ಪ್ರಶಸ್ತಿ ಪ್ರದಾನ ಮಾಡಿದರು.

ಯಳಂದೂರು ತಾಲೂಕಿನ ಗುಂಬಳ್ಳಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಅಭಿನಯಿಸುವ ಉರಿಲಿಂಗಪೆದ್ದಿ ನಾಟಕ ಪ್ರದರ್ಶನ ಅನುಭವ ಮಂಟಪ ತೆರೆದಿಡುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ಸಾರಿತು. ವೀಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ನಗರದ ಡಾ. ರಾಜ್‌ಕುಮಾರ್ ಜಿಲ್ಲಾ ಕಲಾಮಂದಿರದಲ್ಲಿ ಕರ್ನಾಟಕ ಬೀದಿ ನಾಟಕ ಅಕಾಡೆಮಿ, ಕರ್ನಾಟಕ ರಂಗ ಪರಿಷತ್ತು ಜಿಲ್ಲಾ ಘಟಕ, ರಂಗವಾಹಿನಿ ಸಹಯೋಗದಲ್ಲಿ ಉರಿಲಿಂಗಪೆದ್ದಿ ನಾಟಕ ಪ್ರದರ್ಶನ ಹಾಗೂ ರಾಜ್ಯ ಮಟ್ಟದ ಸಿಜಿಕೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿದ ರಂಗಾಯಣ ಮಾಜಿ ನಿರ್ದೇಶಕ ಹೆಚ್. ಜನಾರ್ಧನ್ (ಜನ್ನಿ) ಮಾತನಾಡಿ, ಹಲವಾರು ರೀತಿಯ ವಿನೂತನ ಮತ್ತು ನಿರಂತರ ರಂಗ ಪ್ರಯೋಗಗಳಲ್ಲಿ ತನ್ನ ಬದುಕನ್ನು ಮೀಸಲಿಟ್ಟ ರಂಗ ಸಂಘಟಕ ಪ್ರೊ ಸಿ.ಜಿ.ಕೃಷ್ಣಸ್ವಾಮಿ ರಂಗಭೂಮಿಯ ದೈತ್ಯ ಪ್ರತಿಭೆ, ಅವರ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡುವ ಮೂಲಕ ಅವರನ್ನು ಸ್ಮರಿಸಿಕೊಳ್ಳುವ ಕೆಲಸವನ್ನು ಕರ್ನಾಟಕ ಬೀದಿ ನಾಟಕ ಅಕಾಡೆಮಿ, ಕರ್ನಾಟಕ ರಂಗ ಪರಿಷತ್ತು ಜಿಲ್ಲಾ ಘಟಕ, ರಂಗವಾಹಿನಿ ಸಂಸ್ಥೆ ಮಾಡುತ್ತಿರುವುದು ಬಹಳ ಅರ್ಥಪೂರ್ಣವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಿಜಿಕೆ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿ, ಉತ್ತಮ ನಾಟಕದಿಂದ ಸಾಮಾಜಿಕ ಮೌಲ್ಯ ಹೆಚ್ಚಳವಾಗುತ್ತದೆ. ಆ ನಿಟ್ಟಿನಲ್ಲಿ ಉರಿಲಿಂಗ ಪೆದ್ದಿ ನಾಟಕ ಮಾಡಿ ಬಂದಿದೆ. ಪಾತ್ರಧಾರಿಗಳೆಲ್ಲ ಉತ್ತಮವಾಗಿ ಅಭಿನಯಿಸಿದ್ದು, ಸಂಭಾಷಣೆ ಚೆನ್ನಾಗಿ ಬಂದಿದೆ. ಈ ನಾಟಕ ರಾಜ್ಯ ಮಟ್ಟದಲ್ಲಿ ಪ್ರದರ್ಶನಗೊಂಡು ಜಿಲ್ಲೆಗೆ ಕೀರ್ತಿ ತರುವಂತಾಗಲಿ ಎಂದು ಆಶಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಕಾಡಾ ಅಧ್ಯಕ್ಷ ನಿಜಗುಣರಾಜು ಮಾತನಾಡಿ, ಜಿಲ್ಲೆಯು ಕಲಾವಿದರ ತವರೂರಾಗಿದ್ದು, ಜಿಲ್ಲೆಯ ಕಲಾವಿದರನ್ನು ಪೋಷಿಸಿ ಪ್ರೋತ್ಸಾಹಿಸುವ ಕೆಲಸ ಆಗಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ದಲಿತ ಮಹಾಸಭಾ ಅಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು) ಮಾತನಾಡಿದರು.

ಸಹಾಯಧನ ವಿತರಣೆ: ಇದೇ ಸಂದರ್ಭದಲ್ಲಿ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಜಾನಪದ ನೀಲಗಾರ ಕಲಾವಿದ ಬಂಗಾರಶೆಟ್ಟಿ ಅವರಿಗೆ ಬೆಂಗಳೂರಿನ ಕಿರಂ ಬಳಗದಿಂದ ಸಂಸ ಸುರೇಶ್ ಅವರು 5 ಸಾವಿರ ರೂ. ಧನ ಸಹಾಯ ನೀಡಿದರು. ಕರ್ನಾಟಕ ರಂಗ ಪರಿಷತ್ತು ರಾಜ್ಯ ಸಂಚಾಲಕ ಸಿಎಂ ನರಸಿಂಹಮೂರ್ತಿ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಜಿಪಂ ಲೆಕ್ಕಾಧಿಕಾರಿ ಹೆಚ್.ಎಸ್.ಗಂಗಾಧರ್, ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಗಾನಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಗೌರವ ಅಧ್ಯಕ್ಷ ಸುರೇಶ್ ಗೌಡ, ಕರ್ನಾಟಕ ರಂಗ ಪರಿಷತ್ತು ಜಿಲ್ಲಾಧ್ಯಕ್ಷ ಶಾಂತರಾಜ್ ಇತರರು ಹಾಜರಿದ್ದರು.

ಕಾಲುವೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಚಾಮರಾಜನಗರ, ಡಿ.26– ತಾಲೂಕಿನ ಅಮಚವಾಡಿ ಗ್ರಾಮದಲ್ಲಿ ಕಾಲುವೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು

ನಂತರ ಅವರು ಮಾತನಾಡಿ, ಕ್ಷೇತ್ರ ವ್ಯಾಪ್ತಿಯಲ್ಲಿ ಜನತೆಯ ಆಶಯಕ್ಕೆ ಬದ್ಧರಾಗಿ ರಸ್ತೆ ಚರಂಡಿ, ಸಮುದಾಯ ಭವನ, ಆಶ್ರಯ ಮನೆ, ಗಂಗಾ ಕಲ್ಯಾಣ ಯೋಜನೆ ಸೇರಿದಂತೆ ಸರ್ಕಾರದ ಸೌಲಭ್ಯಗಳನ್ನು ಜನರಿಗೆ ಪ್ರಾಮಾಣಿಕವಾಗಿ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ಗ್ರಾಮದ ಜನರ ಅನುಕೂಲಕ್ಕಾಗಿ ಮುಖ್ಯರಸ್ತೆಯ ಬದಿ ಕಾವೇರಿ ನೀರಾವರಿ ನಿಗಮದ ವತಿಯಿಂದ 40 ಲಕ್ಷ ರೂ. ವೆಚ್ಚದಲ್ಲಿ ಕಾಲುವೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದರು. ಗ್ರಾಪಂ ಅಧ್ಯಕ್ಷ ಮಹೇಂದ್ರ, ಸದಸ್ಯರಾದ ರಾಮು ಕುಮಾರ್, ಮಮತಾ, ಮುಖಂಡರಾದ ಮಹೇಶ್‌ಕುಮಾರ್ ಕಂಠಿ ಮಹದೇವಶೆಟ್ಟಿ, ಮಾದೇಶ ಗುತ್ತಿಗೆದಾರ ಹನುಮಂತ ಗ್ರಾಮಸ್ಥರು ಹಾಜರಿದ್ದರು.

ಮೂರನೇ ಪುಟದಿಂದ

ಮಾಸ್ಕ್ ಕಡ್ಡಾಯ

ನಿಷೇಧಿಸಲಾಗಿದೆ. ಚೀನಾ ಮತ್ತು ಬೇರೆ ಬೇರೆ ದೇಶದಲ್ಲಿ ಕೋವಿಡ್ ಸೋಂಕಿತ ಸಂಖ್ಯೆ ಹೆಚ್ಚಾಗಿದೆ. ಮುಂಜಾಗ್ರತಾ ಕ್ರಮವಾಗಿ ದೇಶದಲ್ಲೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ. ರಾಜ್ಯದ ಸಿನಿಮಾ ಥಿಯೇಟರ್‌ಗಳಲ್ಲಿ ಮಾಸ್ಕ್ ಧರಿಸುವುದು ಕಡ್ಡಾಯ. ಶಾಲಾ-ಕಾಲೇಜುಗಳ ತರಗತಿಯೊಳಗೆ ಎಲ್ಲರೂ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಎಂದರು. ವಿಮಾನದಲ್ಲಿ ಬರುವ ಪ್ರಯಾಣಿಕರ ತಪಾಸಣೆಗಾಗಿ ಮಂಗಳೂರಿನ ವೆನ್‌ಲಾಕ್ ಮತ್ತು ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಪಬ್, ಕ್ಲಬ್, ಬಾರ್, ಶಾಲಾ ಕಾಲೇಜುಗಳಲ್ಲಿ ಮಾಸ್ಕ್ ಕಡ್ಡಾಯದ ಜೊತೆಗೆ ಸ್ಯಾನಿಟೈಸರ್ ಬಳಕೆಯೂ ಕಡ್ಡಾಯ. ರೆಸಾರ್ಟ್‌ಗಳಲ್ಲಿ ಕೊರೊನಾ ರೂಲ್ಸ್‌ಗಳನ್ನು ಕಡ್ಡಾಯವಾಗಿ ಫಾಲೋ ಮಾಡಬೇಕು. ಬಾರ್ ಸಿಬ್ಬಂದಿ ಮಾತ್ರವಲ್ಲ ಬಾರ್‌ಗೆ ಬರೋ ಗ್ರಾಹಕರೂ ಡಬಲ್ ಡೋಸ್ ಹಾಕಿಸಿಕೊಂಡಿರಬೇಕು. ಈ ರೂಲ್ಸ್ ಪಾರ್ಟಿಗಳಿಗೂ ಅನ್ವಯ ಎಂದು ಸಚಿವ ಅಶೋಕ್ ತಿಳಿಸಿದರು.

ತೊಂದರೆ ಆಗದಂತೆ ಮುನ್ನೆಚ್ಚರಿಕೆ

ಮಾರ್ಗಸೂಚಿಗಳನ್ನು ಸೇರಿಸಲಾಗುವುದು. ಜನಸಾಮಾನ್ಯರ ದೈನಂದಿನ ಚಟುವಟಿಕೆ, ಆರ್ಥಿಕತೆಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಹಂತಹಂತವಾಗಿ ಜಾರಿ ಮಾಡಲಾಗುವುದು ಎಂದರು. ಬೆಳಗಾವಿಯಲ್ಲಿನ ಅಧಿವೇಶನ ಫಲಪ್ರದ ಹಾಗೂ ಅರ್ಥಪೂರ್ಣವಾಗಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಉತ್ತರ ಕರ್ನಾಟಕದ ಸಮಸ್ಯೆಗಳು ಮತ್ತು ಯೋಜನೆಗಳ ಬಗ್ಗೆ ಸುದೀರ್ಘ ಚರ್ಚೆಯಾಗಬೇಕು. ವಿರೋಧಪಕ್ಷಗಳು ಹತ್ತು ಹಲವಾರು ವಿಷಯಗಳ ಬಗ್ಗೆ ಚರ್ಚಿಸಲಿವೆ. ಯಾವ ವಿಚಾರವೇ ಆಗಲಿ ಚರ್ಚಿಸಲು ರಾಜ್ಯ ಸರ್ಕಾರ ಸಿದ್ಧವಿದೆ ಎಂದರು.

ಎಲೆಕ್ಟ್ರಿಕ್ ಬಸ್ ಸಂಚಾರ

ಎಂದು ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಅಶೋಕಕುಮಾರ್ ತಿಳಿಸಿದ್ದಾರೆ. ಮೈಸೂರು ಸೇರಿದಂತೆ ರಾಜ್ಯದ ಹಲವು ಜಿಲ್ಲಾ ಕೇಂದ್ರಗಳಿಗೆ ಇ-ಬಸ್ ಸಂಚಾರ ಸೇವೆ ಆರಂಭಿಸಲಿದ್ದು, ಖಾಸಗಿ ಆಪರೇಟರ್‌ಗಳಿಗೆ ಕಿ.ಮೀ.ಗೆ 55 ರೂ.ನಂತೆ ಹಣ ಪಾವತಿಸಲಾಗುವುದು ಎಂದು ಸಾರಿಗೆ ಸಂಸ್ಥೆ ಅಧಿಕಾರಿಗಳು ತಿಳಿಸಿದ್ದಾರೆ. ಹೈದರಾಬಾದ್ ಮೂಲದ ಒಲೆಕ್ಟ್ರಾ ಗ್ರೀನ್ ಟೆಕ್ ಲಿಮಿಟೆಡ್ ಇ-ಬಸ್ ಸಂಚಾರ ಸೇವೆ ಒದಗಿಸಲು ಮುಂದೆ ಬಂದಿದ್ದು, ಚಾರ್ಜ್ ಮಾಡಿದರೆ 550ರಿಂದ 60 ಕಿ.ಮೀ. ಕ್ರಮಿಸುವ ಬಸ್‌ನಲ್ಲಿ ಜನರೂ ಸಹ ದುಬಾರಿ ದರ ಎನಿಸಿದರೂ ಎಲೆಕ್ಟ್ರಿಕ್ ವಾಹನಗಳಲ್ಲಿ ಓಡಾಡಲು ಮುಂದೆ ಬರುತ್ತಿರುವುದರಿಂದ ಈ ಯೋಜನೆ ಯಶಸ್ವಿಯಾಗಲಿದೆ ಎಂಬ ವಿಶ್ವಾಸ ಮೂಡಿದೆ.

ಮೀಸಲಾತಿ ಹೆಚ್ಚಳ ವಿಧೇಯಕ ಅಂಗೀಕಾರ

ಸಂವಿಧಾನದ ಒಂಭತ್ತನೇ ಪರಿಚ್ಛೇದಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂಬ ಸಲಹೆಯನ್ನು ನ್ಯಾಮೋಹನ್ ದಾಸ್ ಅವರು ವರದಿ ನೀಡಿದ್ದರು. ಅದರ ಅನ್ವಯ ಈ ಅಧಿವೇಶನದಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯದ ಮೀಸಲಾತಿ ಹೆಚ್ಚಳ ವಿಧೇಯಕ ಮಂಡಿಸಿ, ವಿಧಾನಸಭೆಯಲ್ಲಿ ಅಂಗೀಕರಿಸಲಾಗಿದೆ. ನಂತರ ವಿಧಾನ ಪರಿಷತ್ ನಲ್ಲಿ ವಿಧೇಯಕ ಮಂಡಿಸಲಾಗುವುದು. ಪರಿಷತ್ ನಲ್ಲಿ ಅಂಗೀಕಾರ ಪಡೆದ ನಂತರ, ಇದು SC/ST ಪಂಗಡದವರಿಗೆ ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರಿ ನೇಮಕಾತಿಗಳಲ್ಲಿ ಹೆಚ್ಚಿನ ಮೀಸಲಾತಿಯನ್ನು ಒದಗಿಸುತ್ತದೆ.

ಮೀಸಲಾತಿ ಕಲ್ಪಿಸಿದರೆ ಪಕ್ಷಕ್ಕೆ ದೊಡ್ಡ ಬಲ

ಮತ್ತು ಆ ಸಮಾಜಕ್ಕೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಯಾವ ರೀತಿ ಪ್ರಯೋಜನವಾಗುತ್ತದೆ ಎಂಬೆಲ್ಲ ಅಂಕಿ ಅಂಶಗಳನ್ನು ವರಿಷ್ಠರ ಮುಂದಿಟ್ಟಿದ್ದಾರೆ. ಕರ್ನಾಟಕದಲ್ಲಿ ಶೇಕಡ 2 ರಷ್ಟು ಮಂದಿ ಮಾತ್ರ ಬ್ರಾಹ್ಮಣ ಸಮುದಾಯವಿದೆ. ಆ ಸಮುದಾಯ ಎಂದಿಗೂ ನಮ್ಮ ಪಕ್ಷದ ಜೊತೆ ಇರುತ್ತದೆ. ಅವರಿಗೂ ಒಂದಷ್ಟು ಅವಕಾಶ ನೀಡಲು ಕ್ರಮ ಕೈಗೊಳ್ಳುತ್ತೇನೆ. ಈಗಾಗಲೇ ಪರಿಶಿಷ್ಟರಿಗೆ ಮೀಸಲಾತಿ ಸೌಲಭ್ಯವನ್ನು ಹೆಚ್ಚಳ ಮಾಡಿ ಆದೇಶ ಮಾಡಲಾಗಿದೆ. ಅದನ್ನು ಅನುಷ್ಠಾನಗೊಳಿಸಲು ಕೇಂದ್ರದ ಸಹಕಾರ ಅಗತ್ಯವಿದೆ.

ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷರು ಮೀಸಲಾತಿ ಹಂಚಿಕೆಗೆ ಸಂಬಂಧಿಸಿದಂತೆ ಪ್ರಾಥಮಿಕ ವರದಿ ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಇದರಂತೆ ಹಿಂದುಳಿದ ವರ್ಗ 2ಎ ಪಟ್ಟಿಯಲ್ಲಿರುವ ಸಮುದಾಯಗಳಿಗೆ ಯಾವುದೇ ರೀತಿಯ ಮೀಸಲಾತಿ ಕೊರತೆಯಾಗದಂತೆ ಪಂಚಮಸಾಲಿ ಹಾಗೂ ಒಕ್ಕಲಿಗರಿಗೆ ಪ್ರತ್ಯೇಕವಾಗಿ ಹೆಚ್ಚುವರಿ ಸೌಲಭ್ಯ ಕಲ್ಪಿಸುವುದಾಗಿ ಮುಖ್ಯಮಂತ್ರಿಯವರು ವಿವರಿಸಿದ್ದಾರೆ. ಇನ್ನು ಚುನಾವಣಾ ಸಿದ್ಧತೆಗಳ ಬಗ್ಗೆ ಪೂರ್ಣ ಮಾಹಿತಿ ನೀಡಿರುವ ಮುಖ್ಯಮಂತ್ರಿಯವರು ಹಿಂದುಳಿದ ವರ್ಗಕ್ಕೆ ಸೇರಿದ ಗೊಲ್ಲ, ಕುರುಬ, ಪರಿಶಿಷ್ಟರ ಬೇಡ, ಲಂಬಾಣಿ ಸಮುದಾಯದವರಿಗೆ ಮಂತ್ರಿಮಂಡಲದಲ್ಲಿ ಅವಕಾಶ ಮಾಡಿಕೊಟ್ಟರೆ, ನಮಗೆ ರಾಜಕೀಯವಾಗಿ ಲಾಭವಾಗುತ್ತದೆ. ಸಂಪುಟದಲ್ಲಿ ಆರು ಸ್ಥಾನಗಳು ಖಾಲಿ ಇದ್ದು, ಅವುಗಳಲ್ಲಿ ಐದು ಸ್ಥಾನವನ್ನಾದರೂ ಭರ್ತಿ ಮಾಡಿ, ಈ ಸಮಾಜದವರಿಗೆ ಅವಕಾಶ ಮಾಡಿಕೊಡುತ್ತೇನೆ. ಅನುಮತಿ ನೀಡಿ ಎಂದು ಕೋರಿದ್ದಾರೆ.

ನಗರದಲ್ಲಿ ಐದು ಲಕ್ಷ ಸಹಾಯಧನ

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ವಹಿಸಲಾಗಿದೆ. ನಾನಾ ವಸತಿ ಯೋಜನೆಯಡಿ ಮನೆ ನಿರ್ಮಾಣ ಯೋಜನೆಯನ್ನು ಇಬ್ಬರೂ ಸೇರಿ ನಿರ್ಧಾರ ಕೈಗೊಳ್ಳಲಿದ್ದಾರೆ. ಕೊಡಗು ಜಿಲ್ಲೆಯಲ್ಲಿ 2019–20 ರಿಂದ ಇಲ್ಲಿಯವರೆಗೆ ನಾನಾ ವಸತಿ ಯೋಜನೆಯಡಿ 2852 ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಅದರಲ್ಲಿ 81 ಮನೆಗಳು ಪೂರ್ಣಗೊಂಡಿವೆ. 1008 ಮನೆಗಳು ಹಲವು ಹಂತದ ಕಾಮಗಾರಿಯಲ್ಲಿವೆ ಎಂದು ಹೇಳಿದರು.

ಮನೆ ನಿರ್ಮಾಣಕ್ಕೆ ನೀಡಲಾಗುವ ಸಹಾಯಧನ ಕಡಿಮೆ ಇರುವುದರಿಂದ 6–7 ವರ್ಷಗಳ ಹಿಂದೆ ಮಂಜೂರಾತಿಯಾಗಿದ್ದರೂ ಅವುಗಳ ನಿರ್ಮಾಣ ಸಾಧ್ಯವಾಗಿಲ್ಲ. ಮತ್ತೆ ಅಂತಹ ಫಲಾನುಭವಿಗಳಿಗೆ ಹೊಸ ಮನೆಗಳ ನಿರ್ಮಾಣ ಕಷ್ಟವಾಗುತ್ತಿದೆ. ಇದನ್ನು ಬಗೆಹರಿಸುವಂತೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ನೀಡಿದ ಸಲಹೆಗೆ ಮುಂದೆ ಮಂಜೂರಾತಿ ಆಗಿದ್ದು, ನಿರ್ಮಾಣಗೊಳ್ಳದಿರುವ ಮನೆಗಳ ನಿರ್ಮಾಣಕ್ಕೂ ಕ್ರಮ ಕೈಗೊಳ್ಳಲಾಗುವುದು ಎಂದು ಸದನಕ್ಕೆ ಸಚಿವರು ಭರವಸೆ ನೀಡಿದರು.

ಕೊರೊನಾ ಸೋಂಕು: ಮತ್ತಷ್ಟು ಆತಂಕ

ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿರುವ ಸಚಿವ ಸುಧಾಕರ್ ಅವರು ಚೀನಾದಿಂದ ಬಂದಿದ್ದ ವ್ಯಕ್ತಿಗೆ ಕೋವಿಡ್ ದೃಢಪಟ್ಟಿದೆ. ಆದರೆ ಆತನಿಗೆ ದೃಢಪಟ್ಟಿರುವ ಕೋವಿಡ್ ಯಾವ ತಳಿ ಎಂಬುದು ಇನ್ನೂ ಪತ್ತೆಯಾಗಿಲ್ಲ.

ಕೊರೊನಾ ಪಾಸಿಟಿವ್ ಬಂದ ತಕ್ಷಣ ಯಾವುದೇ ಆತಂಕ ಪಡುವ ಅಗತ್ಯವಿಲ್ಲ. ಸರ್ಕಾರ ಎಲ್ಲಾ ಸಿದ್ಧತೆ ಮಾಡಿಕೊಂಡಿದೆ ಎಂದು ಹೇಳಿದ್ದಾರೆ. ಸದ್ಯ ನಮ್ಮ ದೇಶದಲ್ಲಿ ಆತಂಕ ಪಡುವಂತ ಸ್ಥಿತಿ ಬಂದಿಲ್ಲಾ. ಚೀನಾಗೆ ಹೋಲಿಕೆ ಮಾಡೋದು ಬೇಡ. ಯಾರು ಆತಂಕ ಪಡುವ ಅಗತ್ಯವಿಲ್ಲ. ಮುಂಜಾಗ್ರತಾ ಕ್ರಮ ತೆಗೆದುಕೊಂಡರೆ ಸಾಕು. ನಮ್ಮ ವ್ಯಾಕ್ಸಿನೇಷನ್ ಚನ್ನಾಗಿದೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆಂದು ತಿಳಿಸಿದರು.

ನಮ್ಮ ದೇಶದಲ್ಲಿ ಎರಡುಪಟ್ಟು ನಾವು ಚೆನ್ನಾಗಿದೇವೆ. ಸ್ವಾಭಾವಿಕವಾಗಿ ನಮ್ಮಲ್ಲಿ ರೋಗನಿರೋಧಕ ಶಕ್ತಿ ಜಾಸ್ತಿ ಇದೆ. ಇವತ್ತು ಕಂದಾಯ ಸಚಿವರ ಜೊತೆ ಸಭೆ ನಡೆಸಿ ಯಾವ ರೀತಿ ಮಾರ್ಗಸೂಚಿ ಕೊಡಬೇಕು ಮತ್ತು ಆಸ್ಪತ್ರೆಯ ವ್ಯವಸ್ಥೆ ಬಗ್ಗೆ ಚರ್ಚೆ ಮಾಡುತ್ತೇವೆಂದರು. ತಜ್ಞರ ಜೊತೆ ಸಭೆಯ ಬಳಿಕ ಮಾರ್ಗಸೂಚಿ ಹೊರಡಿಸುವಂತೆ ಸಲಹೆ ಬಂದಿದ್ದೇ ಆದರೆ, ಸಿಎಂ ಜೊತೆ ಚರ್ಚೆ ಮಾಡಿ ಮಾರ್ಗ ಸೂಚಿ ಹೊರಡಿಸುತ್ತೇವೆ. ಚೀನಾದಿಂದ ಬಂದ ವ್ಯಕ್ತಿಗೆ ಕೊರೋನಾ ಪಾಸಿಟಿವ್ ಬಂದಿದೆ. ಆದರೆ, ಯಾವ ತಳಿ ಎಂಬುದು ಇನ್ನೂ ಪತ್ತೆಯಾಗಿಲ್ಲ. ಜೀನೋಮಿಕ್ ಸ್ವೀಕ್ವೆನ್ಸ್ ವರದಿಗಾಗಿ ಕಾಯುತ್ತಿದ್ದೇವೆ ಎಂದು ಹೇಳಿದರು.

ಕಳೆದ ಮೂರು ದಿನಗಳಲ್ಲಿ ವಿದೇಶಗಳಿಂದ ಬಂದ 9 ಮಂದಿಯಲ್ಲಿ ಕೊರೋನಾ ಸೋಂಕು ಕಾಣಿಸಿಕೊಂಡಿದೆ. 9 ಮಂದಿಯಲ್ಲಿ ಐವರನ್ನು ಹೋಂ ಕ್ವಾರಂಟೀನ್‌ಗೆ ಒಳಪಡಿಸಲಾಗಿದೆ. ಉಳಿದಂತೆ ನಾಲ್ವರಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಬಂಡೆ ಕುಸಿದು ಮೂವರು ಕಾರ್ಮಿಕರ ಸಾವು

ಗಾಳಿಗೆ ತೂರಲಾಗಿದೆ. ಸುಮಾರು 20ಕ್ಕೂ ಹೆಚ್ಚು ಅಡಿ ಆಳ ತೋಡಲಾಗಿದೆ. ಮೂರು ಎಕರೆಗಿಂತ ಹೆಚ್ಚಿನ ಪ್ರದೇಶದಲ್ಲಿ ಕ್ವಾರಿಯನ್ನು ಮಾಡಲಾಗುತ್ತಿದೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖೆ ಹಾಗೂ ಜಿಲ್ಲಾಡಳಿತದ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಸ್ಥಳದಲ್ಲಿದ್ದ ಗ್ರಾಮಸ್ಥರು ದೂರಿದ್ದಾರೆ. ಗ್ರಾಮದ ಸುತ್ತಮುತ್ತ ಅಕ್ರಮ ಹಾಗೂ ನಿಯಮಗಳನ್ನು ಪಾಲಿಸದೇ ನಡೆಯುತ್ತಿರುವ ಗಣಿಗಾರಿಕೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವಂತೆ ಗ್ರಾಮಸ್ಥರು ಒತ್ತಾಯಿಸಿದರು.

ಭೇಟಿ: ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣಿಕೊಪ್ಪ, ಗ್ರಾಮಾಂತರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಚಿಕ್ಕರಾಜಶೆಟ್ಟಿ, ಎಸ್‌ಐ ರಾಜೇಂದ್ರ, ತಹಸಿಲ್ದಾರ್ ಬಸವರಾಜು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಪನಿರ್ದೇಶಕ ನಂಜುಂಡಸ್ವಾಮಿ ಭೇಟಿ ನೀಡಿ ಪರಿಶೀಲಿಸಿದರು.

ಗ್ರಾಮಸ್ಥರಿಂದ ಪ್ರತಿಭಟನೆ: ನಗರದ ಹೊರವಲಯದ ಯಡಬೆಟ್ಟದ ಸಿಮ್ಸ್ ಬೋಧನಾ ಆಸ್ಪತ್ರೆಯ ಶವಾಗಾರದಲ್ಲಿ ಮೂವರು ನೌಕರರ ಮೃತದೇಹಗಳನ್ನು ಇಡಲಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಕಾರ್ಮಿಕರ ಕುಟುಂಬದವರು, ಗ್ರಾಮಸ್ಥರು ಭಾರೀ ಸಂಖ್ಯೆಯಲ್ಲಿ ಆಸ್ಪತ್ರೆ ಮುಂದೆ ಜಮಾಯಿಸಿದರು. ಮೃತಪಟ್ಟವರ ಕುಟುಂಬಗಳಿಗೆ ಗಣಿ ಮಾಲೀಕರು ಪರಿಹಾರ ನೀಡಬೇಕು ಎಂದು ಪ್ರತಿಭಟನೆ ನಡೆಸಿದರು. ಪೊಲೀಸರು ಮಧ್ಯಪ್ರವೇಶಿಸಿ ಪರಿಹಾರ ಕೊಡಿಸುವ ಭರವಸೆ ನೀಡಿದ ನಂತರ ಪ್ರತಿಭಟನೆ ವಾಪಸ್ ಪಡೆದರು.

ಪ್ರತಿಯೊಬ್ಬರೂ 'ಅನ್ನದಾತ' ರೈತರ ಗೌರವಿಸಿ

ಮೈಸೂರು ಜಿಲ್ಲಾಧಿಕಾರಿ ರಾಜೇಂದ್ರ ಸಲಹೆ

● ರೈತ ಸಮುದಾಯಕ್ಕೆ ಸಹಕಾರ, ಬೆಂಬಲ ನೀಡಲು ಮೈಸೂರು ಜಿಲ್ಲಾಡಳಿತ ಸದಾ ಸಿದ್ಧವಿದೆ ● ರೈತ ದಿನಾಚರಣೆ ಅಂಗವಾಗಿ ರೈತ-ವಿಜ್ಞಾನಿಗಳ ಸಂವಾದ ಉದ್ಘಾಟಿಸಿ, ಕೃಷಿ ಪಂಡಿತ ಬಹುಮಾನ ವಿಜೇತರಿಗೆ ಸನ್ಮಾನ



ಮೈಸೂರು, ಡಿ. 26(ಆರ್‌ಕೆಬಿ)– ಕಠಿಣ ಪರಿಶ್ರಮ ಮತ್ತು ನವೀನ ಆಲೋಚನೆಗಳಿದ್ದರೆ ರೈತರು ಹೊರ ಜಿಲ್ಲೆ, ರಾಜ್ಯಗಳನ್ನು ಅವಲಂಬಿಸದೆ ಸ್ವಂತ ಉದ್ಯಮಿಗಳಾಗಲು ಅವಕಾಶವಿದೆ. ರೈತ ಸಮುದಾಯಕ್ಕೆ ಸಹಕಾರ ಮತ್ತು ಬೆಂಬಲ ನೀಡಲು ಮೈಸೂರು ಜಿಲ್ಲಾಡಳಿತ ಸದಾ ಸಿದ್ಧವಿದೆ ಎಂದು ಮೈಸೂರು ಜಿಲ್ಲಾಧಿಕಾರಿ ಡಾ.ಕೆವಿ.ರಾಜೇಂದ್ರ ತಿಳಿಸಿದರು.

> ಇಲ್ಲಿ ರೈತರು ಮತ್ತು ವಿಜ್ಞಾನಿಗಳ ನಡುವಿನ ಸಂವಾದದ ಸಂಪೂರ್ಣ ನಡಾವಳಿಯನ್ನು ತಮಗೆ ಕಳುಹಿಸಿಕೊಡುವಂತೆ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಅವುಗಳನ್ನು ರೈತರಿಗೆ ಅನುಕೂಲವಾಗುವಂತೆ ಅತ್ಯಂತ ಸೂಕ್ತ ರೀತಿಯಲ್ಲಿ ಕೊಂಡೊಯ್ಯಬಹುದಾಗಿದೆ. ಜಿಲ್ಲಾಡಳಿತವು ರೈತರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಅವುಗಳ ಪರಿಹಾರಕ್ಕೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.
> - ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

ಮಾಜಿ ಪ್ರಧಾನಿ ಚೌಧರಿ ಚರಣ್‌ಸಿಂಗ್ ಜನ್ಮದಿನದ ಅಂಗವಾಗಿ ಮೈಸೂರು ತಾಲೂಕಿನ ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರ ಸಭಾಂಗಣದಲ್ಲಿ ಕೃಷಿ ಇಲಾಖೆ, ಮೈಸೂರು ಕೃಷಿ ತಂತ್ರಜ್ಞಾನ ಸಂಸ್ಥೆ (ಆತ್ಮ), ಮೈಸೂರು ಕೃಷಿಕ ಸಮಾಜ ಜಂಟಿಯಾಗಿ ರೈತ ದಿನಾಚರಣೆ ಅಂಗವಾಗಿ ಸೋಮವಾರ ಆಯೋಜಿಸಿದ್ದ 'ರೈತ ಮತ್ತು ವಿಜ್ಞಾನಿಗಳ ಸಂವಾದ' ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಕೃಷಿಯಲ್ಲಿನ ಲಾಭಗಳ ಹೊರತಾಗಿ, ರೈತರು ಮೌಲ್ಯವರ್ಧಿತ ಉತ್ಪನ್ನಗಳು ಮತ್ತು ಕೃಷಿಯೇತರ ಆದಾಯಗಳ ಮೇಲೆ ಗಮನ ಕೇಂದ್ರೀಕರಿಸಬೇಕು. ನಮಗೆ ಅನ್ನ ನೀಡುವ ರೈತರನ್ನು ಪ್ರತಿಯೊಬ್ಬರು ಗೌರವಿಸಬೇಕು. ಕಠಿಣ ಪರಿಶ್ರಮ ಮತ್ತು ನವೀನ ಆಲೋಚನೆಗಳಿದ್ದರೆ ರೈತರು ಸ್ವಂತ ಬಲದಿಂದ ಉದ್ಯಮಿಗಳಾಗಬಹುದು. ಕೃಷಿ ವಲಯದ ಆವಿಷ್ಕಾರಗಳು ಮತ್ತು ಬೆಳವಣಿಗೆಗೆ ರೈತರು ಮತ್ತು ಕೃಷಿ ವಿಜ್ಞಾನಿಗಳ ನಡುವಿನ ಜ್ಞಾನದ ಹಂಚಿಕೆ ಮತ್ತು ನಿರಂತರ ಸಂವಾದದ ಅಗತ್ಯವಿದೆ ಎಂದರು.

ರೈತರಲ್ಲಿ ಭಿನ್ನಾಭಿಪ್ರಾಯವಿಲ್ಲದೆ ಒಗ್ಗಟ್ಟಿನಿಂದಿದ್ದರೆ ರೈತರಿಗೆ ಮೀಸಲಾದ ವಿವಿಧ ಯೋಜನೆಗಳಡಿ ಎಲ್ಲಾ ಸರ್ಕಾರಿ ಸವಲತ್ತುಗಳನ್ನು ಪಡೆಯಲು ಸಹಾಯಕವಾಗುತ್ತದೆ. ಕೃಷಿ ವಲಯವು ವೆಚ್ಚವನ್ನು ಕಡಿತಗೊಳಿಸಲು ಮತ್ತು ಉತ್ತಮವಾಗಲು ಬೆಳೆಗಾರರು ನೇರವಾಗಿ ತೊಡಗಿಸಿಕೊಳ್ಳಬೇಕು. ಇದರಿಂದ ಹೊರ ಜಿಲ್ಲೆ ಮತ್ತು ಹೊರ ರಾಜ್ಯಗಳ ಜನರನ್ನು ಅವಲಂಬಿಸುವುದು ತಪ್ಪುತ್ತದೆ. ಜಿಲ್ಲಾಡಳಿತವು ರೈತರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಅವುಗಳ ಪರಿಹಾರಕ್ಕೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಭರವಸೆ ನೀಡಿದರು.

ಕಷ್ಟಪಟ್ಟು ಬೆಳೆ ಬೆಳೆದ ರೈತರು ಮತ್ತು ಅದನ್ನು ಹಣ ಕೊಟ್ಟು ಖರೀದಿಸುವ ಗ್ರಾಹಕರ ನಡುವೆ ಇರುವ ಮಧ್ಯಸ್ಥದಾರರಿಗೆ ಹೆಚ್ಚಿನ ಆದಾಯದ ಪಾಲು ಹೋಗುತ್ತಿದೆ. ಇದರಿಂದ ಕಷ್ಟಪಟ್ಟು ಬೆಳೆದ ರೈತರಿಗೆ ಲಾಭಾಂಶ ಕಡಿಮೆಯಾಗುತ್ತಿದೆ ಎಂದು ವಿಷಾದಿಸಿದ ಅವರು, ರೈತರು ತಮ್ಮ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವ ವ್ಯವಸ್ಥೆಯನ್ನು ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು.

ತರಕಾರಿ, ಹೂವು, ಹಣ್ಣುಗಳಿಗೂ ಶೈತ್ಯಾಗಾರ: ಇದೇ ವೇಳೆ ರೈತ ಮುಖಂಡ ಬನ್ನೂರು ನಾರಾಯಣ, ಹೂವು, ಹಣ್ಣುಗಳಿಗೆ ಶೈತ್ಯಾಗಾರ (ಕೋಲ್ಡ್ ಸ್ಟೋರೇಜ್) ಸ್ಥಾಪಿಸಲು ಕೋರಿದಾಗ ಅದಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿ, ದೊಡ್ಡ ಪ್ರಮಾಣದಲ್ಲಿ ಹಣ್ಣು, ತರಕಾರಿ, ಹೂವುಗಳು ಮತ್ತು ಇತರೆ ಬೇಗ ಕೊಳೆಯುವ ಕೃಷಿ ಬೆಳೆಗಳನ್ನು ಬೆಳೆಯುವ ಪ್ರದೇಶಗಳಲ್ಲಿ ಕೋಲ್ಡ್ ಸ್ಟೋರೇಜ್ ಸ್ಥಾಪಿಸಲು ಗಂಭೀರವಾಗಿ ಪರಿಗಣಿಸುವುದಾಗಿ ಭರವಸೆ ನೀಡಿದರು.

ಶಿವಮೊಗ್ಗ ಜಿಲ್ಲೆಯ ತಮ್ಮ ಜಮೀನಿನಲ್ಲಿ ಭತ್ತ ಮತ್ತು ಅಡಿಕೆ ಬೆಳೆಯುತ್ತಿದ್ದ ತಾವೂ ಕೂಡ ಕೃಷಿ ಕುಟುಂಬದವರು ಎಂದು ತಿಳಿಸಿದ ಡಾ.ರಾಜೇಂದ್ರ ಮೈಸೂರಿಗೆ ಬಂದ ನಂತರ ಕೃಷಿಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುವ ಉತ್ಸಾಹ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ರೈತರು ಅನುಭವದಿಂದ ವಿಜ್ಞಾನಿಗಳಾಗಿದ್ದರೆ, ಇತರರು ಅಧ್ಯಯನ ಮತ್ತು ಸಂಶೋಧನೆಯಿಂದ ಶೈಕ್ಷಣಿಕ ವಿಜ್ಞಾನಿಗಳಾಗಿದ್ದಾರೆ. ಅವರಿಬ್ಬರ ನಡುವಿನ ಈ ಸಂವಾದವು ಹೆಚ್ಚು ಫಲಪ್ರದವಾಗಿ ರೈತರಿಗೆ ಪ್ರಯೋಜನಕಾರಿಯಾಗಬೇಕು. ರೈತರು ಮತ್ತು ವಿಜ್ಞಾನಿಗಳ ನಡುವೆ ಕೃಷಿ ಜ್ಞಾನ ಮತ್ತು ಅಭ್ಯಾಸಗಳನ್ನು ಹಂಚಿಕೊಳ್ಳುವ ಅಗತ್ಯದಿಂದ ರೈತರಿಗೆ ಹೆಚ್ಚಿನ ಅನುಕೂಲವಾಗಬೇಕು. ಇದರಿಂದ ಕೃಷಿ ಸಮಸ್ಯೆಗಳ ಪರಿಹರಿಸಲು ನೆರವಾಗುತ್ತದೆ ಎಂದು ಹೇಳಿದರು.

'ಕೃಷಿ ಪಂಡಿತ' ವಿಜೇತರಿಗೆ ಸನ್ಮಾನ: ಇದೇ ಸಂದರ್ಭದಲ್ಲಿ 2021–22ನೇ ಸಾಲಿನಲ್ಲಿ ಆತ್ಮ ಯೋಜನೆಯಡಿ ರಾಜ್ಯ ಮಟ್ಟದಲ್ಲಿ ಕೃಷಿ ಪಂಡಿತ ಪ್ರಥಮ ಬಹುಮಾನ ಪಡೆದ ಹುಣಸೂರು ತಾಲೂಕಿನ ಗಾವಡಗೆರೆ ಮನುಗನಹಳ್ಳಿಯ ಬಿ.ವೀರಭದ್ರಪ್ಪ, ಕೃಷಿ ಪಂಡಿತ ತೃತೀಯ ಬಹುಮಾನ ಪಡೆದ ಮೈಸೂರು ತಾಲೂಕಿನ ಜಯಪುರ ಹೋಬಳಿ ಗೋಪಾಲಪುರದ ಸಿ.ದಿಲೀಪ್, ಉದಯೋನ್ಮುಖ ಪ್ರಶಸ್ತಿ ಪುರಸ್ಕೃತರಾದ ತಿ.ನರಸೀಪುರ ತಾಲೂಕಿನ ಸೋಸಲೆ ಹೋಬಳಿ ಚಿದರವಳ್ಳಿಯ ವೆಂಕಟೇಶ್, ನಂಜನಗೂಡು ತಾಲೂಕು ಚಿಕ್ಕಯ್ಯನಛತ್ರ ಹೋಬಳಿಯ ಹೊಸಕೋಟೆ ಸಿದ್ದಪ್ಪ, ಕೆ.ಆರ್.ನಗರ ತಾಲೂಕು ಹೆಬ್ಬಾಳು ಹೋಬಳಿಯ ಅಡಗನಹಳ್ಳಿ ನವೀನ್ ಅವರನ್ನು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸನ್ಮಾನಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಕೃಷಿ ಜಂಟಿ ನಿರ್ದೇಶಕ ಡಾ.ಬಿ.ಎಸ್. ಚಂದ್ರಶೇಖರ್, ತೋಟಗಾರಿಕೆ ಜಂಟಿ ನಿರ್ದೇಶಕ ರುದ್ರೇಶ್, ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿ ಕಿರಗಸೂರು ಶಂಕರ್, ಮೈಸೂರು ಎಂಸಿಸಿಐ ಅಧ್ಯಕ್ಷ ಕೆ.ಬಿ. ಲಿಂಗರಾಜು, ಕರ್ನಾಟಕ ರಾಜ್ಯ ಪ್ರದೇಶ ಕೃಷಿಕ ಸಮಾಜ ಮೈಸೂರು ಜಿಲ್ಲಾಧ್ಯಕ್ಷ ಕಲ್ಮಳ್ಳಿ ಶಿವಕುಮಾರ್ ರೈತಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ರೈತಮುಖಂಡ ವಿದ್ಯಾಸಾಗರ್ ಇನ್ನಿತರರು ಉಪಸ್ಥಿತರಿದ್ದರು.

ರೈತರ ನಾನಾ ಆಹಾರ ಉತ್ಪನ್ನಗಳ ಮಳಿಗೆಗಳ ವೀಕ್ಷಣೆ

ಮಹಿಳೆ ನೀಡಿದ ಬೆಲ್ಲ ಮಿಶ್ರಿತ ರಾಗಿ ಉಂಡೆಯ ರುಚಿ ಸವಿದ ಜಿಲ್ಲಾಧಿಕಾರಿ!



ಮೈಸೂರು, ಡಿ.26(ಆರ್‌ಕೆಬಿ)– ರೈತ ದಿನಾಚರಣೆ ಅಂಗವಾಗಿ ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಆಯೋಜಿಸಿದ್ದ 'ರೈತ ಮತ್ತು ಕೃಷಿ ವಿಜ್ಞಾನಿಗಳ ಸಂವಾದ' ಕಾರ್ಯಕ್ರಮದಲ್ಲಿ ರೈತರ ಕೃಷಿ ಉತ್ಪನ್ನಗಳ ಮಳಿಗೆಗಳನ್ನು ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ವೀಕ್ಷಿಸಿ, ರೈತರೊಂದಿಗೆ ಸಂವಾದ ನಡೆಸಿದರು.

ಪರ್ಷಿಯನ್ ನಿಂಬೆ ಹಣ್ಣಿನ ರಸದಿಂದ ಉತ್ಪಾದಿಸಲ್ಪಟ್ಟಿದ್ದ ನೆಲ ಒರೆಸುವ, ಕೈ ತೊಳೆಯಲು ಬಳಸುವ, ಶೌಚಾಲಯ ಸ್ವಚ್ಛಗೊಳಿಸಲು ಉಪಯೋಗಿಸುವ ವಿವಿಧ ದ್ರವ್ಯಗಳು, ಸಾವಯವ ಕೃಷಿಯಿಂದ ಬೆಳೆದ ರಾಗಿ ಮತ್ತು ವಿವಿಧ ಧಾನ್ಯಗಳಿಂದ ತಯಾರಿಸಿದ ರಾಗಿ ಉಂಡೆ, ಸಾವಯವ ಬೆಲ್ಲ, ಶುದ್ಧ ಜೇನುತುಪ್ಪ, ಖಾರದ ಪುಡಿ, ಆರೋಗ್ಯ ವರ್ಧಕ ಮಿಲ್ಲೆಟ್ ಪೌಡರ್‌ಗಳು ಸೇರಿದಂತೆ ಹಲವು ಮಳಿಗೆಗಳಲ್ಲಿ ಪ್ರದರ್ಶನಕ್ಕಿಟ್ಟಿದ್ದ ಉತ್ಪನ್ನಗಳ ಬಗ್ಗೆ ಬಹಳ ಆಸಕ್ತಿಯಿಂದಲೇ ಮಾಹಿತಿ ಪಡೆದುಕೊಂಡರು.

ಮಳಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದ ಅವರು, ಕೃಷಿ ಪದ್ಧತಿ ಹಾಗೂ ಕೃಷಿಯಲ್ಲಿ ಬಳಸುವ ಸಲಕರಣೆಗಳ ಬಗ್ಗೆ ವಿಚಾರಿಸಿದರು. 'ಸಿರಿಧಾನ್ಯಗಳ' ಪ್ರಯೋಜನಗಳ ಕುರಿತ ಮಾಹಿತಿ ಪಡೆದರು. ಅತೀ ಹೆಚ್ಚು ಪೋಷಕಾಂಶ ಹೊಂದಿರುವ ಸಾವಯವ ಉತ್ಪನ್ನಗಳ ಬೇಡಿಕೆ ಕುರಿತು ರೈತರೊಂದಿಗೆ ಚರ್ಚಿಸಿದರು. ಕ್ಯಾಲೊರಿಗಳ ವಿಷಯದಲ್ಲಿ ಪೌಷ್ಟಿಕಾಂಶದ ಅಂಶವನ್ನು ಕಂಡು ಹಿಡಿಯಲು ತೀವ್ರ ಆಸಕ್ತಿ ತೋರಿದರು. ಈ ವೇಳೆ ಮಹಿಳೆಯೊಬ್ಬರು ತಾವು ತಯಾರಿಸಿದ ಬಹು ಪೌಷ್ಟಿಕಾಂಶಯುಕ್ತ ರಾಗಿ ಉಂಡೆಯನ್ನು ತಿಂದು ರುಚಿ ಸವಿದರು.

ಪ್ರದರ್ಶನದಲ್ಲಿರುವ ಎಲ್ಲಾ ಉತ್ಪನ್ನಗಳು ಮತ್ತು ಪ್ಯಾಕೇಟ್‌ಗಳತ್ತ ಗಮನ ಹರಿಸಿದ ಜಿಲ್ಲಾಧಿಕಾರಿಗಳು, ರಾಗಿ ಪೌಡರಿನ ಉಂಡೆ ಉತ್ಪನ್ನವನ್ನು ಪರಿಶೀಲಿಸಿ, ಅದನ್ನು ಪ್ಯಾಕಿಂಗ್ ಮಾಡಿ ಮಾರಾಟ ಮಾಡುವ ನಿಟ್ಟಿನಲ್ಲಿ ರೈತ ಉತ್ಪಾದಕರಿಗೆ ನೆರವಾಗುವಂತೆ ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ. ಬಿ.ಎಸ್. ಚಂದ್ರಶೇಖರ್ ಅವರಿಗೆ ಸೂಚಿಸಿದರು.

ಹೀಗೆ ಅಧಿಕೃತ ಪ್ಯಾಕಿಂಗ್ ಮಾಡಿ ಮಾರಾಟ ಮಾಡುವುದರಿಂದ ವಿದ್ಯಾವಂತ ವರ್ಗದಲ್ಲಿ ಚೆನ್ನಾಗಿ ಮಾರಾಟವಾಗುತ್ತದೆ. ಜೊತೆಗೆ ರೈತರಿಗೂ ಅದರಿಂದ ಆರ್ಥಿಕವಾಗಿಯೂ ಪ್ರಯೋಜನವಾಗಲಿ ಎಂದು ಮಳಿಗೆದಾರರಿಗೆ ಜಿಲ್ಲಾಧಿಕಾರಿ ಸಲಹೆ ನೀಡಿದರು.

ಮಾಸಿಕ ಗೌರವಧನ ಹೆಚ್ಚಳವೂ ಸೇರಿದಂತೆ ನಾನಾ ಬೇಡಿಕೆ ಈಡೇರಿಕೆಗೆ

ಮೈಸೂರಲ್ಲಿ ಆಶಾ ಕಾರ್ಯಕರ್ತರ ಪ್ರತಿಭಟನೆ



ಮೈಸೂರು,ಡಿ.26(ಎಂಟಿವೈ)– ಆರ್‌ಸಿಹೆಚ್ ಪೋರ್ಟಲ್ ಮೂಲಕ ಪ್ರೋತ್ಸಾಹಧನ ನೀಡುವುದನ್ನು ರದ್ದುಮಾಡಿ, ಮಾಸಿಕ ಗೌರವಧನ ಹೆಚ್ಚಳ ಮಾಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಆಶಾ ಕಾರ್ಯಕರ್ತೆಯರು ಭಾರೀ ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ್ದ ನೂರಾರು ಆಶಾ ಕಾರ್ಯಕರ್ತೆಯರು ಪಾಲ್ಗೊಂಡು ಹಕ್ಕೊತ್ತಾಯ ಮಾಡಿದರು.

ಆಶಾ ಕಾರ್ಯಕರ್ತೆಯರು ಕೋವಿಡ್–19 ವೇಳೆ ಯೋಧರಂತೆ ಸೇವೆ ಸಲ್ಲಿಸಿ ಜನಸಾಮಾನ್ಯರು ಸೇರಿದಂತೆ ಕೇಂದ್ರ ಮತ್ತು ರಾಜ್ಯ ಆರೋಗ್ಯ ಇಲಾಖೆ ಶ್ಲಾಘನೆಗೆ ಒಳಗಾಗಿದ್ದರು. ನಮ್ಮ ಸೇವೆಗೆ ವಿಶ್ವ ಆರೋಗ್ಯ ಸಂಸ್ಥೆ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳು ಮೆಚ್ಚುಗೆ ವ್ಯಕ್ತಪಡಿಸಿವೆ. ಕಳೆದ 13 ವರ್ಷಗಳಿಂದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ತಾಯಿ–ಮಗುವಿನ ಆರೈಕೆ, ಆರೋಗ್ಯದ ಬಗ್ಗೆ ಜನಸಾಮಾನ್ಯರಿಗೆ ಅರಿವು ನೀಡುವುದು, ಗ್ರಾಮ ನೈರ್ಮಲ್ಯ, ವಿವಿಧ ಸರ್ವೆಗಳನ್ನು ಕಾಲಕಾಲಕ್ಕೆ ಮಾಡುವುದು ಸೇರಿದಂತೆ ಸೇವೆ ಕಲ್ಪಿಸುವುದಕ್ಕೆ ಇಲಾಖೆ ಮತ್ತು ಜನತೆಯ ಕೊಂಡಿಯಾಗಿ ನಿಷ್ಠೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ, ಇವರ ಸೇವೆಗೆ ನಿಗದಿಯಾಗಿರುವ ಕೇಂದ್ರದ ಪ್ರೋತ್ಸಾಹಧನ ತಲುಪಿಲ್ಲ ಈ ಬಗ್ಗೆ ರಾಜ್ಯದಾದ್ಯಂತ ಪ್ರತಿಭಟನೆ ನಡೆಸುತ್ತಿದ್ದರೂ ಸಮಸ್ಯೆ ಬಗೆಹರಿದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆರ್‌ಸಿಹೆಚ್ ಪೋರ್ಟಲ್‌ನಲ್ಲಿ 2022ರ ಡಿಸೆಂಬರ್ ನಂತರ ಪ್ರೋತ್ಸಾಹಧನ ಪಾವತಿ ನಿಲ್ಲಿಸಬೇಕು. ರಾಜ್ಯ ಸರ್ಕಾರ ಎಲ್ಲಾ ಗೌರವಧನಗಳನ್ನು ಒಟ್ಟುಗೂಡಿಸಿ ಮಾಸಿಕ 12 ಸಾವಿರ ರೂ ಪಾವತಿಸಬೇಕು. ಆರ್‌ಸಿಎಚ್ ಪೋರ್ಟಲ್‌ನ ವಿವಿಧ ಸಮಸ್ಯೆಗಳ ಕಾರಣಗಳಿಂದ ಕಳೆದ 2 ವರ್ಷಗಳಿಂದ ಕಾರ್ಯಕರ್ತೆಯರಿಗೆ ಆಗಿರುವ ಆರ್ಥಿಕ ನಷ್ಟ ತುಂಬಿಕೊಡಲು ಹಿಂಬಾಕಿ ರೂಪದಲ್ಲಿ ನಷ್ಟ ಪರಿಹಾರ ನೀಡಬೇಕು. ನಗರ ಆಶಾ ಕಾರ್ಯಕರ್ತೆಯರ ಗೌರವಧನ, ಅವರ ಹೆಚ್ಚುವರಿ ಕೆಲಸ ಮತ್ತು ನಗರ ಜೀವನದ ದುಬಾರಿ ಖರ್ಚು ವೆಚ್ಚಗಳಿಗೆ ಅನುಗುಣವಾಗಿಲ್ಲ. ಹೀಗಾಗಿ ಅವರ ಗೌರವಧನವನ್ನು ಹೆಚ್ಚಿಸಬೇಕು. ಸೇವಾ ನಿವೃತ್ತಿ, ಸೇವಾ ಅವಧಿಯಲ್ಲಿ ಸ್ವಯಂ ನಿವೃತ್ತಿ ಪಡೆಯುವ ಕಾರ್ಯಕರ್ತೆಯರಿಗೆ ಈಗಿರುವ 20 ಸಾವಿರ ಇಡುಗಂಟನ್ನು ಪಶ್ಚಿಮ ಬಂಗಾಳ ಮಾದರಿಯಲ್ಲಿ 3 ಲಕ್ಷಕ್ಕೆ ಹೆಚ್ಚಿಸಬೇಕು. ಅನಾರೋಗ್ಯ ಭತ್ಯೆ ನೀಡಬೇಕು. ಆಶಾ ಸುಗಮಕಾರರನ್ನು ಆಶಾದಿಂದ ಬೇರ್ಪಡಿಸಿ ಅವರ ಹುದ್ದೆಗೆ ತಕ್ಕಂತೆ ಮಾಸಿಕ ಗೌರವಧನ ಮತ್ತು ಪ್ರಯಾಣ ಭತ್ಯೆ ನೀಡಬೇಕು. ಆಶಾ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಬೇಕೆಂದು ಒತ್ತಾಯಿಸಿದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಎಲ್.ನಾಗೇಂದ್ರ ಭೂಮಿಪೂಜೆ



ಮೈಸೂರು, ಡಿ.26(ಆರ್‌ಕೆ)– ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಹೆಬ್ಬಾಳಲ್ಲಿ 3.5 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಲ್. ನಾಗೇಂದ್ರ ಇಂದು ಬೆಳಗ್ಗೆ ಗುದ್ದಲಿ ಪೂಜೆ ನೆರವೇರಿಸಿದರು. ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಬಳಿಯಿಂದ ಮಹದೇಶ್ವರ ಬಡಾವಣೆ, ಕುಂಬಾರಕೊಪ್ಪಲು, ಹೆಬ್ಬಾಳು ಮುಖ್ಯರಸ್ತೆ ಅಡ್ಡ ರಸ್ತೆಗಳ ಅಭಿವೃದ್ಧಿಪಡಿಸಲು ಲೋಕೋಪಯೋಗಿ ಇಲಾಖೆಯಿಂದ 46 ಲಕ್ಷ ರೂ. ಕಾಮಗಾರಿ, 2ನೇ ವಾರ್ಡ್ ವ್ಯಾಪ್ತಿಯ ವಿಜಯನಗರ ವಾಟರ್ ಟ್ಯಾಂಕ್ ಬಳಿ ಮಹಾಜನ ಬಡಾವಣೆ ನಿರ್ಮಿಸಲುದ್ದೇಶಿಸಿರುವ ಮಹಾನಗರ ಪಾಲಿಕೆ ವಲಯ ಕಚೇರಿ–5ರ ಕಚೇರಿ ಕಟ್ಟಡ ನಿರ್ಮಿಸುವ 2 ಕೋಟಿ ರೂ. ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಲೋಕನಾಯಕ ನಗರದ ಸಂಜೀವಿನಿ ಸರ್ಕಲ್‌ನಿಂದ ಉತ್ತರ ಭಾಗದ ರಿಂಗ್ ರಸ್ತೆವರೆಗೆ ರಸ್ತೆ ಅಗಲೀಕರಣ ಮತ್ತು ಡಾಂಬರೀಕರಣ ಮಾಡುವ 1.06 ಕೋಟಿ ರೂ, ಕಾಮಗಾರಿಗೂ ಶಾಸಕರು ಭೂಮಿ ಪೂಜೆ ನೆರವೇರಿಸಿದರು.

ಮೇಯರ್ ಶಿವಕುಮಾರ್, ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ಪಾಲಿಕೆ ಸದಸ್ಯರಾದ ಕೆವಿ. ಶ್ರೀಧರ್, ಪ್ರೇಮಾ ಶಂಕರೇಗೌಡ, ಲಕ್ಷ್ಮಿ ಶಿವಣ್ಣ, ಉಷಾ ಕುಮಾರ್, ರಮೇಶ್, ಎನ್.ಯು. ಸುಬ್ಬಯ್ಯ, ಪೈಶ್ರೀನಿವಾಸ್, ಅಭಿವೃದ್ಧಿ ಅಧಿಕಾರಿ ಮನುಗೌಡ, ಲೋಕೋಪಯೋಗಿ ಇಲಾಖೆ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ನಾಗರಾಜ್, ಅಸಿಸ್ಟೆಂಟ್ ಇಂಜಿನಿಯರ್ ದೀಪಿಕಾ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ಹೊಸ ವರ್ಷಾಚರಣೆ ; ಅಬ್ಬರದ ಡಿಜೆ ಸಂಗೀತ, ಪಟಾಕಿ ಸಿಡಿಸಲು ಅವಕಾಶವಿಲ್ಲ

ಸರ್ಕಾರದ ಮಾರ್ಗಸೂಚಿ ಬಳಿಕ ಎಲ್ಲಾ ನಿಯಮಾವಳಿಗಳು ಅಂತಿಮ ; ನಗರ ಪೊಲೀಸ್ ಆಯುಕ್ತ ರಮೇಶ್ ಭಾನೋತ್ ವಿವರಣೆ



ಮೈಸೂರು,ಡಿ.26(ಪಿಎಂ)– ಹೊಸ ವರ್ಷಾಚರಣೆಯಲ್ಲಿ ಅಬ್ಬರದ ಡಿಜೆ ಸಂಗೀತ ಮತ್ತು ಪಟಾಕಿ ಸಿಡಿಸಲು ಅನುಮತಿ ನೀಡುತ್ತಿಲ್ಲ. ಸರ್ಕಾರದ ಮಾರ್ಗಸೂಚಿ ನಿರೀಕ್ಷೆಯಲ್ಲಿದ್ದು, ಆ ಬಳಿಕ ಎಲ್ಲಾ ನಿಯಮಾವಳಿಗಳು ಅಂತಿಮಗೊಳ್ಳಲಿವೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಭಾನೋತ್ ತಿಳಿಸಿದರು.

ಮೈಸೂರಿನ ಖಾಸಗಿ ಹೋಟೆಲ್ ಆವರಣದಲ್ಲಿ ಸೋಮವಾರ ಹೊಸ ವರ್ಷಾಚರಣೆ ಕುರಿತಂತೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಈ ಸಂಬಂಧ ಸರ್ಕಾರದ ಮಾರ್ಗಸೂಚಿಯ ನಿರೀಕ್ಷೆಯಲ್ಲಿದ್ದು, ಇಂದು ಅಥವಾ ನಾಳೆ ಬರಲಿದೆ. ಅದಕ್ಕೆ ಅನುಗುಣವಾಗಿ ನಾವು ಈಗಾಗಲೇ ಸಿದ್ಧಪಡಿಸಿರುವ ಮಾರ್ಗಸೂಚಿಗಳನ್ನು ಅಗತ್ಯವಿದ್ದರೆ ಮಾರ್ಪಡಿಸಿ ಪ್ರಕಟಿಸಲಾಗುವುದು ಎಂದು ಹೇಳಿದರು.

ಪ್ರತಿ ವರ್ಷದಂತೆ ರಾತ್ರಿ 1 ಗಂಟೆಯವರೆಗೆ ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಹೋಟೆಲ್ ವ್ಯವಹಾರಕ್ಕೆ ಅವಕಾಶ ನೀಡುವಂತೆ ಹೋಟೆಲ್ ಮಾಲೀಕರು ಕೋರಿದ್ದಾರೆ. ಅದನ್ನು ಪರಿಗಣಿಸಿದ್ದೇವೆ. ಆದರೆ ಸರ್ಕಾರದ ಮಾರ್ಗ ಸೂಚಿ ಬಂದ ನಂತರವೇ ಈ ಬಗ್ಗೆ ನಾವು ಅಂತಿಮ ನಿರ್ಧಾರ ಕೈಗೊಳ್ಳಲು ಸಾಧ್ಯ. ಜೊತೆಗೆ ನಿರ್ಬಂಧಿತ ಪ್ರದೇಶಗಳನ್ನು ಘೋಷಣೆ ಮಾಡಬೇಕಿದೆ ಎಂದರು.

ಪಾರ್ಟಿ ನಡೆಸಲು ಕಡ್ಡಾಯವಾಗಿ ಅನುಮತಿ ಪಡೆಯಲೇಬೇಕು. ಈಗಾಗಲೇ ನಾವು ಈ ಸಂಬಂಧ ನಿಯಮಾವಳಿಗಳನ್ನು ಸಿದ್ಧಪಡಿಸಿದ್ದೇವೆ. ಅದನ್ನು ಶೀಘ್ರದಲ್ಲಿ ಪ್ರಕಟಣೆ ಮಾಡಲಿದ್ದೇವೆ. ಖಂಡಿತವಾಗಿಯೂ ನಾವು ಡಿಜೆ ಸಂಗೀತಕ್ಕೆ ಅನುಮತಿ ನೀಡುತ್ತಿಲ್ಲ. ಹೋಟೆಲ್ ಸೇರಿದಂತೆ ಎಲ್ಲಿಯಾದರೂ ಸರಿಯೇ, ಸಾಧಾರಣ ಸಂಗೀತ ಬಳಸಿಕೊಳ್ಳಲು ಅವಕಾಶವಿದೆ. ಇದಕ್ಕೂ ಕೆಲ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ವ್ಹೀಲಿಂಗ್, ಮೋಟಾರ್ ಬೈಕ್‌ನ ಅತಿಯಾದ ಸದ್ದು ಸೇರಿದಂತೆ ಏನೇನು ಮಾಡಬಾರದು ಎಂಬುದರ ಪಟ್ಟಿ ಸಿದ್ಧಪಡಿಸಿದ್ದೇವೆ. ಇದಕ್ಕೆ ಪೂರಕವಾಗಿ ಬಂದೋಬಸ್ತ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಪಟಾಕಿ ಸಿಡಿಸಲು ಅನುಮತಿ ನೀಡುತ್ತಿಲ್ಲ ಎಂದು ಪುನರುಚ್ಚರಿಸಿದರು.

ಔಟ್‌ಡೋರ್ ಪಾರ್ಟಿ ನಡೆಸಲು ಅನುಮತಿ ಇದೆಯೇ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಈ ಸಂಬಂಧ ಈವರೆಗೆ ಯಾರೂ ಅನುಮತಿ ಕೋರಿಲ್ಲ. ಹಾಗಾಗಿ ಈ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಹೇಳಿದರು.

ಹೋಟೆಲ್ ಮಾಲೀಕರ ಮನವಿ ಬಗ್ಗೆ ಪ್ರತಿಕ್ರಿಯಿಸಿ, ಸಾಧಾರಣ ಸಂಗೀತ ಹಾಕಿಕೊಂಡು ಪಾರ್ಟಿ ಮಾಡಬಹುದು. ಮದ್ಯ ಪೂರೈಕೆ ಮಾಡಿದರೆ ಅಬಕಾರಿ ಇಲಾಖೆಯಿಂದ ಪ್ರತ್ಯೇಕ ಅನುಮತಿ ಪಡೆಯಬೇಕು. ಜೊತೆಗೆ ಸಮಯದ ಮಿತಿ ಇರುತ್ತದೆ. ಒಟ್ಟಾರೆ ಹೊಸ ವರ್ಷಾಚರಣೆ ಸಂಬಂಧ ಸರ್ಕಾರದ ಮಾರ್ಗಸೂಚಿಗೆ ಅನುಗುಣವಾಗಿ ನಗರ ಪೊಲೀಸ್ ನಿಯಮಾವಳಿಗಳು ಪ್ರಕಟಗೊಳ್ಳಲಿವೆ ಎಂದು ತಿಳಿಸಿದರು.



ಮತ್ತೆ ಐವರು ರೌಡಿಶೀಟರ್ ಗಡಿಪಾರು ಸಂಬಂಧ ಪರಿಶೀಲನೆ

ಕಿರಣ್‌ಗೌಡ ರೌಡಿಶೀಟರ್ ಅಲ್ಲ

ಮೈಸೂರು,ಡಿ.26(ಪಿಎಂ)– ಈಗಾಗಲೇ ಇಬ್ಬರು ರೌಡಿಶೀಟರ್‌ಗಳನ್ನು ಗಡಿಪಾರು ಮಾಡಿದ್ದು, ಇನ್ನು ಐವರ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಭಾನೋತ್ ತಿಳಿಸಿದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮನೆಗೆ ಮುತ್ತಿಗೆ ಯತ್ನದ ನೇತೃತ್ವ ವಹಿಸಿದ್ದ ಬಿಜೆಪಿ ನಗರ ಯುವ ಮೋರ್ಚಾ ಅಧ್ಯಕ್ಷ ಕಿರಣ್‌ಗೌಡ ವಿರುದ್ಧ ಕಾಂಗ್ರೆಸ್‌ನಿಂದ ಪೊಲೀಸ್ ಉಪ ಆಯುಕ್ತರಿಗೆ ದೂರು ಸಲ್ಲಿಸಲಾಗಿದೆ. ಜೊತೆಗೆ ಕಿರಣ್‌ಗೌಡ ರೌಡಿಶೀಟರ್ ಎಂಬ ಆರೋಪವೂ ಇದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ದೂರು ಸ್ವೀಕರಿಸಿ ವಿಚಾರಣೆ ನಡೆಸಲಾಗುತ್ತಿದೆ. ಜೊತೆಗೆ ಮುತ್ತಿಗೆಗೆ ಅವಕಾಶ ನೀಡದೇ ಮುನ್ನೆಚ್ಚರಿಕಾ ಕ್ರಮವಾಗಿ ಎಲ್ಲರನ್ನು ಬಂಧಿಸಲಾಗಿತ್ತು ಎಂದು ತಿಳಿಸಿದರು. ಕಿರಣ್‌ಗೌಡ ರೌಡಿಶೀಟರ್ ಎಂಬ ಆರೋಪ ಸಂಬಂಧ ಪರಿಶೀಲಿಸಿದ್ದೇನೆ. ಅವರ ವಿರುದ್ಧ ಯಾವುದೇ ರೌಡಿಶೀಟ್ ಇಲ್ಲ. ಆದರೆ ಅವರ ವಿರುದ್ಧ ಪ್ರತಿಭಟನೆಗಳ ಸಂಬಂಧ ಕೆಲ ಪ್ರಕರಣಗಳು ದಾಖಲಾಗಿವೆ. ಈ ಸಂಬಂಧ ಕಾನೂನು ಪ್ರಕಾರ ಕ್ರಮ ವಹಿಸಲಿದ್ದೇವೆ ಎಂದು ಹೇಳಿದರು.

ಮೈಸೂರು ಮಿತ್ರ

ವಕೀಲರು ಕೇಳುವ ಪ್ರಶ್ನೆಗಳು ಪೊಲೀಸರಿಗೆ ಪ್ರಕರಣ ಭೇದಿಸಲು ಸಹಕಾರಿ

● ನಗರ ಪೊಲೀಸ್ ಆಯುಕ್ತ ರಮೇಶ್ ಭಾನೋತ್ ಅಭಿಮತ ● ಲಾಗೈಡ್ ಕ್ಯಾಲೆಂಡರ್, ಡೈರಿ ಬಿಡುಗಡೆ



ಮೈಸೂರಿನ ಖಾಸಗಿ ಹೋಟೆಲ್ ಆವರಣದಲ್ಲಿ ಭಾನುವಾರ ಲಾಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆ ವತಿಯಿಂದ ಹೊರತಂದಿರುವ 2023ರ ದಿನದರ್ಶಿಕೆ ಮತ್ತು ಡೈರಿಯನ್ನು ನಗರ ಪೊಲೀಸ್ ಆಯುಕ್ತ ರಮೇಶ್ ಭಾನೋತ್ (ಎಡದಿಂದ 5ನೇಯವರು) ಬಿಡುಗಡೆ ಮಾಡಿದರು.

ಮೈಸೂರು,ಡಿ.26(ಪಿಎಂ)– ಯಾವುದೇ ತನಿಖೆಗೆ ಸಂಬಂಧಿಸಿದಂತೆ ಗರಿಷ್ಠ ಪ್ರಮಾಣದ ಕಲಿಕೆಯು ಪೊಲೀಸರಿಗೆ ವಕೀಲರಿಂದ ಲಭ್ಯವಾಗಲಿದೆ. ಪ್ರಕರಣ ಭೇದಿಸಲು ವಕೀಲರು ಕೇಳುವ ಪ್ರಶ್ನೆಗಳು ಪೊಲೀಸರಿಗೆ ಸಹಕಾರಿ ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಭಾನೋತ್ ಅಭಿಪ್ರಾಯಪಟ್ಟರು.

ಮೈಸೂರಿನ ಹೋಟೆಲ್ ಏರ್‌ಲೈನ್ಸ್ ಆವರಣದಲ್ಲಿ ಲಾಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಲಾಗೈಡ್ ಸಂಸ್ಥೆಯ 2023ರ ಕ್ಯಾಲೆಂಡರ್ (ದಿನದರ್ಶಿಕೆ) ಹಾಗೂ ಡೈರಿ (ವಕೀಲರಿಗೆ ಅಗತ್ಯ ಮಾಹಿತಿ ಹೊಂದಿರುವ) ಬಿಡುಗಡೆ ಸಮಾರಂಭದಲ್ಲಿ ಕ್ಯಾಲೆಂಡರ್, ಡೈರಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ನ್ಯಾಷನಲ್ ಪೊಲೀಸ್ ಅಕಾಡೆಮಿ, ಕರ್ನಾಟಕ ಪೊಲೀಸ್ ಅಕಾಡೆಮಿಯ ತರಬೇತಿಯಲ್ಲಿ ಪೊಲೀಸರು ಸಾಕಷ್ಟು ಕಲಿಯುತ್ತಾರೆ. ಜೊತೆಗೆ ಪ್ರಾಯೋಗಿಕವಾಗಿ ಕರ್ತವ್ಯದ ಹಂತದಲ್ಲೂ ಕಲಿಯುವುದಿದೆ. ಇದಕ್ಕೂ ಮಿಗಿಲಾಗಿ ಕೋರ್ಟ್ ಹಾಲ್‌ನಲ್ಲಿ ಪೊಲೀಸರು ಹೆಚ್ಚು ಕಲಿಯುವುದಿದೆ. ವಕೀಲರು ಕೇಳುವ ಪ್ರಶ್ನೆಗಳಿಂದ ಪೊಲೀಸರು ಗರಿಷ್ಠ ಪ್ರಮಾಣದಲ್ಲಿ ಕಲಿಯಬಹುದು. ನಾನು ಎಎಸ್‌ಪಿಯಾಗಿದ್ದಾಗ ಸುಮಾರು ಪ್ರಕರಣಗಳ ತನಿಖೆ ಮಾಡಿದ್ದೆ. ಡಿಫೆನ್ಸ್ ಅಡ್ವೋಕೇಟ್‌ಗಳು ಕೇಳುವ ಪ್ರಶ್ನೆಗಳಿಂದ ನಾನು ಸಾಕಷ್ಟು ಕಲಿತಿದ್ದೇನೆ. ಅವರು ಪ್ರಶ್ನೆಗಳನ್ನು ಕೇಳಿದಾಗ, ತನಿಖೆ ಹಂತದಲ್ಲಿ ಈ ದೃಷ್ಟಿಕೋನದಲ್ಲಿ ಯೋಚನೆ ಮಾಡಿಲ್ಲದ ಬಗ್ಗೆ ಮನದಟ್ಟು ಆದ ಎಷ್ಟೋ ಉದಾಹರಣೆಗಳಿವೆ ಎಂದು ತಿಳಿಸಿದರು.

ವಕೀಲರ ಪ್ರಶ್ನೆಗಳು ತನಿಖೆ ಹಂತದಲ್ಲಿ ಮಾಡಿರುವ ಲೋಪಗಳ ಬಗ್ಗೆ ಪೊಲೀಸರಿಗೆ ಮನದಟ್ಟು ಮಾಡಿಕೊಡಲಿವೆ. ಈ ಅನುಭವ ನನಗೇ ಖುದ್ದು ಆಗಿದೆ. ನಾನು 200ಕ್ಕೂ ಹೆಚ್ಚು ಪ್ರಕರಣಗಳನ್ನು ತನಿಖೆ ಮಾಡಿದ್ದೇನೆ. ಬಹುತೇಕ ಎಲ್ಲಾ ಪೂರ್ಣಗೊಂಡಿದ್ದು, ಇನ್ನು 8ರಿಂದ 10 ಬಾಕಿ ಉಳಿದಿವೆ. ಪ್ರತಿ ಪ್ರಕರಣದಲ್ಲಿ ಕಲಿಯುವುದು ಸಾಕಷ್ಟು ಇರುತ್ತದೆ. ಇತ್ತೀಚೆಗೆ ಜೂನಿಯರ್ ಅಡ್ವೋಕೇಟ್‌ಗಳು ಸ್ಮಾರ್ಟ್ ಆಗುತ್ತಿದ್ದಾರೆ. ಇವರು ಪ್ರಕರಣದ ತನಿಖೆಯ ನಕಾರಾತ್ಮಕ ಅಂಶಗಳನ್ನು ಉಲ್ಲೇಖಿಸಿ ಪ್ರಶ್ನಿಸುವ ಚತುರತೆ ಪ್ರದರ್ಶಿಸುತ್ತಿದ್ದಾರೆ ಎಂದು ಹೇಳಿದರು.

ಪ್ರವಾಸಿಗರಿಗೆ ಉತ್ತಮ ವಾತಾವರಣ ಸೃಷ್ಟಿ: ಮೈಸೂರಿಗೆ ನಾನು ಬಂದ ನಂತರದಲ್ಲಿ ಇಲ್ಲಿ ಕೆಲ ಬದಲಾವಣೆ ಮೂಲಕ ಶಿಸ್ತು ತರಲು ಕ್ರಮ ವಹಿಸಿದ್ದು, ಅಪರಾಧ ನಿಯಂತ್ರಣಕ್ಕೆ ಮುಂದಾಗಲಾಗಿದೆ. ಮೈಸೂರು ರಾಜ್ಯದ ಸಾಂಸ್ಕೃತಿಕ ರಾಜಧಾನಿ. ಇಲ್ಲಿಗೆ ಗರಿಷ್ಠ ಪ್ರಮಾಣದಲ್ಲಿ ಪ್ರವಾಸಿಗರು ಬರುತ್ತಾರೆ. ಅವರಿಗೆ ಒಳ್ಳೆಯ ವಾತಾವರಣ ಕಲ್ಪಿಸುವ ಉದ್ದೇಶ ಹೊಂದಿದ್ದೇನೆ. ಆ ಮೂಲಕ ಮೈಸೂರು ಇನ್ನು ಹೆಚ್ಚು ಪ್ರವಾಸಿಗರ ಸ್ನೇಹಿಯಾಗಬೇಕು. ಈ ಹಿನ್ನೆಲೆಯಲ್ಲಿ ಹಲವು ಕಾರ್ಯಕ್ರಮ ಕೈಗೆತ್ತಿಕೊಂಡಿದ್ದು, ಇದಕ್ಕೆ ತಮ್ಮೆಲ್ಲರ ಸಹಕಾರ ಅಗತ್ಯ ಎಂದರು.

ಲೀಗಲ್ ಆಗಿದ್ದರೆ ಖಂಡಿತ ಸ್ಪಂದಿಸುತ್ತೇನೆ: ತಾವು ಯಾರಾದರೂ ಏನಾದರೂ ಕೇಳಿದಾಗ, ಲೀಗಲ್ (ಕಾನೂನುಬದ್ಧ) ಆಗಿರುವುದನ್ನು ಅವಲೋಕಿಸಬೇಕಾದ ಹಿನ್ನೆಲೆಯಲ್ಲಿ ಅದನ್ನು ಕಾರ್ಯಗತಗೊಳಿಸಲು ತಡ ಆಗಬಹುದು. ಇದನ್ನು ಹೇಳಲು ಕಾರಣ, ನಾನು ಮೈಸೂರಿಗೆ ಬಂದ ಪ್ರಾರಂಭದಲ್ಲಿ, ತುರ್ತು ಕ್ರಮ ವಹಿಸದೇ ಆಯುಕ್ತರು ಉಡಾಫೆಯಾಗಿ ಮಾತನಾಡಿದ್ದಾರೆ ಎಂದು ಒಬ್ಬರು ಆರೋಪಿಸಿದರು. ನಾನು ಖಂಡಿತ ಉಡಾಫೆ ಮಾತು ಆಡುವುದಿಲ್ಲ. ಲೀಗಲ್ ಆಗಿದ್ದರೆ 100ಕ್ಕೆ 100 ನಾನು ಮಾಡುತ್ತೇನೆ. ಹಾಗಾಗಿ ತಾಳ್ಮೆ ಮತ್ತು ನಂಬಿಕೆ ಇರಬೇಕು. ಯಾವುದೇ ವಿಚಾರದಲ್ಲಿ ಬಾರ್ ಅಸೋಸಿಯೇಷನ್ ಅಥವಾ ವಕೀಲರು ಖುದ್ದು ಬಂದರೂ ಸ್ಪಂದಿಸುತ್ತೇನೆ ಎಂದು ತಿಳಿಸಿದರು.

ಕಾನೂನು ವಿವಿಯಲ್ಲಿ ಪುತ್ರ ವ್ಯಾಸಂಗ: ನಮ್ಮ ಮನೆಯಲ್ಲಿ ಈವರೆಗೆ ಯಾರೂ ವಕೀಲರು ಇರಲಿಲ್ಲ. ನನ್ನ ಪುತ್ರ ಅಡ್ವೋಕೇಟ್ ಆಗುತ್ತೇನೆಂದು ಹೈದರಾಬಾದ್‌ನ ನಲ್ಸಾರ್ ಕಾನೂನು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ನನ್ನ ಮಗ ಉತ್ತಮ ಕ್ಷೇತ್ರ ಆರಿಸಿಕೊಂಡಿರುವ ಖುಷಿ ಇದೆ ಎಂದು ಹರ್ಷ ವ್ಯಕ್ತಪಡಿಸಿದರು.

ಇದೇ ವೇಳೆ ನಿವೃತ್ತ ಸರ್ಕಾರಿ ಅಭಿಯೋಜಕ ಹೆಚ್.ಡಿ.ಆನಂದಕುಮಾರ್, ಹಿರಿಯ ಪತ್ರಕರ್ತರಾದ ಡಾ.ಕೂಡ್ಲಿ ಗುರುರಾಜ್, ಕೊಳ್ಳೇಗಾಲ ಮಹೇಶ್ ಅವರನ್ನು ಸನ್ಮಾನಿಸಲಾಯಿತು. ನಿವೃತ್ತ ನ್ಯಾಯಾಧೀಶರೂ ಆದ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಸದಸ್ಯ ಸಿ.ಜಿ.ಹುನಗುಂದ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್. ಉಮೇಶ್, ಮಾಜಿ ಅಧ್ಯಕ್ಷ ಜಿ.ವಿ.ರಾಮಮೂರ್ತಿ, ಹಿರಿಯ ವಕೀಲ ಎಸ್.ಲೋಕೇಶ್, ಲಾಗೈಡ್ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಮತ್ತಿತರರು ಹಾಜರಿದ್ದರು.

ಪರಸ್ಪರ ಸಹಕಾರ, ಪ್ರೀತಿ ಇದ್ದರೆ ಸಮಾಜ ಶಾಂತ, ಸಮೃದ್ಧ

ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಸದಸ್ಯ ಸಿ.ಜಿ.ಹುನಗುಂದ ಅಭಿಮತ

ಮೈಸೂರು,ಡಿ.26(ಪಿಎಂ)– ತಾಳ್ಮೆ-ಶಿಸ್ತು ಎಲ್ಲರಿಗೂ ಅಗತ್ಯ. ಇವುಗಳಿದ್ದರೆ, ಪರಸ್ಪರ ಸಹಕಾರ-ಪ್ರೀತಿ ಬೆಳೆದು ಸಮಾಜ ಶಾಂತ, ಸಮೃದ್ಧವಾಗಿ ಬೆಳೆಯುತ್ತದೆ. ಅಂತಹ ವಾತಾವರಣ ನಿರ್ಮಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಎಲ್ಲರೂ ಪ್ರಯತ್ನಿಸಬೇಕೆಂದು ನಿವೃತ್ತ ನ್ಯಾಯಾಧೀಶರೂ ಆದ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಸದಸ್ಯ ಸಿ.ಜಿ.ಹುನಗುಂದ ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೈಸೂರು ಶಿಸ್ತಿನ ನಗರವಾಗಿದೆ. ಪೊಲೀಸ್ ಆಯುಕ್ತರು ಶ್ರಮಿಸುತ್ತಿರುವುದು ಹೆಮ್ಮೆ ವಿಷಯ. ಅದು ಅವರಿಂದ ಸಾಧ್ಯವಿದೆ. ಈ ಹಿಂದೆ ಮೈಸೂರು ಸ್ವಚ್ಛ ನಗರವೆಂದು ಹೆಸರು ಗಳಿಸಿದೆ. ಪೊಲೀಸ್ ಆಯುಕ್ತರ ಕ್ರಮದಿಂದ ಮೈಸೂರಿಗೆ ಮತ್ತಷ್ಟು ಹೆಸರು ಬರುವ ವಿಶ್ವಾಸವಿದೆ. ಈ ನಿಟ್ಟಿನಲ್ಲಿ ಅವರು ನಿಮ್ಮ ಸಹಕಾರ ಕೇಳಿದ್ದಾರೆ. ನೀವು ಅಷ್ಟೇ ಶಿಸ್ತಿನಿಂದ ಸಹಕಾರ ಕೊಡಬೇಕು. ಅವರು ಹೇಳಿದಂತೆ ತಾಳ್ಮೆ ಎಲ್ಲರಿಗೂ ಬೇಕು. ಜೊತೆಗೆ ಶಿಸ್ತು ಇದ್ದರೆ ಸಹಕಾರ ದೊರೆಯುತ್ತದೆ. ಪೊಲೀಸ್ ಆಯುಕ್ತರು ಹೈದರಾಬಾದಿನವರಾದರೂ ನಿಚ್ಚಳವಾಗಿ ಕನ್ನಡ ಮಾತನಾಡುವುದು ಕಂಡು ಖುಷಿಯಾಯಿತು ಎಂದು ಹರ್ಷ ವ್ಯಕ್ತಪಡಿಸಿದರು.

ಸೇವಾ ಮನೋಭಾವದ ಲಾಗೈಡ್ ಬಳಗ: ಲಾಗೈಡ್ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ವಯಸ್ಸಿನಲ್ಲಿ ಹಿರಿಯರಾಗಿದ್ದರೂ ಸೇವಾ ಮನೋಭಾವ ಮತ್ತು ಕರ್ತವ್ಯನಿಷ್ಠೆಯಲ್ಲಿ ಹಿರಿಯರಾಗಿದ್ದಾರೆ. ಅವರ ಪುತ್ರರು ಅವರನ್ನು ಒಂದು ದಿನ ಉನ್ನತ ಸ್ಥಾನ ಅಲಂಕರಿಸುವಂತೆ ಮಾಡಲಿದೆ. ಲಾಗೈಡ್ ಬಳಗವು ಕೇವಲ ಕ್ಯಾಲೆಂಡರ್ ಮತ್ತು ಡೈರಿ ಬಿಡುಗಡೆಗೆ ಮಾತ್ರ ಸೀಮಿತವಾಗಿಲ್ಲ. ಜೊತೆಗೆ ಇನ್ನು ಹಲವು ಕ್ಷೇತ್ರಗಳಲ್ಲಿ ಸೇವಾ ಮನೋಭಾವದಿಂದ ತೊಡಗಿಸಿಕೊಂಡಿದೆ ಎಂದು ಶ್ಲಾಘಿಸಿದರು.



ಲಾಗೈಡ್ ವತಿಯಿಂದ ಪತ್ರಕರ್ತ ಡಾ.ಕೂಡ್ಲಿ ಗುರುರಾಜ್, ನಿವೃತ್ತ ಸರ್ಕಾರಿ ಅಭಿಯೋಜಕ ಹೆಚ್.ಡಿ.ಆನಂದಕುಮಾರ್, ಪತ್ರಕರ್ತ ಕೊಳ್ಳೇಗಾಲ ಮಹೇಶ್ ಅವರನ್ನು ಸನ್ಮಾನಿಸಲಾಯಿತು.

ನನ್ನ ವೃತ್ತಿಜೀವನದ ಎಲ್ಲಾ ಯಶಸ್ಸಿನ ಶ್ರೇಯಸ್ಸು ಲಾಗೈಡ್, ಬಾರ್ ಅಸೋಸಿಯೇಷನ್‌ಗೆ ಸಲ್ಲಬೇಕು

ನಿವೃತ್ತ ಸರ್ಕಾರಿ ಅಭಿಯೋಜಕ ಹೆಚ್.ಡಿ.ಆನಂದಕುಮಾರ್

ಮೈಸೂರು,ಡಿ.26(ಪಿಎಂ)– ನನ್ನ 33 ವರ್ಷಗಳ ಸೇವಾ ಅವಧಿಯಲ್ಲಿ ಬೇರೆ ಬೇರೆ ಊರುಗಳಲ್ಲಿ ಸೇವೆ ಸಲ್ಲಿಸಿದ್ದು, ಈ ಪೈಕಿ ಮೈಸೂರು ನನಗೆ ಅತ್ಯಂತ ಪ್ರೀತಿ, ಗೌರವ ತಂದುಕೊಡುವ ಜೊತೆಗೆ ಜವಾಬ್ದಾರಿ ನೀಡಿದೆ. ಜೊತೆಗೆ ಲಾಗೈಡ್ ಬಳಗ ನನಗೂ ಲಾಗೈಡ್ ಆಗಿದೆ. ನಾನು ವೃತ್ತಿ ಜೀವನದಲ್ಲಿನ ಎಲ್ಲಾ ಯಶಸ್ಸಿನ ಶ್ರೇಯಸ್ಸು ಲಾಗೈಡ್ ತಂಡ, ಬಾರ್ ಅಸೋಷಿಯೇಷನ್‌ಗೆ ಸಲ್ಲಬೇಕು ಎಂದು ನಿವೃತ್ತ ಸರ್ಕಾರಿ ಅಭಿಯೋಜಕ ಹೆಚ್.ಡಿ.ಆನಂದಕುಮಾರ್ ಹೇಳಿದರು.

ನನ್ನ ಜನ್ಮಭೂಮಿ ಶಿವಮೊಗ್ಗದ ಮತ್ತೂರು ಸಂಸ್ಕೃತ ಗ್ರಾಮ. ಮೈಸೂರು ನನಗೆ ಕರ್ಮಭೂಮಿ ಎಂಬ ಹೆಮ್ಮೆಯಿದೆ. ನನ್ನ ವೃತ್ತಿಜೀವನದ ಚೊಚ್ಚಲ ದಿನಗಳನ್ನು ಈ ಸಮಾರಂಭದಲ್ಲಿ ಉಪಸ್ಥಿತರಿರುವ ಸಿ.ಜಿ.ಹುನಗುಂದ ಅವರ ನ್ಯಾಯಾಲಯದಲ್ಲಿ ಪ್ರಾರಂಭ ಮಾಡಿದೆ. ನನ್ನ ನಿವೃತ್ತಿ ಜೀವನದ ಬಳಿಕ ವೃತ್ತಿಜೀವನದ ಎರಡನೇ ಹಂತದ ದಿನಗಳನ್ನು ಪ್ರಾರಂಭಿಸುವ ದಿನಗಳಲ್ಲಿ ಅವರ ಸಮ್ಮುಖದಲ್ಲಿ ಸನ್ಮಾನಿಸಿರುವುದು ನನಗೆ ಹೆಚ್ಚು ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

8 ವರ್ಷಗಳ ಹಿಂದೆ ನಾನು ಮೈಸೂರಿಗೆ ಬಂದಾಗ ನನ್ನ ನ್ಯಾಯಾಲಯದಲ್ಲಿ 300ಕ್ಕೂ ಹೆಚ್ಚು ಕೇಸ್‌ಗಳಿತ್ತು. ನಾನು ನಿವೃತ್ತಿ ಆದಾಗ ಕೇವಲ 20 ಕೇಸ್‌ಗಳು ಮಾತ್ರ ಇದ್ದವು. ಅನೇಕ ಕೇಸ್‌ಗಳಲ್ಲಿ ಸವಾಲುಗಳನ್ನೇ ಹೆಚ್ಚು ಕಂಡಿದ್ದೇನೆ. ವೃತ್ತಿಜೀವನದಲ್ಲಿ ಡಿಫೆನ್ಸ್ ಲಾಯರ್ ಆದರೂ ವೃತ್ತಿ ಜೀವನದ ಅಂಗಳದಲ್ಲಿ ಮಾತ್ರ ಅದನ್ನು ಪರಿಗಣಿಸಿ, ಅಂಗಳದ ಹೊರಗೆ ನನ್ನನ್ನು ಒಬ್ಬ ಸಹೋದರನಂತೆ ಪರಿಗಣಿಸಿದ ತಮ್ಮೆಲ್ಲರಿಗೆ ಅಭಾರಿಯಾಗಿದ್ದೇನೆ ಎಂದರು.

ಅಪಘಾತ ಪ್ರಕರಣಗಳಲ್ಲಿ ವಿಮೆ ಇಲ್ಲದ ಕಾರಣಕ್ಕೆ ವಾಹನ ಬಿಡುಗಡೆಗೆ ನಿರಾಕರಿಸುವಂತಿಲ್ಲ: ಹೈಕೋರ್ಟ್

ಬೆಂಗಳೂರು: ಅಪಘಾತ ಪ್ರಕರಣಗಳಲ್ಲಿ ವಿಮೆ ಇಲ್ಲದ ಕಾರಣ ನೀಡಿ ವಾಹನವನ್ನು ಮಾಲೀಕರಿಗೆ ಬಿಡುಗಡೆ ಮಾಡಲು ನಿರಾಕರಿಸುವಂತಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ವಾಹನಕ್ಕೆ ವಿಮೆ ಮಾಡಿಸಿಲ್ಲ ಎಂಬ ಕಾರಣ ನೀಡಿ ರಾಮನಗರದ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಬೆಂಗಳೂರಿನ ಚೌಡೇಶ್ವರಿ ನಗರದ ನಿವಾಸಿ ಗಣೇಶ್ ಎಂಬುವರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ನ್ಯಾಯಪೀಠ, ವಿಚಾರಣಾ ನ್ಯಾಯಾಲಯದ ಆದೇಶವನ್ನು ರದ್ದು ಗೊಳಿಸಿದೆ. ಅಲ್ಲದೇ, ಅರ್ಜಿಯನ್ನು ಪುರಸ್ಕರಿಸಿ, ಅರ್ಜಿದಾರರಿಗೆ ಅಗತ್ಯ ಷರತ್ತುಗಳನ್ನು ವಿಧಿಸಿ ವಾಹನ ಬಿಡುಗಡೆಗೆ ಸೂಚನೆ ನೀಡಿ ಆದೇಶಿಸಿದೆ.



ರಸ್ತೆ ಅಪಘಾತಗಳಲ್ಲಿ ಗಾಯಗೊಂಡವರ ಹಿತಾಸಕ್ತಿ ಕಾಪಾಡುವುದು ಮತ್ತು ಪರಿಹಾರ ಪಡೆಯುವುದಕ್ಕಾಗಿ ರಾಜ್ಯ ವಿಧಾನಮಂಡಲ ಕರ್ನಾಟಕ ಮೋಟಾರು ವಾಹನ ನಿಯಮ – 1989ರ ಅಡಿ 232ಜಿ ಗೆ ತಿದ್ದುಪಡಿ ಮಾಡಿದೆ. ಅದರಂತೆ ವಾಹನ ಬಿಡುಗಡೆ ಮಾಡಲು ಷರತ್ತುಗಳನ್ನು ವಿಧಿಸಬಹುದಾಗಿದೆ. ಆದರೆ, ಈ ಪ್ರಕರಣದಲ್ಲಿ ಅರ್ಜಿದಾರರ ಸಂತ್ರಸ್ತರಾಗಿದ್ದಾರೆ. ಹೀಗಾಗಿ ಅರ್ಜಿದಾರರ ವಾಹನ ಬಿಡುಗಡೆ ಮಾಡಬಹುದು ಎಂದು ನ್ಯಾಯಪೀಠ ತಿಳಿಸಿದೆ.

ಅಲ್ಲದೇ, ಘಟನೆಯ ಆರೋಪಿಯಾಗಿರುವವರು ತಮ್ಮ ತಪ್ಪು ಒಪ್ಪಿಕೊಂಡಿದ್ದು, ಶಿಕ್ಷೆಗೆ ಗುರಿಯಾಗಿದ್ದಾರೆ. ಹೀಗಾಗಿ ಅರ್ಜಿದಾರರು ಯಾವುದೇ ರೀತಿಯ ಪರಿಹಾರವನ್ನು ಪಾವತಿ ಮಾಡಬೇಕಾದ ಅಗತ್ಯವಿಲ್ಲ. ಹೀಗಾಗಿ ಅರ್ಜಿದಾರರ ವಾಹನಕ್ಕೆ ವಿಮೆ ಮಾಡಿಸಿಲ್ಲ ಎಂಬ ಕಾರಣ ನೀಡಿ ವಾಹನ ಬಿಡುಗಡೆ ಮಾಡುವುದಕ್ಕೆ ನಿರಾಕರಣೆ ಮಾಡುವಂತಿಲ್ಲ. ಅಲ್ಲದೇ, ಅಗತ್ಯ ಷರತ್ತುಗಳನ್ನು ವಿಧಿಸಿ ವಾಹನ ಬಿಡುಗಡೆ ಮಾಡಬಹುದು ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ಕರ್ನಾಟಕ ಆಕ್ರಮಿತ ಮಹಾರಾಷ್ಟ್ರವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಿ

ಉದ್ಧವ್ ಠಾಕ್ರೆ ಉದ್ಧಟತನದ ಹೇಳಿಕೆ

ಮುಂಬೈ: ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮಹಾರಾಷ್ಟ್ರದ ವಿಧಾನಪರಿಷತ್‌ನಲ್ಲಿ ಇಂದು ಗಡಿ ವಿಷಯದ ಬಗ್ಗೆ ಮಾತನಾಡಿದ್ದಾರೆ.



ಗಡಿ ವಿಷಯವನ್ನು ಉದ್ಧವ್ ಠಾಕ್ರೆ ಕರ್ನಾಟಕ ಆಕ್ರಮಿತ ಮಹಾರಾಷ್ಟ್ರ ಎಂದು ಪ್ರಸ್ತಾಪಿಸಿದ್ದು, ಕೇಂದ್ರ ಸರ್ಕಾರ ಕರ್ನಾಟಕ ಆಕ್ರಮಿತ ಮಹಾರಾಷ್ಟ್ರವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸಬೇಕೆಂದು ಆಗ್ರಹಿಸಿದರು. ಕರ್ನಾಟಕ–ಮಹಾರಾಷ್ಟ್ರದ ನಡುವಿನ ವಿವಾದದ ಪ್ರಕರಣ ಕೇವಲ ಭಾಷೆ ಅಥವಾ ಗಡಿಯ ವಿಷಯವಷ್ಟೇ ಅಲ್ಲದೇ ಅದು ಮಾನವೀಯತೆಯ ವಿಷಯವೂ ಆಗಿದೆ ಎಂದು ಹೇಳಿದ್ದಾರೆ. ಪೀಳಿಗೆಗಳಿಂದ ಗಡಿ ಭಾಗದ ಗ್ರಾಮಗಳಲ್ಲಿ ವಾಸಿಸುತ್ತಿರುವ ಮರಾಠಿ ಭಾಷಿಕರಿಗೆ ತಮ್ಮ ದೈನಂದಿನ ಜೀವನ, ಭಾಷೆ, ಜೀವನ ಶೈಲಿ ಎಲ್ಲವೂ ಮರಾಠಿಯಾಗಿದೆ ಎಂದು ಹೇಳಿದ್ದಾರೆ.

ಗಡಿ ವಿವಾದ ಸುಪ್ರೀಂ ಕೋರ್ಟ್‌ನಲ್ಲಿರುವವರೆಗೂ ಕರ್ನಾಟಕ ಆಕ್ರಮಿತ ಮಹಾರಾಷ್ಟ್ರದ ಪ್ರದೇಶಗಳನ್ನು ಕೇಂದ್ರ ಸರ್ಕಾರ ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸಬೇಕು ಎಂದು ಠಾಕ್ರೆ ಆಗ್ರಹಿಸಿದ್ದಾರೆ. ಇದೇ ವೇಳೆ ಮಹಾರಾಷ್ಟ್ರ ಸಿಎಂ ಏಕನಾಥ್ ಶಿಂಧೆ ಅವರನ್ನೂ ಪ್ರಶ್ನಿಸಿರುವ ಠಾಕ್ರೆ, ವಿವಾದದ ಬಗ್ಗೆ ಶಿಂಧೆ ಒಂದೇ ಒಂದು ಮಾತನ್ನಾದರೂ ಆಡಿದ್ದಾರಾ ಎಂದು ಪ್ರಶ್ನಿಸಿದ್ದಾರೆ ಹಾಗೂ ಸರ್ಕಾರದ ನಿಲುವನ್ನು ಪ್ರಕಟಿಸಲು ಒತ್ತಾಯಿಸಿದ್ದಾರೆ.

ಹೊಸ ವರ್ಷದ ಪ್ರಯುಕ್ತ ಷೂ ವರ್ಲ್ಡ್‌ನಲ್ಲಿ 2+1 ಆಫರ್

ಮೈಸೂರು, ಡಿ.26– ಮೈಸೂರಿನ 'ಷೂ ವರ್ಲ್ಡ್'ನಲ್ಲಿ 2+1 ರಿಯಾಯ್ತಿ ಮಾರಾಟದ ಮೂಲಕ ಗ್ರಾಹಕರಿಗೆ ಹೊಸ ವರ್ಷದ ಕೊಡುಗೆ ನೀಡಲಾಗುತ್ತಿದೆ.



ಮುಂದಿನ ಜನವರಿ 15ರವರೆಗೆ ಎರಡು ಜೊತೆ ಪಾದರಕ್ಷೆ ಖರೀದಿಸಿದರೆ ಒಂದು ಜೊತೆ ಉಚಿತವಾಗಿ(2+1) ನೀಡಲಿದ್ದು, ಮೈಸೂರಿನ ರಾಮಸ್ವಾಮಿ ವೃತ್ತದ ಪ್ರೆಸ್ಟೀಜ್ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿರುವ ಮಳಿಗೆ ಹಾಗೂ ಶಿವರಾಂಪೇಟೆ ಮನ್ನಾರ್ಸ್ ಮಾರ್ಕೆಟ್ ಎದುರಿನ ಮಳಿಗೆಯಲ್ಲಿ ಮಕ್ಕಳು, ಮಹಿಳೆಯರು ಹಾಗೂ ಪುರುಷರ ಚಪ್ಪಲಿ ಹಾಗೂ ಷೂ ಸೇರಿದಂತೆ ಎಲ್ಲಾ ಇನ್‌ಹೌಸ್ ಬ್ರಾಂಡ್‌ನ ಪಾದರಕ್ಷೆಗಳನ್ನು ರಿಯಾಯ್ತಿಯಲ್ಲಿ ಕೊಳ್ಳಬಹುದಾಗಿದೆ. ಸ್ಥಳೀಯ, ಭಾರತೀಯ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಷೂಗಳು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಆಸ್ಪತ್ರೆ, ಸ್ವಚ್ಛತಾ ಕಾರ್ಮಿಕರು, ಕೈಗಾರಿಕೆ ಇನ್ನಿತರ ಸಂಸ್ಥೆಗಳ ಸಿಬ್ಬಂದಿಗೆ ಗುಣಮಟ್ಟದ ಫುಟ್‌ವೇರ್‌ಗಳನ್ನು ಸಗಟು ದರದಲ್ಲಿ ಮಾರಾಟ ಮಾಡಲಾಗುತ್ತಿದ್ದು, ಮೆಡಿಕಲ್ ಫುಟ್‌ವೇರ್‌ಗಳೂ ಇಲ್ಲಿ ಸಿಗಲಿವೆ.

ಮೊದಲ ಪ್ರತಿಭಟನಾತ್ಮಕ ವಚನ ಬಸವಣ್ಣನವರದ್ದು

ಪ್ರಾಧ್ಯಾಪಕಿ ಪ್ರೊ.ಉಷಾದೇವಿ ಅಭಿಮತ



ಮೈಸೂರು, ಡಿ.26(ಎಸ್‌ಪಿಎನ್)– 'ಉಳ್ಳವರು ಶಿವಾಲಯವ ಮಾಡುವರು, ನಾನೇನು ಮಾಡಲಯ್ಯ ಬಡವನಯ್ಯ' ಎಂಬ ಬಸವಣ್ಣವರ ವಚನ ಶರಣ ಸಂಸ್ಕೃತಿಯಲ್ಲಿ ಮೊದಲ ಪ್ರತಿಭಟನಾತ್ಮಕ ವಚನ ಎಂದು ಪ್ರಾಧ್ಯಾಪಕಿ ಪ್ರೊ.ಸಿ.ಜಿ.ಉಷಾದೇವಿ ಅಭಿಪ್ರಾಯಪಟ್ಟರು.

ಮೈಸೂರು ರಾಮಾನುಜ ರಸ್ತೆಯಲ್ಲಿರುವ ಜ್ಯೋತಿರ್ಗಮಯ ಸೇವಾ ಟ್ರಸ್ಟ್ (ವಿದ್ಯಾರ್ಥಿನಿಯರ ಉಚಿತ ವಸತಿ ನಿಲಯ) ಆವರಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ವತಿಯಿಂದ ಆಯೋಜಿಸಿದ್ದ ನಿಲಯದ ವಿದ್ಯಾರ್ಥಿಗಳಿಂದ ವಚನ ಗಾಯನ ಮತ್ತು ವ್ಯಾಖ್ಯಾನ ಸ್ಪರ್ಧೆ ಹಾಗೂ ವಚನಗಾರ್ತಿಯರ ಪ್ರಗತಿ ಪರ ಚಿಂತನೆ' ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

12ನೇ ಶತಮಾನದ ಶರಣ ಸಂಸ್ಕೃತಿಯಲ್ಲಿ ಅಲ್ಲಮಪ್ರಭು, ಸಿದ್ದರಾಮ, ಬಸವಣ್ಣನವರು ಸೇರಿದಂತೆ ಹಿರಿಯ ವಚನಕಾರರ ನಾಯಕತ್ವದಲ್ಲಿ ವಚನ ಚಳವಳಿ ಆರಂಭವಾಯಿತು. ಹಿರಿಯ ವಚನಕಾರರ ಅಧ್ಯಯನ ನಡೆಸುವಾಗ ಬಸವಣ್ಣ, ಅಲ್ಲಮಪ್ರಭು ಸೇರಿದಂತೆ ಇತರೆ ವಚನಕಾರರ ಕುರಿತು ಅಧ್ಯಯನ ನಡೆಸದೇ ಅಕ್ಕ ಮಹಾದೇವಿ ಸೇರಿದಂತೆ ಇತರೆ ವಚನಗಾರ್ತಿಯರ ವಚನಗಳ ವಿಮರ್ಶೆ ಸಾಧ್ಯವಿಲ್ಲ ಎಂದರು.


ಪ್ರಸ್ತುತ ಶಾಲಾ–ಕಾಲೇಜುಗಳಲ್ಲಿ ಅನುಭವ ಮಂಟಪ ಮಾದರಿಯ ವಾತಾವರಣವನ್ನು ನಿರ್ಮಿಸಿ, ವಿದ್ಯಾರ್ಥಿಗಳಲ್ಲಿ ವಚನದ ಬಗ್ಗೆ ಅರಿವು ಮೂಡಿಸಬೇಕು. ಪುರುಷ ಪ್ರಧಾನವಾದ 12ನೇ ಶತಮಾನದಲ್ಲಿ ಮಹಿಳೆಯರಿಗೆ ಸಮಾಜದ ಮುಖ್ಯವಾಹಿನಿಗೆ ಪರಿಚಯವಾದ ಕಾಲಘಟ್ಟ ಎಂದರೆ ತಪ್ಪಾಗಲಾರದು ಎಂದರು.

ಈ ವೇಳೆ ಜೆಎಸ್‌ಎಸ್ ಪ್ರೌಢಶಾಲೆಯ ಮುಖ್ಯಶಿಕ್ಷಕಿ ಹೆಚ್.ಎಂ.ಶೈಲಜಾಸ್ವಾಮಿ, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಆರ್.ಎನ್. ದಿನೇಶ್, ಎಂ.ಎ.ನೀಲಾಂಬಿಕಾ, ಟಿ.ಎಸ್. ಕುಮಾರಸ್ವಾಮಿ ಉಪಸ್ಥಿತರಿದ್ದರು.

ಸುಶಾಂತ್ ಸಿಂಗ್ ರಜಪೂತ್‌ರದ್ದು ಆತ್ಮಹತ್ಯೆಯಲ್ಲ, ಕೊಲೆ

ಶವಾಗಾರದ ಸಿಬ್ಬಂದಿ ಹೇಳಿಕೆ

ಮುಂಬೈ: ಬಾಲಿವುಡ್‌ನಟ ಸುಶಾಂತ್ ಸಿಂಗ್‌ರಜಪೂತ್‌ಅವರದ್ದು ಆತ್ಮಹತ್ಯೆಯಲ್ಲ, ಕೊಲೆ ಎಂದು ಮುಂಬೈನ ಕೂಪರ್ ಆಸ್ಪತ್ರೆಯ ಶವಾಗಾರದ ಸಿಬ್ಬಂದಿ ರೂಪ ಕುಮಾರ್‌ಶಾ ಹೇಳಿದ್ದಾರೆ. ಅವರ ಹೇಳಿಕೆಯು ದೇಶದಲ್ಲಿ ಸಂಚಲನ ಸೃಷ್ಟಿ ಮಾಡಿದೆ.



ನಾನು ಸುಶಾಂತ್ ಸಿಂಗ್ ರಜಪೂತ್ ಅವರ ಶವವನ್ನು ನೋಡಿದಾಗ ಅದು ಆತ್ಮಹತ್ಯೆ ಎಂದು ಅನಿಸುತ್ತಿರಲಿಲ್ಲ. ಅವರ ದೇಹದ ಮೇಲೆ ಗಾಯದ ಗುರುತುಗಳಿದ್ದವು. ಇದನ್ನೇ ನನ್ನ ಹಿರಿಯರ ಅಧಿಕಾರಿಗಳ ಬಳಿಗೆ ಹೋಗಿ ಹೇಳಿದ್ದೆ. ಆದರೆ, ಇದನ್ನು ಆಮೇಲೆ ಚರ್ಚೆ ಮಾಡೋಣ ಎಂದು ಅವರು ನನಗೆ ಹೇಳಿದರು ಎಂದು ಸುದ್ದಿ ಸಂಸ್ಥೆ ಎಎನ್‌ಐ ಜೊತೆಗೆ ಮಾತನಾಡುತ್ತಾ ರೂಪಕುಮಾರ್ ಶಾ ಹೇಳಿದ್ದಾರೆ.

ಮರಣೋತ್ತರ ಪರೀಕ್ಷಾ ವರದಿಯಲ್ಲಿ ಏನು ಬರೆಯಬೇಕು ಎಂಬುದು ವೈದ್ಯರ ಕೆಲಸ. ಅವರಿಗೆ (ಸುಶಾಂತ್ ಸಿಂಗ್‌ಗೆ) ನ್ಯಾಯ ಸಿಗಬೇಕು. ಅವರನ್ನು ಕೊಲೆ ಮಾಡಲಾಗಿತ್ತು ಎಂಬುದು ಅವರನ್ನು ನೋಡಿದ ಯಾರಿಗಾದರೂ ಹೇಳಬಹುದಿತ್ತು. ತನಿಖಾ ಸಂಸ್ಥೆ ನನ್ನನ್ನು ಕರೆದರೆ ನಾನು ಅವರ ಬಳಿಗೆ ತೆರಳಿ ವಿವರಿಸುತ್ತೇನೆ ಎಂದು ಅವರು ಹೇಳಿದ್ದಾರೆ.

ನಟ ಸುಶಾಂತ್ ಸಿಂಗ್ ರಜಪೂತ್ ಅವರು 2020ರ ಜೂನ್ 14ರಂದು ಮುಂಬೈನ ತಮ್ಮ ಫ್ಲ್ಯಾಟ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಅವರ ಸಾವಿನ ಸುತ್ತ ಅನುಮಾನಗಳು ಎದ್ದಿದ್ದವು. ಅವರನ್ನು ಕೊಲೆ ಮಾಡಲಾಗಿದೆ ಎಂಬ ವಾದಗಳು ಕೇಳಿಬಂದಿದ್ದವು.

ಆದರೆ, ಸುಶಾಂತ್ ಸಿಂಗ್ ರಜಪೂತ್ ಅವರ ಶವಪರೀಕ್ಷೆ ವರದಿಯಲ್ಲಿ ಆತ್ಮಹತ್ಯೆ ಎಂದು ಉಲ್ಲೇಖಿಸಲಾಗಿದೆ. ಕುಟುಂಬಸ್ಥರು ಇದು ಕೊಲೆ ಎಂದೇ ಹೇಳಿದ್ದಾರೆ. ಪ್ರಕರಣವನ್ನು ಆರಂಭದಲ್ಲಿ ಮುಂಬೈ ಪೊಲೀಸರು ತನಿಖೆ ಮಾಡಿದ್ದರು. ನಂತರ ಈ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇಡಿ), ಮಾದಕ ಪದಾರ್ಥ ನಿಯಂತ್ರಣ ಘಟಕ (ಎನ್‌ಸಿಬಿ), ಕೇಂದ್ರ ತನಿಖಾ ದಳ (ಸಿಬಿಐ) ತನಿಖೆ ನಡೆಸುತ್ತಿವೆ.

ಮಂಡ್ಯ ವಿವಿಗೆ ಮೂರು ವರ್ಷದಲ್ಲಿ ಒಂದು ಕೋಟಿ ರೂ ಅನುದಾನ

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡರಿಗೆ ಸಚಿವ ಅಶ್ವತ್ಥನಾರಾಯಣ ಮಾಹಿತಿ

ಮಂಡ್ಯ, ಡಿ. 26– 2019ರಲ್ಲಿ ಮಂಡ್ಯದಲ್ಲಿ ಪ್ರಾರಂಭವಾದ ಮಂಡ್ಯ ವಿಶ್ವವಿದ್ಯಾಲಯಕ್ಕೆ ಇಲ್ಲಿಯವರೆಗೆ ಒಂದು ಕೋಟಿ ರೂ ಅನುದಾನ ನೀಡಿದ್ದು, ಈಗಾಗಲೇ ಮೂರು ತ್ರೈಮಾಸಿಕದಲ್ಲಿ 75 ಲಕ್ಷ ರೂ ಬಿಡುಗಡೆ ಮಾಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಅಶ್ವತ್ಥ ನಾರಾಯಣ ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಹೇಳಿದ್ದಾರೆ.

ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪ್ರಶ್ನೆಗೆ ಉತ್ತರಿಸಿದ ಉನ್ನತ ಶಿಕ್ಷಣ ಸಚಿವರು, ವಿಶ್ವವಿದ್ಯಾಲಯಕ್ಕೆ ನೀಡಲಾಗಿರುವ ಅನುದಾನದಲ್ಲಿ ವೈಜ್ಞಾನಿಕ ಉಪಕರಣಗಳಿಗೆ 20 ಲಕ್ಷ ರೂ, ಪೀಠೋಪಕರಣಗಳಿಗೆ 15 ಲಕ್ಷ ರೂ, ಗ್ರಂಥಾಲಯ ಪುಸ್ತಕಗಳಿಗೆ 5 ಲಕ್ಷ ರೂ, ಗಣಕ ಯಂತ್ರಗಳು, ಪ್ರಿಂಟರ್ ಮತ್ತು ಜೆರಾಕ್ಸ್ ಯಂತ್ರಗಳಿಗೆ 20 ಲಕ್ಷ ರೂ, ಕುಡಿಯುವ ನೀರಿನ ಘಟಕಕ್ಕೆ 5 ಲಕ್ಷ ರೂ, ಮೂಲಸೌಲಭ್ಯಗಳ ನಿರ್ವಹಣೆಗೆ 10 ಲಕ್ಷ ರೂ, ಹೊಸ ಆಡಳಿತ ಭವನದ ಆಂತರಿಕ ಕೆಲಸ ಕಾರ್ಯಗಳಿಗೆ 15 ಲಕ್ಷ ರೂ, ಸಿ.ಸಿ. ಕ್ಯಾಮೆರಾ ಅಳವಡಿಕೆಗೆ 10 ಲಕ್ಷ ರೂ ಅಂದಾಜು ವೆಚ್ಚ ನಿಗದಿ ಮಾಡಲಾಗಿದೆ ಎಂದಿದ್ದಾರೆ.



ಮಳೆಗೆ ಜಿಲ್ಲೆಯ 276 ಶಾಲಾ ಕಟ್ಟಡಕ್ಕೆ ಹಾನಿ: ಈಚೆಗೆ ಮಂಡ್ಯ ಜಿಲ್ಲೆಯಲ್ಲಿ ಸುರಿದ ಭಾರಿ ಮಳೆಯಿಂದ ಜಿಲ್ಲೆಯಲ್ಲಿ 276 ಶಾಲಾ–ಕಾಲೇಜು ಕಟ್ಟಡಗಳಿಗೆ ಹಾನಿಯಾಗಿದೆ. ಈ ಕುರಿತು ವರದಿಯನ್ನು ಮಂಡ್ಯ ಜಿಲ್ಲಾಧಿಕಾರಿಗೆ ಸಲ್ಲಿಸಲಾಗಿದೆ. ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಅನುದಾನದಲ್ಲಿ ದುರಸ್ತಿಗೆ ತಾಲೂಕುವಾರು ಅನುದಾನ ನಿಗದಿಪಡಿಸಲಾಗಿದೆ ಎಂದು ಉತ್ತರಿಸಿದರು.

ಅನುದಾನದ ವಿವರ: ಕೆ.ಆರ್. ಪೇಟೆಯಲ್ಲಿ 52 ಸರ್ಕಾರಿ ಶಾಲೆಗೆ 1.4 ಕೋಟಿ ರೂ., ಪಾಂಡವಪುರದಲ್ಲಿ 17 ಶಾಲೆಗೆ 34 ಲಕ್ಷ ರೂ, ಮಂಡ್ಯ ಉತ್ತರದ 14 ಶಾಲೆಗಳಿಗೆ 28 ಲಕ್ಷ ರೂ., ಮಂಡ್ಯ ದಕ್ಷಿಣದಲ್ಲಿ 52 ಶಾಲೆಗಳಲ್ಲಿ 1.4 ಕೋಟಿ ರೂ., ಮದ್ದೂರಿನಲ್ಲಿ 28 ಶಾಲೆಗಳಿಗೆ 56 ಲಕ್ಷ ರೂ, ಮಳವಳ್ಳಿ 23 ಶಾಲೆಗೆ 46 ಲಕ್ಷ ರೂ, ನಾಗಮಂಗಲದಲ್ಲಿ 42 ಶಾಲೆಗೆ 84 ಲಕ್ಷ ರೂ, ಶ್ರೀರಂಗಪಟ್ಟಣದಲ್ಲಿ 48 ಶಾಲೆಗೆ 96 ಲಕ್ಷ ರೂ ಒಟ್ಟು 5.52 ಕೋಟಿ ರೂ ಅನುದಾನವನ್ನು ನಿಗದಿಪಡಿಸಲಾಗಿದೆ ಎಂದು ದಿನೇಶ್ ಗೂಳಿಗೌಡರ ಮತ್ತೊಂದು ಪ್ರಶ್ನೆಗೆ ಪ್ರಾಥಮಿಕ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮಾಹಿತಿ ನೀಡಿದ್ದಾರೆ.

ಕೊರಿಯರ್ ಅಂಗಡಿಯಲ್ಲಿ ಮಿಕ್ಸಿ ಬ್ಲಾಸ್ಟ್; ಹೆಚ್ಚಿದ ಆತಂಕ..!

ಹಾಸನ, ಡಿ.26– ಕೊರಿಯರ್ ಅಂಗಡಿಯಲ್ಲಿ ಅನುಮಾನಾಸ್ಪದವಾಗಿ ಮಿಕ್ಸಿ ಬ್ಲಾಸ್ಟ್ ಆದ ಘಟನೆ ಹಾಸನದ ಕುವೆಂಪುನಗರ ಬಡಾವಣೆಯಲ್ಲಿ ನಡೆದಿದೆ. ಅಂಗಡಿಯಲ್ಲಿದ್ದ ಶಶಿ ಎಂಬುವವರ ಕೈಗೆ ಮತ್ತು ಹೊಟ್ಟೆ ಭಾಗಕ್ಕೆ ಗಂಭೀರ ಗಾಯಗಳಾಗಿವೆ. ಕೂಡಲೇ ಗಾಯಾಳುವನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಇನ್ನು ಮಿಕ್ಸಿ ಸ್ಫೋಟದ ತೀವ್ರತೆಗೆ ಅಂಗಡಿಯಲ್ಲಿದ್ದ ಇತರೆ ವಸ್ತುಗಳು ಚಲ್ಲಾಪಿಲ್ಲಿಯಾಗಿವೆ. ಸದ್ಯ ಘಟನಾ ಸ್ಥಳಕ್ಕೆ ಹಾಸನ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಘಟನೆ ಸಂಬಂಧ ಹಾಸನ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮೈಸೂರಲ್ಲಿ ಮುಂದುವರೆದ ಪ್ರವಾಸಿಗರ ಜಾತ್ರೆ!

ಪ್ರವಾಸಿ ತಾಣಗಳಲ್ಲಿ ಮಕ್ಕಳಾದಿಯಾಗಿ ಕಿಕ್ಕಿರಿದ ಜನಸಂದಣಿ



ಮೈಸೂರು, ಡಿ.26(ಎಸ್‌ಬಿಡಿ)– ವರ್ಷಾಂತ್ಯ ಹಾಗೂ ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಮೈಸೂರಿಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದು, ಪ್ರೇಕ್ಷಣೀಯ ಸ್ಥಳಗಳಲ್ಲಿ ಸೋಮವಾರವೂ ಜನಸಂದಣಿ ಕಂಡುಬಂದಿತು.

ಅನೇಕ ಶಿಕ್ಷಣ ಸಂಸ್ಥೆಗಳಿಗೆ ಕ್ರಿಸ್‌ಮಸ್ ರಜೆ ನೀಡಿದ್ದು, ಹಲವು ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸ ಹಮ್ಮಿಕೊಳ್ಳಲಾಗಿದೆ. ಹಾಗಾಗಿ ಮೈಸೂರಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ಹೆಚ್ಚಿನ ಸಂಖ್ಯೆಯ ಮಕ್ಕಳು ಕಾಣಸುತ್ತಾರೆ. ಅಲ್ಲದೆ ಅರಮನೆ ಆವರಣದಲ್ಲಿ ಅತ್ಯಾಕರ್ಷಕ ಫಲಪುಷ್ಪ ಪ್ರದರ್ಶನದ ಜೊತೆಗೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಇದನ್ನು ಆಸ್ವಾದಿಸಲೆಂದು ಸುತ್ತಮುತ್ತ ಜಿಲ್ಲೆಗಳ ಜನರೂ ಬರುತ್ತಿದ್ದಾರೆ. ಜೊತೆಗೆ ಮೈಸೂರಲ್ಲಿ ಹೊಸವರ್ಷ ಸ್ವಾಗತಿಸಲು ಯೋಜನೆ ಮಾಡಿಕೊಂಡಿರುವವರು ನಗರದತ್ತ ಪ್ರಯಾಣ ಬೆಳೆಸಿದ್ದಾರೆ. ಹಾಗಾಗಿ ಮೈಸೂರು ಪ್ರವಾಸಿಗರಿಂದ ಗಿಜಿಗುಡುತ್ತಿದೆ.

ಅರಮನೆ ಭೇಟಿ: ಮೈಸೂರು ಪ್ರವಾಸಕ್ಕೆ ಬಂದವರು ಮೊದಲು ಅರಮನೆಯತ್ತ ಹೆಜ್ಜೆ ಹಾಕುವುದು ಸಾಮಾನ್ಯ. ವಾರಾಂತ್ಯ ದಿನಗಳಾದ ಶನಿವಾರ ಹಾಗೂ ಭಾನುವಾರ ಹೆಚ್ಚು ಸಂಖ್ಯೆಯಲ್ಲಿ ಭೇಟಿ ನೀಡಿದ್ದರು. ಡಿ.23ರಂದು 17,401, ಡಿ.24ರಂದು 25,943, ಡಿ.25ರಂದು 31,943 ಹಾಗೂ ಇಂದು 19,600 ಮಂದಿ ಟಿಕೆಟ್ ಪಡೆದು ಅರಮನೆ ಸೊಬಗನ್ನು ಕಣ್ತುಂಬಿಕೊಂಡಿದ್ದಾರೆ. ಫಲಪುಷ್ಪ ಪ್ರದರ್ಶನದಲ್ಲೂ ಕಿಕ್ಕಿರಿದಿದ್ದರು. ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿದ್ದ ಅರಮನೆ ಮುಂಭಾಗ ಪ್ರಸ್ತುತಗೊಂಡ ಸಾಂಸ್ಕೃತಿಕ ಕಾರ್ಯಕ್ರಮವನ್ನೂ ಸಹಸ್ರಾರು ಜನ ಆಸ್ವಾದಿಸಿದರು.

ಮೃಗಾಲಯ ವೀಕ್ಷಣೆ: ಮೈಸೂರು ಮೃಗಾಲಯಕ್ಕೆ ಸಾವಿರಾರು ವಿದ್ಯಾರ್ಥಿಗಳು, ಮಕ್ಕಳು ಸೇರಿ ಇಂದು ಸುಮಾರು 32 ಸಾವಿರ ವೀಕ್ಷಕರು ಭೇಟಿ ನೀಡಿದ್ದು, 1500ಕ್ಕೂ ಹೆಚ್ಚು ಮಂದಿ ಕಾರಂಜಿ ಕೆರೆ ವೀಕ್ಷಿಸಿದರು. ಒಟ್ಟಾರೆ ಇಂದು 25,91,900 ರೂ. ಸಂಗ್ರಹವಾಗಿದೆ. ನಿನ್ನೆ ಇನ್ನೂ ಹೆಚ್ಚು ಸಂಖ್ಯೆಯ ಪ್ರವಾಸಿಗರು ಭೇಟಿ ನೀಡಿದ್ದು, ಮೃಗಾಲಯ ಹಾಗೂ ಕಾರಂಜಿಕೆರೆಯಿಂದ ಒಟ್ಟು 31,24,865 ರೂ. ಸಂಗ್ರಹವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಟ್ಟದಲ್ಲಿ ಭಕ್ತರ ದಂಡು: ಮೈಸೂರಿಗೆ ಬರುವ ಪ್ರವಾಸಿಗರು ಬೆಟ್ಟದ ತುದಿಯಲ್ಲಿರುವ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯುತ್ತಾರೆ. ಅಲ್ಲದೆ ಶಬರಿಮಲೆ ಅಯ್ಯಪ್ಪ ಸ್ವಾಮಿ ದರ್ಶನಕ್ಕೆ ತೆರಳುವ ಮಾಲಧಾರಿಗಳೂ ತಾಯಿಗೆ ನಮಿಸಿ ಪ್ರಯಾಣ ಬೆಳೆಸುವುದಿದೆ. ಹಾಗಾಗಿ ಹಲವು ದಿನಗಳಿಂದ ಚಾಮುಂಡಿ ಬೆಟ್ಟದಲ್ಲಿ ಭಕ್ತ ಜನಸಾಗರ ಕಂಡುಬರುತ್ತಿದೆ. ಅದರಲ್ಲೂ ಶನಿವಾರ ಹಾಗೂ ಭಾನುವಾರ ವಿವಿಧ ಜಿಲ್ಲೆ ಹಾಗೂ ಹೊರರಾಜ್ಯದ ಪ್ರವಾಸಿಗರು ಹೆಚ್ಚಾಗಿ ಬಂದಿದ್ದರಿಂದ ಚಾಮುಂಡಿ ಬೆಟ್ಟದಲ್ಲೂ ಜನದಟ್ಟಣೆ ಹೆಚ್ಚಾಗಿತ್ತು.

ಜೊತೆಗೆ ಅರಮನೆ ಹಾಗೂ ಮೃಗಾಲಯದ ನಡುವಿನ ದಸರಾ ವಸ್ತು ಪ್ರದರ್ಶನಕ್ಕೂ ಪ್ರವಾಸಿಗರು ಲಗ್ಗೆ ಇಟ್ಟಿದ್ದರು. ಹೊಸವರ್ಷದ ಹಿನ್ನೆಲೆಯಲ್ಲಿ ಜ.2ರವರೆಗೆ ದಸರಾ ವಸ್ತು ಪ್ರದರ್ಶನ ವಿಸ್ತರಿಸಲಾಗಿದ್ದು, ಸ್ಥಳೀಯರೂ ಹೆಚ್ಚಾಗಿ ಭೇಟಿ ನೀಡುತ್ತಿದ್ದಾರೆ. ಅಗತ್ಯ ವಸ್ತುಗಳ ಖರೀದಿಸುವುದರ ಜೊತೆಗೆ ವಿಶಿಷ್ಟ ಖಾದ್ಯಗಳ ಸವಿದು, ಅಮ್ಯೂಸ್‌ಮೆಂಟ್ ಪಾರ್ಕ್‌ನಲ್ಲಿ ಸಂಭ್ರಮಿಸುತ್ತಿದ್ದಾರೆ. ಮೈಸೂರು ಸಮೀಪದ ಕೆಆರ್‌ಎಸ್ ಅಣೆಕಟ್ಟೆ ವೀಕ್ಷಣೆಗೂ ಸಹಸ್ರಾರು ಸಂಖ್ಯೆಯ ಪ್ರವಾಸಿಗರು ಮೈಸೂರಿನಿಂದ ಪ್ರಯಾಣ ಬೆಳೆಸಿದ್ದು ಕಂಡುಬಂದಿತು.

ಹಳ್ಳಿಗಳ ಅಭಿವೃದ್ಧಿ, ಸಮಾಜ ಸೇವೆಗೆ ಅಧಿಕಾರ, ಹಣ ವಿನಿಯೋಗ

ಹಣೆಗೆರೆ ಕೆರೆಗೆ ಬಾಗಿನ ಅರ್ಪಿಸಿದ ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಬಿ.ಎನ್.ಸದಾನಂದ

ತಿ.ನರಸೀಪುರ, ಡಿ.26– ಹಳ್ಳಿಗಳ ಅಭಿವೃದ್ಧಿ ಹಾಗೂ ಸಮಾಜ ಸೇವೆಗೆ ಅಧಿಕಾರ, ಹಣ ವಿನಿಯೋಗಿಸುವೆ. ರಾಜಕೀಯ ಅಧಿಕಾರ ಮತ್ತು ಹಣದಿಂದ ಆಸ್ತಿ ಮಾಡಿ, ವಿಲಾಸಿ ಜೀವನ ನಡೆಸಬೇಕೆಂಬ ಹಂಬಲವಿಲ್ಲ. ಬದುಕಿರುವವರೆಗೂ ಸಚ್ಚಾರಿತ್ರ್ಯ ರಾಜಕಾರಣ ಮಾಡುತ್ತೇನೆ ಎಂದು ಜಿಪಂ ಮಾಜಿ ಸದಸ್ಯ ಹಾಗೂ ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಬಿ.ಎನ್.ಸದಾನಂದ ತಿಳಿಸಿದರು.

ವರುಣಾ ವಿಧಾನಸಭಾ ಕ್ಷೇತ್ರದ ಅಳಗಂಚಿ ಗ್ರಾಮದಲ್ಲಿ 20 ವರ್ಷಗಳ ನಂತರ ಗ್ರಾಮಸ್ಥರ ವಂತಿಕೆ ಹಾಗೂ ವೈಯಕ್ತಿಕವಾಗಿ ನೀಡಿದ 5.5 ಲಕ್ಷ ರೂ. ವೆಚ್ಚದಲ್ಲಿ ಜೀರ್ಣೋದ್ಧಾರಗೊಂಡು ಭರ್ತಿಯಾಗಿರುವ ಹಣೆಗೆರೆ ಕೆರೆಗೆ ಗ್ರಾಮಸ್ಥರ ಜೊತೆಗೂಡಿ ಬಾಗಿನ ಅರ್ಪಿಸಿ, ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕೆರೆ ಜೀರ್ಣೋದ್ಧಾರಕ್ಕೆ ಸರ್ಕಾರದ ನೆರವು ಸಿಗದ ಹಿನ್ನೆಲೆಯಲ್ಲಿ ಗ್ರಾಮಸ್ಥರ ಜೊತೆಗೂಡಿ ಅಗತ್ಯ ಹಣ ಹೊಂದಿಸಿ ಈ ಭಾಗದ ಜನರ ಹಲವು ವರ್ಷಗಳ ಬೇಡಿಕೆ ಈಡೇರಿಸಿದ್ದಕ್ಕೆ ಹೆಮ್ಮೆಯಾಗುತ್ತಿದೆ ಎಂದರು.

ನಾಲೆ ಸಂಪರ್ಕವಿಲ್ಲದ ಕೆರೆ ಅಭಿವೃದ್ಧಿಪಡಿಸಿ ನೀರು ತುಂಬಿಸಲು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮೂಲಕ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗಿತ್ತು. ಈ ವೇಳೆ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಯೋಜನೆ ರೂಪಿಸಲು ಸೂಚಿಸಿದರಾದರೂ ಕೆರೆ ಜೀರ್ಣೋದ್ಧಾರಕ್ಕೆ ಆಡಳಿತಾತ್ಮಕ ಸಮಸ್ಯೆ ಎದುರಾಗಿದ್ದರಿಂದ ಸರ್ಕಾರದ ನೆರವು ಮರೀಚಿಕೆಯಾಯಿತು. ನೀರಾವರಿ ನಿಗಮದ ಅಧಿಕಾರಿಗಳು ಕೈ ಚೆಲ್ಲಿದರೂ ಹಠ ಬಿಡದ ಗ್ರಾಮಸ್ಥರು 1 ಲಕ್ಷ ರೂ. ವಂತಿಕೆ ಸಂಗ್ರಹಿಸಿದ್ದರು. ಅಲ್ಲದೇ ಮಹಿಳೆಯೊಬ್ಬರು ವಿಧವಾ ವೇತನ ನೀಡಿದ್ದನ್ನು ನೋಡಿ ಉಳಿದ ಹಣವನ್ನು ನಾನೇ ಹೊಂದಿಸಿ ಕೆರೆ ಜೀರ್ಣೋದ್ಧಾರ ಮಾಡಲಾಯಿತು ಎಂದರು.



ಕಳೆದ ಐದಾರು ವರ್ಷಗಳಿಂದ ರಾಜಕಾರಣದಲ್ಲಿರುವ ನಾನು ರೈತ ಕುಟುಂಬದಿಂದ ಬಂದವನು. ಅಧಿಕಾರ ಇರಲಿ, ಇಲ್ಲದಿರಲಿ ಪ್ರಾಮಾಣಿಕತೆಗೆ ಹೆಚ್ಚು ಆದ್ಯತೆ ನೀಡಿದ್ದೇನೆ. ಗಳಿಸಿದ್ದಕ್ಕಿಂತ ಕಳೆದುಕೊಂಡದ್ದೇ ಹೆಚ್ಚು ಎಂದರು.

ವರುಣಾ ಬಿಜೆಪಿ ಮಾಜಿ ಕ್ಷೇತ್ರಾಧ್ಯಕ್ಷ ಎ.ಎನ್.ಶಿವಯ್ಯ ಮಾತನಾಡಿ, ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪನವರು ಸಿಎಂ ಆಗಿದ್ದಾಗ ಚಾಮರಾಜನಗರ ಭಾಗದ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಆರಂಭಿಸಿದ ಸಂದರ್ಭದಲ್ಲೇ ಗ್ರಾಮದ ಹಣೆಗೆರೆ ಕೆರೆ ಅಭಿವೃದ್ಧಿಪಡಿಸಲು ಯೋಜಿಸಲಾಗಿತ್ತು. ಈ ಬಗ್ಗೆ ಅಂದಿನ ಶಾಸಕರು, ಸಂಸದರ ಗಮನಕ್ಕೆ ತಂದರೂ, ಯಾವುದೇ ಪ್ರಯೋಜನವಾಗಲಿಲ್ಲ. ನಮ್ಮೂರಿನ ಜನರ ತುಡಿತಕ್ಕೆ ಮಿಡಿದ ಸದಾನಂದ ಅವರು ವೈಯಕ್ತಿಕವಾಗಿ ನೀಡಿದ 5.5 ಲಕ್ಷ ರೂ.ಗಳನ್ನು ಕೆರೆ ಜೀರ್ಣೋದ್ಧಾರಕ್ಕೆ ಬಳಸಲಾಯಿತು. ಆ ಮೂಲಕ ಅವರು ಗ್ರಾಮಸ್ಥರಿಗೆ ಗಂಗೆ ತಂದುಕೊಟ್ಟ ಆಧುನಿಕ ಭಗೀರಥ ಆಗಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಈ ವೇಳೆ ದೇವನೂರು ದಾಸೋಹ ಮಠದ ಮಹಾಂತಪ್ಪ ಸ್ವಾಮೀಜಿ, ನಾಡಗೌಡರಾದ ಮಾರಪ್ಪ, ಚಂದ್ರಪ್ಪ, ಮಾಜಿ ಅಧ್ಯಕ್ಷ ಅಂಕಪ್ಪ, ಮುಖಂಡರಾದ ರಾಜಪ್ಪ, ಪುಟ್ಟನಂಜಪ್ಪ, ಎಸ್.ಚಿನ್ನಸ್ವಾಮಿ, ರಾಜೇಂದ್ರ, ಕೃಷ್ಣಮೂರ್ತಿ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಕೆರೆ ಅಭಿವೃದ್ಧಿಯಲ್ಲಿ ರಾಜಕೀಯವಿಲ್ಲ

ಕೆರೆ ಜೀರ್ಣೋದ್ಧಾರದ ಹಿಂದೆ ಯಾವುದೇ ರಾಜಕೀಯ ದುರುದ್ದೇಶವಿಲ್ಲ. ಗ್ರಾಮಸ್ಥರ ಅಪೇಕ್ಷೆಯಂತೆ ಕೆರೆ ಅಭಿವೃದ್ಧಿ ಪಡಿಸಿದ್ದೇನೆ. ಬೋಗಯ್ಯನ ಹುಂಡಿ ಗ್ರಾಮದ ಕೆರೆಯನ್ನು ಕೂಡ ಸಮಗ್ರವಾಗಿ ಅಭಿವೃದ್ಧಿಗೊಳಿಸಲು ವೈಯಕ್ತಿಕ ಯೋಜನೆ ರೂಪಿಸಿದ್ದೇನೆ. **–ಬಿ.ಎನ್.ಸದಾನಂದ, ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ.**

ಚಪ್ಪರದಹಳ್ಳಿ ಗ್ರಾಪಂಗೆ ಗಣೇಶ್ ಅಧ್ಯಕ್ಷ



ಬೆಟ್ಟದಪುರ, ಡಿ.26– ಇಲ್ಲಿಗೆ ಸಮೀಪದ ಚಪ್ಪರದಹಳ್ಳಿ ಗ್ರಾಪಂ ನೂತನ ಅಧ್ಯಕ್ಷರಾಗಿ ಸಿ.ಎಸ್.ಗಣೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸೋಮವಾರ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಗಣೇಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಕಿತ್ತೂರು ಹಾರಂಗಿ ಬಲದಂಡೆ ಸಹಾಯಕ ಕಾರ್ಯಪಾಲಕ ಅಭಿಯಂತರ ರಂಗಯ್ಯ ಘೋಷಿಸಿದರು. ನೂತನ ಅಧ್ಯಕ್ಷರನ್ನು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ ಸೇರಿದಂತೆ ಕಾರ್ಯಕರ್ತರು ಅಭಿನಂದಿಸಿದರು. ಈ ವೇಳೆ ಗ್ರಾಪಂ ಉಪಾಧ್ಯಕ್ಷೆ ಪ್ರೇಮಮ್ಮ, ಸದಸ್ಯರಾದ ಸರಸ್ವತಿ, ವೆಂಕಟೇಶ್, ಸುರೇಶ್, ಧರಣೇಶ್, ಸುನೀತಾ, ಶಶಿಕಲಾ, ಜಯಶ್ರೀ, ಶೋಭಾ, ಮೀನಾಕ್ಷಿ, ದೇವೇಗೌಡ, ಬಸವರಾಜು, ಮುಖಂಡರಾದ ವಿದ್ಯಾಶಂಕರ್, ರವಿಗೌಡ, ಗಗನ್, ದೇವರಾಜು, ಪಟೇಲ್ ನಟೇಶ್, ಹರೀಶ್, ವಸಂತ್, ಕುಮಾರ್ ಇದ್ದರು.



ಸರಗೂರಿನ 9ನೇ ವಾರ್ಡ್‌ನಲ್ಲಿ ನಡೆಯುತ್ತಿರುವ ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ಪಪಂ ಮುಖ್ಯಾಧಿಕಾರಿ ಕೆ.ಪಿ.ವಿಜಯಕುಮಾರಿ ಪರಿಶೀಲಿಸಿದರು. ಈ ವೇಳೆ ವಾರ್ಡ್ ಸದಸ್ಯ ಶ್ರೀನಿವಾಸ್, ಇಂಜಿನಿಯರ್ ಸುರೇಶ್, ಆರ್‌ಐ ಕೆ.ರಾಮು, ಕೇಸ್ ವರ್ಕರ್ ಕುಮಾರ್, ವಾಟರ್‌ಮನ್ ನಾಗೇಶ್, ಗುತ್ತಿಗೆದಾರ ಟಿ.ವೆಂಕಟೇಶ್, ಆನಂದ್ ಇತರರಿದ್ದರು.

ಹಕ್ಕುಚ್ಯುತಿ: ಪೌರಾಯುಕ್ತರ ವಿರುದ್ಧ ಡಿಸಿಗೆ ಹುಣಸೂರು ನಗರಸಭಾ ಅಧ್ಯಕ್ಷರ ದೂರು



ಹುಣಸೂರು, ಡಿ.26– ಅನುಮತಿ ಪಡೆಯದೇ ಪೌರಾಯುಕ್ತರು ಭೂಮಿ ಪೂಜೆ ನಡೆಸುವ ಮೂಲಕ ನನ್ನ ಹಕ್ಕುಚ್ಯುತಿಯಾಗುವಂತೆ ನಡೆದುಕೊಂಡಿದ್ದಾರೆ ಎಂದು ಆರೋಪಿಸಿ ಪೌರಾಯುಕ್ತೆ ಮಾನಸ ವಿರುದ್ಧ ಜಿಲ್ಲಾಧಿಕಾರಿಗೆ ನಗರಸಭಾಧ್ಯಕ್ಷೆ ಗೀತಾ ನಿಂಗರಾಜು ದೂರು ನೀಡಿದ್ದಾರೆ.

ನಗರಸಭೆ ವ್ಯಾಪ್ತಿಯಲ್ಲಿ ಎಸ್‌ಎಫ್‌ಸಿ ಯೋಜನೆ ಸೇರಿದಂತೆ ಸರ್ಕಾರದ ಯಾವುದೇ ಯೋಜನೆ ಮತ್ತು ಕಾರ್ಯಕ್ರಮಕ್ಕೆ ಕರ್ನಾಟಕ ಪುರಸಭಾ ಅಧಿನಿಯಮ 1964ರ ರೀತ್ಯಾ ಪಟ್ಟಣದ ಪ್ರಥಮ ಪ್ರಜೆಯಾದ ನಗರಸಭೆ ಅಧ್ಯಕ್ಷರ ಅನುಮತಿ, ಉಪಸ್ಥಿತಿ ಕಡ್ಡಾಯ. ಆದರೆ ಕಾಮಗಾರಿಗೆ ಚಾಲನೆ ನೀಡಲು ದಿನಾಂಕ ನಿಗದಿ ಮಾಡುವಾಗ ಪೌರಾಯುಕ್ತೆ ಮಾನಸ ಯಾವುದೇ ಸಮಾಲೋಚನೆ ನಡೆಸದೆ ಶಾಸಕರ ಮಾತು ಕೇಳಿ ದಿನಾಂಕ ನಿಗದಿ ಮಾಡಿದ್ದಾರೆ. ಅಲ್ಲದೆ ಡಿ.24 ರಂದು ನನ್ನ ಗೈರು ಹಾಜರಿಯಲ್ಲಿ ಎಸ್‌ಎಫ್‌ಸಿ ವಿಶೇಷ ಯೋಜನೆಯಡಿ 3 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗೆ ಚಾಲನೆ ನೀಡಿದ್ದಾರೆ. ಆ ಮೂಲಕ ಅಧ್ಯಕ್ಷರ ಗೌರವಕ್ಕೆ ಧಕ್ಕೆ ತಂದಿದ್ದಾರೆ ಎಂದು ಆರೋಪಿಸಿದ್ದಾರೆ.

ಪೌರಾಯುಕ್ತೆ ಮಾನಸ ಸ್ಥಳೀಯರಾಗಿದ್ದು, ಶಾಸಕ ಮಂಜುನಾಥ್‌ರ ಕೈಗೊಂಬೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನನ್ನ ಸ್ಥಾನಕ್ಕೆ ಗೌರವವಿಲ್ಲದಂತಾಗಿದ್ದು, ಒಂದು ಬಿಡುಗಾಸಿನ ಬೆಲೆ ಇಲ್ಲದಂತಾಗಿದೆ. ಅಲ್ಲದೇ ಕ್ಷೇತ್ರದ ಶಾಸಕರು ಅಧ್ಯಕ್ಷರ ಹುದ್ದೆಯನ್ನು ಸ್ವತಂತ್ರವಾಗಿ ನಿರ್ವಹಿಸಲು ಬಿಡುತ್ತಿಲ್ಲ. ಇದರಿಂದ ಸಾರ್ವಜನಿಕರ ಕೆಲಸ ಮಾಡಲು ಆಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ನಾನು ಖುದ್ದು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ನನ್ನ ಹಕ್ಕುಚ್ಯುತಿಯಾಗಿದೆ ಎಂದು ಆರೋಪಿಸಿ ಪೌರಾಯುಕ್ತರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದೇನೆ ಎಂದು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ರಾಜೀನಾಮೆ ವಾಪಸ್: ಶಾಸಕ ಮಂಜುನಾಥ್ ಅವರ ಮಾತಿನಂತೆ ನನ್ನ ಅಧ್ಯಕ್ಷ ಸ್ಥಾನಕ್ಕೆ ಡಿ.21ರಂದು ರಾಜೀನಾಮೆ ನೀಡಿದ್ದೆ. ಆದರೆ ಜಿಲ್ಲಾಧಿಕಾರಿಗಳು ರಾಜೀನಾಮೆ ಅಂಗೀಕಾರ ಮಾಡಿರಲಿಲ್ಲ. ಡಿ.26 ರಂದು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ನನ್ನ ರಾಜೀನಾಮೆ ಪತ್ರವನ್ನು ವಾಪಸ್ ಪಡೆದಿರುವೆ ಎಂದು 'ಮೈಸೂರು ಮಿತ್ರ'ನಿಗೆ ನಗರಸಭಾಧ್ಯಕ್ಷೆ ಗೀತಾ ತಿಳಿಸಿದರು.

ಅಧ್ಯಕ್ಷರ ಹೇಳಿಕೆ ಸತ್ಯಕ್ಕೆ ದೂರ: ಡಿ.16ರಂದು ನಡೆದ ಸಭೆಗೆ ಅಧ್ಯಕ್ಷೆ ಗೀತಾ ಗೈರಾಗಿದ್ದರು. ಅವರ ಗೈರು ಹಾಜರಿಯಲ್ಲಿ ಶಾಸಕರು ಮತ್ತು ಸದಸ್ಯರು ಕಾರ್ಯಕ್ರಮದ ದಿನಾಂಕ ನಿಗದಿ ಮಾಡಿರುತ್ತಾರೆ. ನಂತರ ಅಧ್ಯಕ್ಷರ ಮನೆಗೆ ತೆರಳಿ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದೆ. ಈ ವಿಷಯದಲ್ಲಿ ಅಧ್ಯಕ್ಷರ ಆರೋಪ ಸತ್ಯಕ್ಕೆ ದೂರ ಎಂದು ನಗರಸಭೆ ಪೌರಾಯುಕ್ತೆ ಮಾನಸ ಸ್ಪಷ್ಟಪಡಿಸಿದರು.

ನೇಮಕ



ಮಲ್ಕುಂಡಿ, ಡಿ.26– ನಂಜನಗೂಡು ವಿಧಾನಸಭಾ ಕ್ಷೇತ್ರದ ಹುಲ್ಲಹಳ್ಳಿ ಬ್ಲಾಕ್ ಸಮಿತಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಹೆಡಿಯಾಲ ಗ್ರಾಪಂ ಸದಸ್ಯ ಗೋವಿಂದರಾಜು ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಾಲಬಾಧೆ: ರೈತ ಆತ್ಮಹತ್ಯೆ



ನಂಜನಗೂಡು,ಡಿ.26–ಸಾಲಬಾಧೆ ತಾಳಲಾರದೇ ರೈತರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕೆಂಪಿಸಿದ್ದನಹುಂಡಿ ಗ್ರಾಮದಲ್ಲಿ ಸೋಮವಾರ ನಡೆದಿದೆ. ಗ್ರಾಮದ ನಿವಾಸಿ ಸಣ್ಣಪ್ಪ(50) ಆತ್ಮಹತ್ಯೆ ಮಾಡಿಕೊಂಡವರು. ತಮ್ಮ 20 ಗುಂಟೆ ಜಮೀನಿನಲ್ಲಿ ಬೆಳೆದಿದ್ದ ಬೆಳೆ ಸಿಗದ ಹಿನ್ನೆಲೆಯಲ್ಲಿ ಕೃಷಿಗಾಗಿ ಮಾಡಿದ್ದ ಕೈ ಸಾಲ ತೀರಿಸಲಾಗದೇ ಮನನೊಂದು ಜಮೀನಿನಲ್ಲಿ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದು ಎಸ್‌ಐ ಶಿವನಂಜಶೆಟ್ಟಿ ತಿಳಿಸಿದ್ದಾರೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ವೇದ (ಕ): ಬೆ.7ಕ್ಕೆ, ಬೆ.10.05ಕ್ಕೆ, ಮ.1.05ಕ್ಕೆ, ಕಾಂತಾರ (ಕ): ಸಂ.4.15ಕ್ಕೆ, ಧಮಾಕ (ತೆ): ರಾ.7.10ಕ್ಕೆ, ರಾ.10ಕ್ಕೆ.

ಸ್ಕ್ರೀನ್ 2 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.50ಕ್ಕೆ, ಕನೆಕ್ಟ್ (ತ): ಮ.1.40ಕ್ಕೆ, 18 ಪೇಜಸ್ (ತೆ): ಸಂ.4.05ಕ್ಕೆ, ವೇದ (ಕ): ರಾ.7.05ಕ್ಕೆ, ಕಾಪ (ಮ): ರಾ.10.05ಕ್ಕೆ.

ಸ್ಕ್ರೀನ್ 3 ಹೊಸ ದಿನಚರಿ (ಕ): ಬೆ.10.45ಕ್ಕೆ, ಸರ್ಕಸ್ (ಹಿಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ, ವಿಶಾಲ್ ಇನ್ ಲಾಠಿ (ತ): ಸಂ.4.10ಕ್ಕೆ.

ಸ್ಕ್ರೀನ್ 4 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10.55ಕ್ಕೆ, ಮ.2.35ಕ್ಕೆ, ಸಂ.6.15ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ವೇದ (ಕ): ಬೆ.9.55ಕ್ಕೆ, ಮ.1.05ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ, 18 ಪೇಜಸ್ (ತೆ): ಸಂ.4.15ಕ್ಕೆ.

ಸ್ಕ್ರೀನ್ 2 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.11ಕ್ಕೆ, ಮ.2.50ಕ್ಕೆ, ಸಂ.6.40ಕ್ಕೆ, ರಾ.10.30ಕ್ಕೆ,

ಸ್ಕ್ರೀನ್ 3 ಕಾಂತಾರ (ಕ): ಬೆ.11.10ಕ್ಕೆ, ಡಾ.56 (ಕ): ಮ.2.05ಕ್ಕೆ, ವಿಜಯಾನಂದ (ಕ): ಸಂ.4.25ಕ್ಕೆ, ಮೈಸೂರು ಡೈರಿಸ್ (ಕ): ರಾ.7.40ಕ್ಕೆ, ಪಂಚತಾರಂ (ತೆ): ರಾ.10.10ಕ್ಕೆ.

ಸ್ಕ್ರೀನ್ 4 ಗುರುತುಂದ ಶೀತಾಕಾಲಂ (ತೆ): ಬೆ.10.25ಕ್ಕೆ, ರಾ.7.20ಕ್ಕೆ, ನೈ ಸೇಕರ್ ರಿಟರ್ನ್ಸ್ (ತ): ಮ.1.15ಕ್ಕೆ, ಕಾಂತಾರ (ಕ): ಸಂ.4.15ಕ್ಕೆ, ವರಲಾಹು ಮುಕ್ಕಿಯಂ (ತ): ರಾ.10.20ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.

ಸ್ಕ್ರೀನ್ 2 ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ

ಸ್ಕ್ರೀನ್ 3 ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ

ಸ್ಕ್ರೀನ್ 4 ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವೇದ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಾಂತಾರ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವೇದ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟೆಂಪರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ವೇದ (ಕ)	4 ಪ್ರದರ್ಶನಗಳು
ಸಂಗಂ	
ಲಾಠಿ (ತ)	4 ಪ್ರದರ್ಶನಗಳು
ಲಿಡೋ	
ಸರ್ಕಸ್ (ಹಿ)	4 ಪ್ರದರ್ಶನಗಳು
ತಿಬ್ಬಾದೇವಿ	
ವೇದ (ಕ)	4 ಪ್ರದರ್ಶನಗಳು
ಪ್ರಭಾ	
ಕಾಂತಾರ (ಕ)	4 ಪ್ರದರ್ಶನಗಳು

ವಸತಿ ಶಾಲೆಯಲ್ಲಿ ಬಾಲಕ ಸಾವು ಪ್ರಕರಣ: ಪ್ರಾಂಶುಪಾಲ ಅಮಾನತು

ನಂಜನಗೂಡು, ಡಿ.26– ತಾಲೂಕಿನ ಮಹದೇವನಗರ ಮೊರಾರ್ಜಿ ವಸತಿ ಶಾಲೆಯಲ್ಲಿ ವಿದ್ಯುತ್ ಸ್ಪರ್ಶದಿಂದ ಬಾಲಕ ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಸತಿ ಶಾಲೆ ಪ್ರಾಂಶುಪಾಲ ಎಲ್.ಮಲ್ಲಿಕಾರ್ಜುನ ಅವರನ್ನು ಅಮಾನತುಗೊಳಿಸಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕ ಉಮೇಶ್ ದೇಸಾಯಿ ಆದೇಶ ಹೊರಡಿಸಿದ್ದಾರೆ.

ವಸತಿ ಶಾಲೆ ಪ್ರಾಂಶುಪಾಲ ಎಲ್.ಮಲ್ಲಿಕಾರ್ಜುನ ಅವರ ಅಸಮರ್ಪಕ ಕಾರ್ಯನಿರ್ವಹಣೆ ಹಾಗೂ ಬೇಜವಾಬ್ದಾರಿಯಿಂದ ಬಾಲಕ ವಿದ್ಯುತ್ ಸ್ಪರ್ಶಿಸಿ ಮೃತಪಟ್ಟಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಅಮಾನತುಗೊಳಿಸಲಾಗಿದೆ. ಆಡಳಿತಾತ್ಮಕ ಹಿತದೃಷ್ಟಿಯಿಂದ ವಸತಿ ಶಾಲೆ ಗಣಿತ ಶಿಕ್ಷಕ ಜಗನ್ನಾಥ ಅವರನ್ನು ಪ್ರಭಾರ ಪ್ರಾಂಶುಪಾಲರಾಗಿ ನೇಮಿಸಲಾಗಿದೆ ಎಂದು ತಿಳಿಸಿದ್ದಾರೆ.

ತಿ.ನರಸೀಪುರ ಪುರಸಭೆಗೆ ಟಿ.ಎಂ.ನಂಜುಂಡಸ್ವಾಮಿ ಅಧ್ಯಕ್ಷ

ತಿ.ನರಸೀಪುರ ಡಿ.26– ಕಾಂಗ್ರೆಸ್ ವಶದಲ್ಲೇ ಮುಂದುವರೆದಿರುವ ತಿ.ನರಸೀಪುರ ಪುರಸಭೆ ನೂತನ ಅಧ್ಯಕ್ಷರಾಗಿ ಟಿ.ಎಂ.ನಂಜುಂಡಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಎಸ್.ಮದನ್‌ರಾಜ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಸೋಮವಾರ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ 11ನೇ ವಾರ್ಡ್ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಗೊಂಡರು.

ಕಾಂಗ್ರೆಸ್‌ನ ಬಾದಾಮಿ ಮಂಜು, ಮೆಡಿಕಲ್ ನಾಗರಾಜು, ನಂಜುಂಡಸ್ವಾಮಿ ಸೇರಿದಂತೆ ಮೂವರು ಸದಸ್ಯರು ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳಾಗಿದ್ದರು. ಈ ಹಿನ್ನೆಲೆಯಲ್ಲಿ ಪುರಸಭಾಧ್ಯಕ್ಷ ಸ್ಥಾನದ ಚುನಾವಣೆ ಭಾರೀ ಕುತೂಹಲ ಮೂಡಿಸಿತ್ತು. ಆದರೆ ನಂಜುಂಡಸ್ವಾಮಿ ಅವರಿಗೆ ಅಧ್ಯಕ್ಷ ಗಾದಿ ಒಲಿದಿದ್ದು, ಚುನಾವಣೆಯಲ್ಲಿ ಒಟ್ಟು 23 ಮಂದಿ ಚುನಾಯಿತ ಸದಸ್ಯರ ಪೈಕಿ 17 ಮಂದಿ ಹಾಗೂ ಐವರು ನಾಮ ನಿರ್ದೇಶಿತ ಸದಸ್ಯರ ಪೈಕಿ ಮೂವರು ಭಾಗವಹಿಸಿ ನೂತನ ಅಧ್ಯಕ್ಷರ ಅವಿರೋಧ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಚುನಾವಣಾಧಿಕಾರಿಯಾಗಿ ತಹಸೀಲ್ದಾರ್ ಸಿ.ಜಿ.ಗೀತಾ, ಸಹಾಯಕ ಚುನಾವಣಾಧಿಕಾರಿಯಾಗಿ ಶಿರಸ್ತೇದಾರ್ ಪ್ರಭುರಾಜ್, ಪುರಸಭೆ ಮುಖ್ಯಾಧಿಕಾರಿ ಹೆಚ್.ಆರ್.ಬಸವರಾಜ್ ಕಾರ್ಯನಿರ್ವಹಿಸಿದರು. ನೂತನ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ಮಾತನಾಡಿ, ಪುರಸಭೆ ಆಡಳಿತ ಮತ್ತು ಅವ್ಯವಸ್ಥೆ ಸರಿಪಡಿಸುತ್ತೇನೆ. ಗುಂಡಿ ಬಿದ್ದ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ ಗಮನ ಹರಿಸುತ್ತೇನೆ. ಎಲ್ಲಾ ಸದಸ್ಯರ ಸಹಕಾರ ಪಡೆದು ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಅಧ್ಯಕ್ಷನಾಗಲು ಸಹಕರಿಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಡಾ.ಯತೀಂದ್ರ, ಯುವ ಮುಖಂಡ ಸುನೀಲ್ ಬೋಸ್ ಹಾಗೂ ಎಲ್ಲಾ ಸದಸ್ಯರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಈ ವೇಳೆ ಉಪಾಧ್ಯಕ್ಷೆ ನಾಗರತ್ನ ಮಾದೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಅಹಮ್ಮದ್ ಸಯೀದ್, ಸದಸ್ಯರಾದ ಬಿ.ಬೇಬಿ ಹೇಮಂತ್ ಕುಮಾರ್, ಸಿ.ಪ್ರಕಾಶ್, ಜಿ.ರೂಪಶ್ರೀ, ಆರ್.ನಾಗರಾಜು, ಬಿ.ವಸಂತ, ಎಂ.ಸಿದ್ದು, ಆರ್.ಅರ್ಜುನ್, ಮಾದೇವಿ, ಎಂ.ರಾಜೇಶ್ವರಿ ರಾಘವೇಂದ್ರ, ಪ್ರೇಮ ಮರಯ್ಯ, ಬಾದಾಮಿ ಮಂಜು, ನಾಮನಿರ್ದೇಶಿತ ಸದಸ್ಯರಾದ ಕೆ.ನಂಜುಂಡಸ್ವಾಮಿ, ಚಿಕ್ಕಮಹದೇವ, ಕೆ.ಗಣೇಶ್, ವರುಣಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಕಾರ್ಯಾಧ್ಯಕ್ಷ ಮಾದೇಶ್, ಪಪಂ ಮಾಜಿ ಅಧ್ಯಕ್ಷ ಎಸ್.ಪಿ.ಕನಕರಾಜು, ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು, ಮುಖಂಡರಾದ ಕಾಂತರಾಜು, ಗುರುಸ್ವಾಮಿ, ಹಾಳೇಗೌಡ, ಶ್ರೀಕಂಠ, ಎಂ.ಕೆ.ಸಹದೇವ, ಬಣ್ಣ ಬಸವರಾಜು, ಎಲ್‌ಐಸಿ ಲಿಂಗರಾಜು ಹಾಗೂ ಇನ್ನಿತರರಿದ್ದರು.



ಚುನಾವಣೆ ಮುಂದೂಡಲು ಸದಸ್ಯರ ಆಗ್ರಹ

ಪುರಸಭಾಧ್ಯಕ್ಷರ ಚುನಾವಣೆ ದಿನಾಂಕ 2022 ಡಿ.26ರ ಬದಲು 2023ರ ಡಿ.26 ಎಂದು ನಮೂದಾಗಿದ್ದರಿಂದ ನಮೂದಿತ ದಿನದಂದೇ ಚುನಾವಣೆ ನಡೆಸಬೇಕು. ಅಲ್ಲಿವರೆಗೂ ಚುನಾವಣೆ ಮುಂದೂಡಬೇಕೆಂದು ಬಿಜೆಪಿ ಸದಸ್ಯರಾದ ಎಸ್.ಕೆ.ಕಿರಣ್, ಎಲ್. ಮಂಜುನಾಥ್, ಶೋಭಾರಾಣಿ ಹಾಗೂ ತೇಜಸ್ವಿನಿ ಅವರು ತಹಸೀಲ್ದಾರ್ ಸಿ.ಜಿ.ಗೀತಾ ಅವರನ್ನು ಆಗ್ರಹಿಸಿದರು. ಸಣ್ಣ ಪ್ರಮಾದಕ್ಕೆ ಚುನಾವಣೆ ಮುಂದೂಡಲು ಅಧಿಕಾರಿಗಳು ನಿರಾಕರಿಸಿದ್ದರಿಂದ ಆಕ್ಷೇಪ ವ್ಯಕ್ತಪಡಿಸಿದ ಸದಸ್ಯರೆಲ್ಲರೂ ಚುನಾವಣೆಯಿಂದ ದೂರ ಉಳಿದರು.


ಚಾಮುಂಡೇಶ್ವರಿ ವಿಧಾನಸಭಾಕ್ಷೇತ್ರದ ಕಾಂಗ್ರೆಸ್ ಮುಖಂಡರಾದ
ಹಾಗೂ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ
ಶ್ರೀ ರಾಕೇಶ್ ಪಾಪಣ್ಣರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಪೈ॥ ತ್ಯಾಗರಾಜ್ .ಎಸ್ (ಬೋಗಾದಿ)
ಚಾಮುಂಡೇಶ್ವರಿ ಕ್ಷೇತ್ರದ ಪ್ರಚಾರ ಸಮಿತಿ ಅಧ್ಯಕ್ಷರು
ತ್ಯಾಗು ಏಜೆನ್ಸೀಸ್ ಮಾಲೀಕರು ಹಾಗೂ
ಕಾಂಗ್ರೆಸ್ ಮುಖಂಡರು
ರಾಕೇಶ್ ಪಾಪಣ್ಣ ಅಭಿಮಾನಿ ಬಳಗ ಹಾಗೂ ಬೋಗಾಧಿ ಗ್ರಾಮಸ್ಥರು